# ಪ್ರಸಾದ

ಮಾಸಿಕ

ಸಂಪುಟ 38 ಸಂಚಿಕೆ 12 ಡಿಸೆಂಬರ್ 2023



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಪ್ರಸಾದ

ಸಂಪುಟ 38 : ಸಂಚಿಕೆ 12 ಡಿಸೆಂಬರ್ 2023

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004




**ಸಂಸ್ಥಾಪಕರು**

ಶ್ರೀಮನ್ಮಹಾರಾಜ  ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನವನ್ನು ಸುತ್ತೂರು, ಸಿರಿಗೆರೆ ಹಾಗೂ ಶ್ರೀಶೈಲ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಶಿವಕುಮಾರ್ ದೇವರಮನೆ, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ವಚನಾನಂದ ಶ್ರೀಗಳು, ಶ್ರೀ ಶಾಮನೂರು ಶಿವಶಂಕರಪ್ಪ, ಶ್ರೀ ಈಶ್ವರ ಬಿ. ಖಂಡ್ರೆ, ಶ್ರೀ ಅಣಬೇರು ರಾಜಣ್ಣ ಹಾಗೂ ಶ್ರೀ ಜಿ.ಎಂ. ಸಿದ್ಧೇಶ್ವರ ಮೊದಲಾದವರು ಗಳಿದ್ದಾರೆ (23 ಡಿಸೆಂಬರ್ 2023)


**ದಶ ವಾರ್ಷಿಕ ಚಂದಾ : 500/-  *  ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ನಿತ್ಯಾನಿತ್ಯ 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಆಶಯ 13
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 16
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಮಹದೇವಪುರ – ಕ್ಷೇತ್ರ ಅಧ್ಯಯನ 23
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಸರ್ವಜ್ಞ ವಚನ ವ್ಯಾಖ್ಯಾನ 29
ಪ್ರೊ. ಮೊರಬದ ಮಲ್ಲಿಕಾರ್ಜುನ

ವಚನ ಚಳವಳಿ : ಒಂದು ಚಿಂತನೆ 34
ಎಚ್.ಎಸ್. ಸಿದ್ಧಗಂಗಪ್ಪ

ಯೋಗದ ಮಹತ್ವ 46
ಸಂಗಮೇಶ ಎನ್. ಜವಾದಿ

ಗ್ರಂಥ ಪರಾಮರ್ಶೆ 50

ವಾರ್ತಾ ವಿಹಾರ 51
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63


ಭಕ್ತಿ-ಜ್ಞಾನ-ವೈರಾಗ್ಯ ತಪ್ಪದೆ
ಷಟ್‌ಸ್ಥಲಮಾರ್ಗದ ಇರವು ತಪ್ಪದೆ
ಜ್ಞಾನ ಕ್ರೀಗಳಲ್ಲಿ ಪ್ರೇಮ ತಪ್ಪದೆ
ಶರಣಸತಿ-ಲಿಂಗಪತಿಯಾದ ಭಾವ ತಪ್ಪದೆ
ಇಷ್ಟ-ಪ್ರಾಣ-ಭಾವಲಿಂಗದ ಪೂಜೆ ತಪ್ಪದೆ
ಷಡ್‌ವಿಧ ಲಿಂಗಂಗಳಲ್ಲಿ ಅರ್ಪಿತಾವಧಾನ ತಪ್ಪದೆ
ತೀರ್ಥಪ್ರಸಾದದಲ್ಲಿ ಒಯ್ಯಾರ ತಪ್ಪದೆ
ಮಂತ್ರಂಗಳಂ ಒಡವೆರೆದು ಲಿಂಗಸಂಧಾನ ತಪ್ಪದೆ,
ಹಿಡಿದ ವ್ರತಂಗಳಲ್ಲಿ ನಿಷ್ಠೆ ತಪ್ಪದೆ–
ನಡೆದಂತೆ ನುಡಿದು–ನುಡಿದಂತೆ ನಡೆವ ಭಾವ ತಪ್ಪದೆ,
ದ್ವೈತಾದ್ವೈತವ ನೂಂಕಿ (=ತಿರಸ್ಕರಿಸಿ)
ಬರಿಯ ವೈರಾಗ್ಯವನೊಪ್ಪುಗೊಳ್ಳದೆ,
ನಿಜವಿರಕ್ತಿಯ ಹೊಲಬುದಪ್ಪದೆ
ಪಂಚೈವರೊಂದಾಗಿ ಸದ್ಯೋನ್ಮುಕ್ತಿಗೆ ಮನವನಿಟ್ಟು–
ಅರ್ತಿಯಿಂದಾಚರಿಸುವರಯ್ಯ ನಿಮ್ಮ ಶರಣರು
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.

– ಘನಲಿಂಗಿದೇವರು

# ಗುರುವಾಣಿ

ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವ ಪ್ರಕೃತಿಜೈರ್ಗುಣೈಃ ॥

(ಭಗವದ್ಗೀತೆ ಅಧ್ಯಾಯ 3, ಶ್ಲೋಕ 4–5)

ಕುರುಕ್ಷೇತ್ರದಲ್ಲಿ ನಿಂತ ಅರ್ಜುನನು ಕೃಷ್ಣನಿಗೆ ಅವನ ಮನಸ್ಸಿನಲ್ಲಿ ಮೂಡಿದ ಒಂದು ಸಂಶಯವನ್ನು ಬಿನ್ನವಿಸಿಕೊಳ್ಳುತ್ತಾನೆ. ಜ್ಞಾನ ದೊಡ್ಡದೊ? ಕರ್ಮ ದೊಡ್ಡದೊ? ಕರ್ಮ ಮಾಡುವುದರಿಂದ ಪಾಪ–ಪುಣ್ಯ; ಸುಖ–ದುಃಖ ಹೀಗೆ ಪರಸ್ಪರ ವಿರುದ್ಧವಾದ ಫಲಾಪಲಗಳು ಒಟ್ಟಿಗೆ ಲಭಿಸುತ್ತವೆ. ಆದರೆ ಜ್ಞಾನಯೋಗದಲ್ಲಿ ಈ ದ್ವಂದ್ವವಿರುವುದಿಲ್ಲ. ಅಲ್ಲಿ ಕೇವಲ ಪುಣ್ಯ, ಸುಖ ಮಾತ್ರ ಪ್ರಾಪ್ತವಾಗುತ್ತದೆ. ಅಂದಮೇಲೆ ಜ್ಞಾನಯೋಗದಲ್ಲಿಯೇ ಮನುಷ್ಯ ನಿರತನಾಗುವುದು ಉಚಿತವಲ್ಲವೆ? ಜ್ಞಾನವೇ ಸರ್ವಶ್ರೇಷ್ಠವಾದುದು ಎಂದರ್ಥವಲ್ಲವೆ? ಕರ್ಮದ ದುರ್ಗಮ ದಾರಿಯಲ್ಲಿ ನಡೆದು, ದ್ವಂದ್ವ ಫಲವನ್ನು ಪಡೆಯುವುದು ವ್ಯರ್ಥವಲ್ಲವೆ? ಎಂದು ಅರ್ಜುನನು ಕೇಳುತ್ತಾನೆ.

ಆಗ ಕೃಷ್ಣನು ಉತ್ತರ ನೀಡುತ್ತ, ಮೇಲಿನ ಶ್ಲೋಕಗಳಲ್ಲಿ "ಮನುಷ್ಯನು ಕರ್ಮವನ್ನು ಆರಂಭ ಮಾಡದೆ ಇರುವಷ್ಟರಿಂದಲೇ ಆತ್ಯಂತಿಕವಾದ ನಿಷ್ಕಾಮಸ್ಥಿತಿಯನ್ನು ಪಡೆಯಲಾರ. ಅಷ್ಟೇ ಅಲ್ಲದೆ ಆರಂಭಿಸಿರುವ ಕರ್ಮವನ್ನು ಬಿಟ್ಟ ಮಾತ್ರದಿಂದ ಭಗವತ್ಪ್ರಾಪ್ತಿರೂಪವಾದ ಪರಮಸಿದ್ಧಿಯನ್ನು ಹೊಂದಲಾರ. ಜ್ಞಾನಮಾರ್ಗ ಅಥವಾ ನಿಷ್ಕಾಮಕರ್ಮಮಾರ್ಗ ಸರಿಯೆನಿಸಿದರೂ ಕರ್ಮವು ಯಾವಾಗಲೂ ಮಾಡತಕ್ಕದ್ದೇ ಆಗಿರುತ್ತದೆ. ಯಾರೇ ಆಗಲಿ, ಎಂದೂ ಕೂಡ ಒಂದು ಗಳಿಗೆಯೂ ಸಹ ಕರ್ಮರಹಿತರಾಗಿ (ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗದೆ) ಇರಲಾಗುವುದಿಲ್ಲ. ಏಕೆಂದರೆ ಎಲ್ಲರೂ ಪ್ರಕೃತಿಸಹಜವಾಗಿ, ಅದಕ್ಕೆ ಅಧೀನವಾಗಿ ಕರ್ಮವನ್ನು ಮಾಡುತ್ತಿರುತ್ತಾರೆ. ಪ್ರಕೃತಿ ಇರುವವರೆಗೂ ಅದರ ಗುಣಸ್ವಭಾವದಿಂದ ಯಾರೂ, ಯಾವುದೂ ಹೊರತಾಗುವುದಿಲ್ಲ."

ಭಗವದ್ಗೀತೆಯ ಈ ಮಾತಿನಲ್ಲಿ ಒಂದು ವಿಷಯ ಅತ್ಯಂತ ಸ್ಪಷ್ಟವಿದೆ. ಜ್ಞಾನವೂ ಕೂಡ ಕರ್ಮದಿಂದ ಹೊರತಲ್ಲ. ಅದು ಕರ್ಮದ ಅಧೀನ. ಕರ್ಮ ಎನ್ನುವುದು

ದೈಹಿಕವಾಗಿ ಮತ್ತು ಮಾನಸಿಕವಾಗಿ ಜರುಗುವ ನಿರಂತರವಾದ ಪ್ರಕ್ರಿಯೆ. ಮನಸ್ಸು ಸಂಕಲ್ಪಿಸದೆ ದೇಹ ಯಾವುದೇ ಕಾರ್ಯದಲ್ಲಿ ಉದ್ಯುಕ್ತವಾಗದು. ವ್ಯಕ್ತಿಯು ತಾನು ನೋಡುವ ವಸ್ತುವಿನ ಬಗೆಗೆ ಹೊಂದುವ ಅಭಿಪ್ರಾಯ ಹಾಗೂ ಅದರ ಕುರಿತ ಪ್ರತಿಕ್ರಿಯೆಗೆ ಮನಸ್ಸು ಕಾರಣ. ಆದುದರಿಂದ ಬಹಿರಂಗದಲ್ಲಿ ತೋರುವ ದೈಹಿಕ ಕ್ರಿಯೆಯ ಹಿಂದೆ ಮನಸ್ಸಿನ ಪ್ರಚೋದನೆಯೂ ಇರುತ್ತದೆ.

ಜ್ಞಾನವೆಂಬುದು ಕೇವಲ ಮನಸ್ಸಿನಲ್ಲಿ ಮೂಡಿ, ಅಲ್ಲಿಯೇ ಲಯವಾಗುತ್ತದೆ ಎನ್ನುವುದು ಸೂಕ್ತವಲ್ಲ. ದೈಹಿಕವಾಗಿ ಯಾವ ಕ್ರಿಯೆಯನ್ನೂ ಮಾಡದೆ ಕೇವಲ ಮನಸ್ಸಿನಲ್ಲಿ ಆಲೋಚಿಸುತ್ತಿದ್ದರೆ ಆಗ ಕರ್ಮದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದುಕೊಂಡರೆ ಅದೂ ಸರಿಯಲ್ಲ. ಈ ಕಾರಣದಿಂದಲೇ ಜೈನ ದರ್ಶನದಲ್ಲಿ 'ಮನಸ್ಸಿನಲ್ಲಿ ನೆನೆಯುವ ಕ್ರಿಯೆ ಕೂಡ ಕರ್ಮಫಲವನ್ನು ನೀಡುತ್ತದೆ' ಎಂದಿದೆ. ಜನ್ನನ 'ಯಶೋಧರ ಚರಿತೆ'ಯಲ್ಲಿ, ಯಶೋಧರನ ಮನಸ್ಸಿನಲ್ಲಿ ಕೊಲ್ಲುವ ಬಯಕೆ ಕೇವಲ ಕ್ಷಣ ಮಾತ್ರ ಬಂದ ಮಾತ್ರಕ್ಕೆ ಅವನು ಕರ್ಮಫಲವನ್ನು ಅನುಭವಿಸಬೇಕಾಯಿತು.

ಒಮ್ಮೆ ಒಬ್ಬ ಸಂನ್ಯಾಸಿ ಮತ್ತು ಆತನ ಶಿಷ್ಯ ಇಬ್ಬರೂ ಪ್ರಯಾಣ ಹೊರಟಿದ್ದರು. ದಾರಿಯಲ್ಲಿ ಒಂದು ನದಿ ಹರಿಯುತ್ತಿತ್ತು. ನದಿಯ ದಡದಲ್ಲಿ ನಿಂತಿದ್ದ ಮಹಿಳೆಯೊಬ್ಬಳು ಸಂನ್ಯಾಸಿಯನ್ನು ಕುರಿತು "ಸ್ವಾಮಿ, ನಾನು ಕೂಡ ನದಿ ದಾಟಿ ಆ ಕಡೆ ಹೋಗಬೇಕಾಗಿದೆ. ನದಿಯ ನೀರು ಹೆಚ್ಚಾಗಿದೆ, ನನಗೆ ಹೆದರಿಕೆಯಾಗುತ್ತಿದೆ. ದಯಮಾಡಿ ನನ್ನನ್ನು ದಾಟಿಸುವಿರ?" ಎಂದಳು. ಸನ್ಯಾಸಿಯು ಅವನ ಕೈ ಹಿಡಿದುಕೊಂಡು ದಾಟಲು ಹೇಳಿದನು. ಆಕೆ ಸ್ವಲ್ಪ ದೂರ ನದಿ ದಾಟುವಾಗ ಮತ್ತಷ್ಟು ಹೆದರಿದಳು. ಆಗ ಸನ್ಯಾಸಿ ಅವಳನ್ನು ಎತ್ತಿಕೊಂಡು ನದಿಯನ್ನು ದಾಟಿಸಿದನು. ಆಕೆ ಸನ್ಯಾಸಿಗೆ ನಮಸ್ಕರಿಸಿ ತೆರಳಿದಳು. ಅನಂತರ ಸಂನ್ಯಾಸಿ ಮತ್ತು ಆತನ ಶಿಷ್ಯ ದಾರಿಯಲ್ಲಿ ಹೋಗತೊಡಗಿದರು. ಶಿಷ್ಯನಿಗೆ ಏನೋ ತಳಮಳ. ಹೇಗೆ ಕೇಳುವುದು ಎಂದು ಚಿಂತಿಸಿ, ಚಿಂತಿಸಿ ಆತನು ನಿರ್ವಿಣ್ಣನಾದನು. ಇದನ್ನು ಗಮನಿಸಿದ ಗುರುಗಳು, "ಏನೋ ಕೇಳಲು ನೀವು ತವಕ ಪಡುತ್ತಿರುವಂತಿದೆಯಲ್ಲ?" ಎಂದರು. ಅದಕ್ಕೆ ಶಿಷ್ಯ, "ಗುರುಗಳೇ, ಒಂದು ಪ್ರಶ್ನೆ ನನ್ನನ್ನು ಆಗಿನಿಂದಲೂ ಕಾಡುತ್ತಿದೆ. ತಾವು ಸನ್ಯಾಸಿಗಳು, ಅಂತಹದರಲ್ಲಿ ಆ ಮಹಿಳೆಯನ್ನು ಎತ್ತಿಕೊಂಡು ನದಿ ದಾಟಿಸಿದಿರಲ್ಲ, ಅದು ಸರಿಯೆ?" ಎಂದನು. ಆಗ ಗುರುಗಳು ಬಹಳ ಮಾರ್ಮಿಕವಾಗಿ, "ನಾನು ಆಕೆಯನ್ನು ನನ್ನ ಹೆಗಲಿನಿಂದ ಇಳಿಸಿ ಬಹಳ ಸಮಯವಾಯಿತು. ನೀನೇಕೆ ಇನ್ನೂ ಹೊತ್ತುಕೊಂಡಿದ್ದೀಯೆ, ಇಳಿಸು" ಎಂದರು. ಬಹಳಷ್ಟು ಮಾನಸಿಕ ಕ್ರಿಯೆಗಳು ದೈಹಿಕ ಕ್ರಿಯೆಗಿಂತಲೂ ತಾಪದಾಯಕವಾದುವು. ಆದುದರಿಂದ ಜ್ಞಾನಮಾರ್ಗ ಪ್ರಕೃತಿಗುಣಕರ್ಮದಿಂದ ಹೊರತಾದುದಲ್ಲ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ನೆನೆಯದೆ ಕಾಣದೆ ಕೇಳದೆ
ತನುವಿನ ಪೊಲ್ಲಮೆಯನರಿದು ಮರೆಯದೆ ತೊರೆಯಲ್ ।
ಮನಮುಳ್ಳೊಡೆ ಜೀವಕ್ಕೀ
ತನುವಿರೆ ವೈರಾಗ್ಯಕಾರಣಂ ಪೆರತುಂಟೇ ॥

ರನ್ನ ಮಹಾಕವಿಯ ಅಜಿತ ತೀರ್ಥಂಕರ ಪುರಾಣದ ದ್ವಿತೀಯಾಶ್ವಾಸದ ೫೨ನೇ ಪದ್ಯದಲ್ಲಿ ಮನುಷ್ಯನ ದೇಹವೇ ಎಲ್ಲ ನೋವಿನ, ದುಃಖದ ಮೂಲ ಎಂಬ ವಿವರಣೆ ಇದೆ. ಮೋಕ್ಷ ಬಯಸುವವನಿಗೆ ಹೊರಗಿನ ಯಾವುದೋ ದಿವ್ಯತೆ ಕಾಣಬೇಕಾಗಿಲ್ಲ. ಘಟನೆ ಸಂಭವಿಸಬೇಕಾಗಿಲ್ಲ. ಯಾರೋ ಎದುರು ನಿಂತು ಪ್ರತ್ಯಕ್ಷವಾಗಿ ಬೋಧಿಸಬೇಕಾಗಿಲ್ಲ. ನಮ್ಮನ್ನು ನಾವೇ ನೋಡಿಕೊಂಡರೆ, ಅರಿತುಕೊಂಡರೆ ಸುಖ–ದುಃಖಗಳ ಕೇಂದ್ರ ಈ ಶರೀರವೇ ಎನ್ನುವುದು ಅರಿವಾಗುತ್ತದೆ. ಅರಿಯುವ ಮೂರು ರೀತಿಗಳೆಂದರೆ ನೆನಪಿಸಿಕೊಳ್ಳುವುದು, ಕಾಣುವುದು, ಕೇಳುವುದು. ಇವನ್ನು ಕ್ರಮವಾಗಿ ಸ್ಮೃತಿ, ಮತಿ, ಶ್ರುತಿ ಎಂದು ಕರೆಯಬಹುದು. ಸ್ಮೃತಿ ಎಂದರೆ ನೆನಪಿಸಿಕೊಳ್ಳುವುದು, ಮತಿ ಎಂದರೆ ವರ್ತಮಾನವನ್ನು ಸರಿಯಾಗಿ ತಿಳಿಯುವುದು, ಶ್ರುತಿ ಎಂದರೆ ಕೇಳುವುದು. ನಮ್ಮೆಲ್ಲರ ಹಿಂದೆಯೂ ಆಗಿಹೋದ ಒಂದು ಭವ್ಯ ಪರಂಪರೆಯಿರುತ್ತದೆ. ಅದು ಅಗಾಧವಾದ ಅನುಭವಗಳನ್ನು ಹಿಡಿದಿಟ್ಟಿರುತ್ತದೆ. ನಮಗೆ ಆದ ಅನುಭವವೇ ಈ ಹಿಂದೆ ಅನೇಕರಿಗೆ ಆಗಿರುತ್ತದೆ. ಆದರೆ ನಮಗೆ ಅದೇ ಪರಿಸ್ಥಿತಿ ಎದುರಾದಾಗ ನಾನು ಅವನ್ನು ಹೊಸದಾಗಿ ಎದುರಿಸಲು ನೋಡುತ್ತೇನೆ. ಆದರೆ ನಮಗೆ ಈ ಹಿಂದೆ ಇಂಥದೇ ಘಟನೆ ಸಂಭವಿಸಿದಾಗ ಹಿಂದಿನವರುಗಳು ಎದುರಿಸಿದ ಕ್ರಮದ ಅರಿವು ಇರುವುದಿಲ್ಲ. ಅದನ್ನು ನೆನಪಿಸಿಕೊಳ್ಳುವುದು ಬದುಕಿನ ಅಮೂಲ್ಯ ಸಂಗತಿ. ಅಂತೆಯೇ ನಮ್ಮ ಎದುರಿಗಿರುವ ತೋರಿಕೆಯ ಜಗತ್ತಿನ ಆಂತರ್ಯದಲ್ಲಿ ಮತ್ತೊಂದು ಆಯಾಮವಿರುತ್ತದೆ. ಅದು ಮೇಲ್ನೋಟಕ್ಕೆ ಕಾಣುವಂಥದಲ್ಲ. ಈ ಜಗತ್ತಿನ ಹೊರಗಿನ ಹೊಂಬಣ್ಣವನ್ನಷ್ಟೇ ನೋಡಿ ಸಂಭ್ರಮಿಸುವ, ವಿರಮಿಸುವ ನಾವು ಅದನ್ನು ಮೀರಿರುವ ಆ ಹೊಂಬಣ್ಣದ ಹಿಂದಿನ ಏಕವರ್ಣವನ್ನು ನೋಡುವ ಪರಿಯನ್ನು ತಿಳಿಯಬೇಕು. ಕಾಣುವುದು ಎಂದರೆ ಕೇವಲ ನೋಡುವ ಕ್ರಿಯೆ ಮಾತ್ರವಲ್ಲ. ಕಾಣುವುದು ಎನ್ನುವುದಕ್ಕೆ 'ಕಾಣ್ಕೆ' ಎಂಬ ಅರ್ಥವೂ ಇದೆ. ಕಾಣ್ಕೆ ಎಂದರೆ ಆಂತರ್ಯವನ್ನು ಅರಿಯುವುದು, ಆತ್ಯಂತಿಕವಾಗಿ

ಅರಿಯುವುದು. ಕೆಲವೊಮ್ಮೆ ನೆನೆಯುವ, ಕಾಣುವ ಕ್ರಿಯೆಯಲ್ಲಿ ಕೆಲವು ದೋಷಗಳು ಅಂತರ್ಗತವಾಗಿರಬಹುದು. ಆದರೆ ಕೇಳುವ ಕ್ರಿಯೆ ಹೆಚ್ಚು ವಿವೇಕಶಾಲಿಯಾಗಿರುತ್ತದೆ. ಆದ್ದರಿಂದಲೇ ಕುಮಾರವ್ಯಾಸ ಕರ್ಣಾಟಕ ಭಾರತ ಕಥಾಮಂಜರಿಯಲ್ಲಿ "ಕೇಳುವ ಸೂರಿಗಳು ಸನಕಾದಿ ಸಜ್ಜನರು" ಎನ್ನುತ್ತಾನೆ. ಎಲ್ಲ ಸಂವಹನ ಕ್ರಿಯೆಗಳಲ್ಲಿ ಕೇಳುವ ಕ್ರಿಯೆಯೇ ಅತ್ಯಂತ ಪರಿಣಾಮಕಾರಿಯಾದುದು, ಮೌಲಿಕವಾದುದು. ಈ ಸ್ಮೃತಿ–ಮತಿ–ಶ್ರುತಿಗಳ ಕಾರ್ಯ ಹೊರಗಿನ ಪ್ರಪಂಚವನ್ನು ಅರಿಯುವುದಷ್ಟೇ ಅಲ್ಲ. ನಮ್ಮ ಹೊರಗಿನ ಪ್ರಪಂಚ ನಿಸ್ಸಂದೇಹವಾಗಿ ನಮ್ಮ ಒಳಗೂ ಇರುತ್ತದೆ. ಆದುದರಿಂದ ರನ್ನ ಹೇಳುವ ಈ ಮೂರು ಸಂವಹನ ಕ್ರಿಯೆಗಳು ಪ್ರಮುಖವಾಗಿ ಶರೀರದ ಕಲ್ಮಶಗಳನ್ನು, ಪರಿಮಿತಿಗಳನ್ನು ಅರಿತುಕೊಳ್ಳುವುದೇ ಆಗಿದೆ.

ಆದರೆ, ಕೇವಲ ಅರಿತರೆ ಸಾಕೆ? ನಮಗೆ ಕೆಲವು ಸಂಗತಿಗಳು ತಿಳಿದಿರುತ್ತವೆ. ಆದರೂ ಆ ಮಾರ್ಗದಲ್ಲಿ ನಡೆಯಲು ನಾವು ಸಿದ್ಧರಿಲ್ಲ. ಎದುರಿಗಿರುವ ಕಣ್ಣು ಕೋರೈಸುವ ವಿವಿಧ ಸುಖಗಳನ್ನು ತೊರೆದು ಅಲೌಕಿಕವೂ, ಅಭೌತಿಕವೂ ಆದ ಸುಖಕ್ಕೆ, ನೆಮ್ಮದಿಗೆ ಎಳಸಿ ಅನುಭವಿಸಲು ಸಾಧ್ಯವಿರುವ ಸಂತೋಷವನ್ನು ಕಳೆದುಕೊಳ್ಳಲು ಯಾರೂ ಬಯಸುವುದಿಲ್ಲ. ಆದುದರಿಂದ ತನುವಿನ ದೋಷವನ್ನು ಅರಿತು, ಆ ಅರಿವನ್ನು ಮರೆಯದೆ ದೇಹವನ್ನು ತೊರೆಯಲು ಮನಸ್ಸು ಮಾಡಬೇಕು. ಜೀವಕ್ಕೆ, ಪ್ರಾಣಕ್ಕೆ ಈ ದೇಹವೇ ವೈರಾಗ್ಯ ಹೊಂದಲು ಸಾಧನವಾಗಿದೆ. ದೇಹಕ್ಕಿಂತ ಬೇರೆ ಕಾರಣ ಬೇಕೆ? ಈ ಪದ್ಯದ ಸ್ಥೂಲಾರ್ಥವನ್ನು ಪರಿಗಣಿಸಿದರೆ ಮನುಷ್ಯನಾಗಿ ಹುಟ್ಟುವುದೇ, ದೇಹ ಧರಿಸುವುದೇ ಪಾಪವಲ್ಲ. ಈ ದೇಹ ಆತ್ಮದ ಉನ್ನತಿಗೆ ಇರುವ ಸಾಧನವೆಂದು ಜೀವಿಯು ಅರಿಯಬೇಕು. ಅದಕ್ಕೆ ಬದಲಾಗಿ ದೇಹವಿರುವುದೇ ಸುಖಕ್ಕೆ, ಸುತ್ತಲಿನ ಜಗತ್ತಿರುವುದೇ ಅನುಭವಿಸುವುದಕ್ಕೆ ಎಂದುಕೊಳ್ಳಬಾರದು. ದೇಹದ ಸುಖದಲ್ಲಿಯೇ ಆತ್ಮದ ತೃಪ್ತಿಯೂ ಇದೆ ಎನ್ನುವುದು ಅನುಚಿತ. ಈ ಕಾರಣದಿಂದಲೇ ಮೊದಲಿಗೆ ಹೇಳಿದ್ದು, ಈ ದೇಹವೇ ಮನುಷ್ಯನಿಗೆ ಇರುವ ಪ್ರಮುಖ ಅಡ್ಡಿ ಅಥವಾ ಪರೀಷಹ. ಸುಖ–ದುಃಖ, ನೋವು–ನಲಿವು ಎಲ್ಲದರ ಕೇಂದ್ರಬಿಂದು ಈ ದೇಹ. ತನ್ನ ಮುಂದಿನ ಪದ್ಯಗಳಲ್ಲಿ ದೇಹವೇ ಹೇಗೆ ನರಕ ಸ್ವರ್ಗಗಳ ಸಂಗಮವೆಂಬುದನ್ನು ರನ್ನ ಮತ್ತಷ್ಟು ವಿವರಿಸುತ್ತಾನೆ. ಆದರೆ ಈಗ ನಾವು ನಮ್ಮ ಕಣ್ಣ ಮುಂದೆ ಇರುವ ವಸ್ತುಪ್ರಪಂಚದಲ್ಲಿ, ಮುಖ್ಯವಾಗಿ ಬಯಕೆತೋಟದ ಬೇಲಿಯೊಳಗೇ ರಿಂಗಣಿಸುತ್ತಿದ್ದೇವೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ನಿತ್ಯಾನಿತ್ಯ

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ಜಗತ್ತಿನಲ್ಲಿ ಅಸಂಖ್ಯ ವಸ್ತುಗಳು. ಪ್ರತಿಯೊಂದು ವಸ್ತುವಿಗೂ ಮೂರು ಅವಸ್ಥೆಗಳು. ಸೃಷ್ಟಿ-ಸ್ಥಿತಿ-ಲಯ. ತೋರುವಿಕೆ, ಇರುವಿಕೆ, ಮರೆಯಾಗುವಿಕೆ. ಈ ಮೂರು ಅವಸ್ಥೆಗಳಿಗೆ ಒಳಗಾದುದೇ ಪ್ರಪಂಚ. ಅದು ಮಿಥ್ಯ. ಈ ಮೂರು ಅವಸ್ಥೆಗಳನ್ನು ಮೀರಿ ನಿಂದುದೇ ಪರಮಾರ್ಥ. ಅದು ಸತ್ಯ.

ಇಲ್ಲೊಂದು ಹೂ-ಬಳ್ಳಿಯಿದೆ. ಹೂವು ದಿನವೂ ಅರಳುತ್ತದೆ, ಬಾಡುತ್ತದೆ. ಬಳ್ಳಿಯು ಅಂಥ ನೂರಾರು ಹೂವುಗಳಿಗೆ ಜನ್ಮ ನೀಡುತ್ತದೆ. ಬಹುದಿನ ಬದುಕಿರುತ್ತದೆ. ಬಳ್ಳಿಯ ದೃಷ್ಟಿಯಿಂದ ಹೂವು ಅನಿತ್ಯ. ಅಂಥ ಅಸಂಖ್ಯ ಬಳ್ಳಿಗಳಿಗೆ ಆಶ್ರಯವಾದುದು ಭೂಮಿ. ಆ ಬಳ್ಳಿಗಳೆಷ್ಟೇ ಅಳಿದರೂ ಭೂಮಿ ಅಳಿಯದು. ಈಗ ಈ ಭೂಮಿಯ ದೃಷ್ಟಿಯಿಂದ ಆ ಬಳ್ಳಿಯೂ ಅನಿತ್ಯ. ಅದೇ ಬಳ್ಳಿಯು ಹೂವಿನ ದೃಷ್ಟಿಯಿಂದ ನಿತ್ಯ! ಹೀಗೆ ಒಂದು ವಸ್ತುವು ಏಕಕಾಲಕ್ಕೆ ನಿತ್ಯವೂ, ಅನಿತ್ಯವೂ ಆಗಿದ್ದರೆ ಅದು ಮಿಥ್ಯ!

ಆದರೆ ಒಂದು ವಸ್ತುವಿದೆ. ಅದು ಪ್ರಪಂಚದ ಸಕಲ ವಸ್ತುಗಳಿಗೆ ಆಧಾರವಾಗಿದೆ. ತೋರುವಿಕೆ-ಇರುವಿಕೆ-ಮರೆಯಾಗುವಿಕೆ ಈ ಮೂರೂ ಅವಸ್ಥೆಗಳನ್ನು ಮೀರಿ ನಿಂತಿದೆ. ಅದೇ ಪರವಸ್ತು, ಪರಮಾತ್ಮ! ಅದೊಂದೇ ಸತ್ಯ, ಉಳಿದುದೆಲ್ಲ ಮಿಥ್ಯ. ಈ ನಿತ್ಯ ಸತ್ಯವಸ್ತುವಿನ ಪ್ರೇಮವೇ ಸುಸ್ಥಿರ. ಅದು ಭಕ್ತಿ!

ಪ್ರಪಂಚದಲ್ಲಿ ಇರುವವರೆಗೆ ನಾವು ವಸ್ತುಗಳನ್ನು ಬಿಟ್ಟಿರಲಿಕ್ಕಾಗುವುದಿಲ್ಲ. ಆದರೆ ನಾವು ಯಾವುದೇ ವಸ್ತುವನ್ನು ಹಿಡಿದಿರಲಿ ಅದು ಮಿಥ್ಯವೆಂಬ ಅರಿವು ನಮಗಿರಬೇಕು. ಇಂದಿಲ್ಲ ನಾಳೆ ಆ ವಸ್ತು ನಮ್ಮ ಕೈಬಿಡುತ್ತದೆ ಎಂಬ ಅರಿವು ನಮಗಿರಬೇಕು. ಆಗ ಆ ವಸ್ತು ಅಳಿದರೂ ನಾವು ನೆಮ್ಮದಿಯಿಂದ ಉಳಿದಿರುತ್ತೇವೆ.

ಈ ನಿತ್ಯಾನಿತ್ಯವಿವೇಕವುಳ್ಳವರೇ ಸಂತರು. ಅನಿತ್ಯವಾದ ಧನ-ಕನಕ-ಕೀರ್ತಿ-ವಾರ್ತೆಗಳ ಹಿಂದೆ ಅವರು ಎಂದೂ ಹರಿಯರು.

ಒಂದು ದೇಶ. ಅಲ್ಲಿ ಓರ್ವ ಶ್ರೇಷ್ಠ ಸಂತ. ದೇಶದ ಜನತೆಗೆ ಆತನ ಮೇಲೆ ಅಪಾರ ಗೌರವ. ಆ ದೇಶದ ರಾಜನೂ ಆ ಸಂತನನ್ನು ಮಹಾಗುರು ಎಂದು ಮನ್ನಿಸಿದ. ಆನಂತರ ಸಂತನ ಮೇಲೆ ಪ್ರಜೆಗಳ ಗೌರವ ಇನ್ನಷ್ಟು ಹೆಚ್ಚಿತು. ಹೀಗಿದ್ದರೂ ಒಂದು ದಿನ ಆ ಸಂತನು ದೇಶವನ್ನು ಬಿಡಬೇಕೆಂದು ನಿರ್ಧರಿಸಿದ. ಇದು ಹೇಗೋ ಮಹಾರಾಜನಿಗೆ ತಿಳಿಯಿತು.

ಮಹಾರಾಜ ಗುರುಗಳ ಬಳಿಗೆ ಬಂದು ವಿನಯದಿಂದ ಕೇಳಿದ "ಗುರುಗಳೇ ತಾವು ನನ್ನ ದೇಶವನ್ನು ಬಿಡುವಿರಂತೆ ನಿಜವೆ?" 'ನಿಜ!' 'ಏಕೆ?' "ಎಲ್ಲವೂ ಒಂದು ದಿನ ಕೊನೆಗೊಳ್ಳಲೇಬೇಕಲ್ಲ! ಯಾರೂ ಈ ರಾಜ್ಯದಲ್ಲಿ ಶಾಶ್ವತವಾಗಿ ನಿಲ್ಲರು. ಅವರು ಬಯಸಲಿ, ಬಯಸದಿರಲಿ! ನಾನೂ ಸರಿ, ನೀನೂ ಸರಿ!" ಎಂದು ಸಂತ ಹೊರಟೇಬಿಟ್ಟ.

ಈ ಪ್ರಸಂಗದಿಂದ ಮಹಾರಾಜನ ಮನದಲ್ಲಿ ನಿತ್ಯಾನಿತ್ಯವಿವೇಕದ ಜ್ಯೋತಿ ಬೆಳಗಿತು!

ವಸ್ತುವಿನ ಸ್ವರೂಪಜ್ಞಾನವುಳ್ಳ ನಿತ್ಯಾನಿತ್ಯವಿವೇಕಿಯು ಮಿಥ್ಯವಾದ ಈ ಪ್ರಪಂಚದ ಹಿಂದೆ ಎಂದೂ ಧಾವಿಸುವುದಿಲ್ಲ. ಆದರೆ ಅಜ್ಞಾನಿಯಾದ ಮನುಷ್ಯನು ಈ ಪ್ರಾಪಂಚಿಕ ವಸ್ತುಗಳೆಲ್ಲ ನಿತ್ಯವೆಂದೇ ಭಾವಿಸುತ್ತಾನೆ. ಈ ಪ್ರಪಂಚದಲ್ಲಿ ಯಾವುದು ನಿತ್ಯವಾಗಿದೆ? ನೂತನವಾಗಿದೆ?

ಸದಾ ಏನಾದರೊಂದು ನೂತನವಾದುದನ್ನು, ಹೊಸದಾದುದನ್ನು ಬಯಸುವುದು ಮನುಷ್ಯನ ಸ್ವಭಾವ. ಮನೆ-ಮಠ, ಉಡಿಗೆ-ತೊಡಿಗೆ ಎಲ್ಲವೂ ಹೊಸದಾಗಿರಬೇಕೆನ್ನುತ್ತಾನೆ. ಸೃಷ್ಟಿ-ಸ್ಥಿತಿ-ಲಯ ಎಂಬ ಅವಸ್ಥಾತ್ರಯಗಳಿಗೆ ಒಳಗಾದ ಈ ಪ್ರಪಂಚ ಮಿಥ್ಯವಾಗಿದೆ. ಹೀಗೆ ಸಮಸ್ತ ಪ್ರಪಂಚವೇ ಮಿಥ್ಯವಾಗಿರುವಾಗ ಪ್ರಾಪಂಚಿಕವಸ್ತುಗಳು ನಿತ್ಯನೂತನ ವಾಗಿರುವುದು ಸಾಧ್ಯವೇ ಇಲ್ಲ ಎಂಬುದನ್ನು ಮನುಷ್ಯ ಮರೆಯುತ್ತಾನೆ. ತಾನು ನೆಚ್ಚಿದ ವಸ್ತುಗಳು ಹಳೆಯದಾದಾಗ, ಹಾಳಾದಾಗ ದುಃಖಿಸುತ್ತಾನೆ.

ಒಬ್ಬ ಸಿರಿವಂತ ಒಂದು ಮನೆ ಕಟ್ಟಿಸಿದ. ಆತನಿಗೆ ಆ ಮನೆಯ ಮೇಲೆ ಅಪಾರ ಪ್ರೀತಿ. ಅಕಸ್ಮಾತ್ ಅದರ ಪಕ್ಕದಲ್ಲಿ ಇನ್ನೊಬ್ಬರು ಅದಕ್ಕಿಂತಲೂ ಒಂದು ದೊಡ್ಡ ಮನೆ ಕಟ್ಟಿಸಿದರು. 'ನಾನೂ ಅಂಥ ದೊಡ್ಡ ಮನೆ ಕಟ್ಟಿಸಬೇಕು' ಎಂದು ಈತ ಕನಸು ಕಂಡ. ತನ್ನ ಹಳೆಯ ಮನೆ ಕೆಡವಲು ಹೋದ.

ಆ ಮನೆ ಆತನಿಗೆ ಹೇಳಿತು : "ಹೊಸದಾಗಿ ಕಟ್ಟಿಸಿದಾಗ ನೀನು ನನ್ನನ್ನು ಎಷ್ಟೊಂದು ಪ್ರೀತಿಸಿದಿ. ನನಗಾಗಿ ಹಳೆಯ ಗುಡಿಸಲನ್ನು ಕೆಡವಿದಿ. ಅಂದು ಆ ಗುಡಿಸಲು ನಿನಗೆ ಹಳೆಯದಾದಂತೆ ಇಂದು ನಾನೂ ಹಳೆಯದಾಗಿ ಕಾಣುತ್ತಿದ್ದೇನೆ. ಆದರೆ ನೀನು ಮುಂದೆ ಕಟ್ಟಲಿರುವ ಮನೆಯೂ ಒಂದು ದಿನ ಹಳೆಯದಾದೀತು. ವಿಚಾರ ಮಾಡು. ನನ್ನನ್ನು ಸುಮ್ಮನೆ ಕೆಡವಬೇಡ!"

ಮನೆಯ ಕಿವಿಮಾತು ಕೇಳುವ ಮನಸ್ಥಿತಿ ಯಜಮಾನನಿಗೆ ಇರಲಿಲ್ಲ. ಹೊಸ ಮನೆಯ ಕನಸಿನಲ್ಲಿ ಹಳೆ ಮನೆಯನ್ನು ಕೆಡವಿದ. ಆತನಿಗೆ ವೃದ್ಧಾಪ್ಯ ಆವರಿಸಿತು. ಹೊಸ ಮನೆ ಕಟ್ಟಿಸಲಿಕ್ಕಾಗಲಿಲ್ಲ! ಹಳೆ ಮನೆಯ ನಿತ್ಯಾನಿತ್ಯವಿವೇಕದ ಮಾತು ಕೇಳದ ಯಜಮಾನ ದುಃಖಕ್ಕೆ ಒಳಗಾಗಿದ್ದ.

ಸತ್ಯವಸ್ತು ನಿತ್ಯನೂತನ, ಶಾಶ್ವತ. ಅದೆಂದೂ ನಮ್ಮ ಕೈಬಿಡದು. ಹಳೆಯದಾಗದು. ಹಾಳಾಗದು. ಅಂಥ ನಿತ್ಯಸತ್ಯ ವಸ್ತುವಿನ ಪ್ರೇಮವೂ ನಿತ್ಯ, ಶಾಶ್ವತ. ಅದರಿಂದ ಸ್ಥಿರ

ಸುಖ, ಶಾಂತಿ. ಅಲೌಕಿಕವಾದ ಆ ಸತ್ಯವಸ್ತುವಿನ ಪ್ರೇಮವೇ ಪರಮಪ್ರೇಮ. ಅದು ಭಕ್ತಿ! ಈ ಭಕ್ತಿ ಬೆಳೆಯಬೇಕಾದರೆ ನಿತ್ಯಾನಿತ್ಯ ವಿವೇಕವೇ ತಮ್ಮ ಉಸಿರಾಗಿರುವ ಸಂತರ ಸಂಗ ಅವಶ್ಯ. ಆದರೆ ಅಂಥ ಸತ್ಸಂಗ ದೊರೆಯದಿದ್ದರೆ ಏನು ಮಾಡುವುದು?

ಚಿಂತೆಯಿಲ್ಲ. ಸಂತರು ದೊರಕಿದರೆ ಎಲ್ಲಾ ಬಿಟ್ಟು ಅವರ ಸತ್ಸಂಗದಲ್ಲಿ ಇರುವುದು. ಒಂದು ವೇಳೆ ಅಂಥ ಸಂತರ ಸಾನ್ನಿಧ್ಯ ದೊರೆಯದಿದ್ದರೆ ಅವರ ನೆನಹಿನ ಸಂಗ, ಅವರ ನುಡಿಗಳ ಸಂಗ ಮಾಡಿದರೂ ಸಾಕು. ನಾವು ಧನ್ಯರಾಗುತ್ತೇವೆ. ನಮ್ಮ ಭಕ್ತಿ ನವಚೈತನ್ಯ ಪಡೆಯುತ್ತದೆ.

ಏಸು, ಬುದ್ಧ, ಬಸವ, ಮಹಾವೀರ ಮೊದಲಾದ ಮಹಾತ್ಮರು ದೈಹಿಕವಾಗಿ ಇಂದಿಲ್ಲ. ಅವರ ನೇರ ಸತ್ಸಂಗ ನಮಗೀಗ ಸಾಧ್ಯವಿಲ್ಲ. ಆದರೆ ಅವರ ಆತ್ಮಾನುಭವದ ಮಾತಿನ ಸಂಗ ನಾವು ಈಗಲೂ ಮಾಡಬಹುದು. ಮಹಾತ್ಮರ ಮಾತಿನ ಸಂಗವಾದರೆ ಮಹಾತ್ಮರ ಸಂಗವಾದಂತೆಯೇ! ಅವರ ಮಾತಿನಲ್ಲಿ ಅವರ ಆತ್ಮದ ತೇಜ ಅಡಗಿದೆ. ಅಂತೆಯೇ ಅವರ ಮಾತು ಮಾತಲ್ಲ, ಮಂತ್ರ! ನುಡಿಲಿಂಗ, ಜ್ಯೋತಿರ್ಲಿಂಗ!! ಅವರ ಅಂಥ ನುಡಿಲಿಂಗದ ಸಂಗದಿಂದ ನಮ್ಮಲ್ಲಿ ನಿತ್ಯಾನಿತ್ಯ ವಿವೇಕದ ಜ್ಯೋತಿಯು ಬೆಳಗುತ್ತದೆ. ಅದರಿಂದ ನಮ್ಮ ಬದುಕು ಹಸನಾಗುತ್ತದೆ. ಭಕ್ತಿಯು ಹುಲುಸಾಗಿ ಬೆಳೆಯುತ್ತದೆ.

'ಆಸೆಯೇ ದುಃಖಕ್ಕೆ ಮೂಲ' ಎಂದು ಹೇಳಿದ ಬುದ್ಧ. ಅದು ಪರಮಾನುಭವದ ನುಡಿಸೊಡರು! ಆ ತಂಜೊಡರಿನ, ತಂಬೆಳಗಿನಲಿ ನಾವು ಆಡಿ, ನಲಿಯಬೇಕು. ಅದು ನುಡಿಲಿಂಗದ ಸಂಗ. ಅದರಿಂದ ಈ ಭವದ ಭಂಗ! ಆಗ ಮಾನವನ ದುಃಖ ದುಮ್ಮಾನದ ಕಾರ್ಗತ್ತಲೆಯು ಕರಗಿಹೋಗುತ್ತದೆ. ಬಾಳಲ್ಲಿ ಆತ್ಮಾನಂದದ ಜ್ಯೋತಿ ತಾನೇ ತಾನಾಗಿ ಬೆಳಗುತ್ತದೆ! ಅದೇ ಜೀವನ್ಮುಕ್ತಿ! ಅದು ಭಕ್ತಿಯ ಫಲಶ್ರುತಿ!

ದಾರಿಯಲ್ಲಿ ಒಂದು ಹಣದ ಚೀಲ ಬಿದ್ದಿದೆ. ಅದನ್ನು ಕಂಡ ಕೂಡಲೇ ಎಂಥವರ ಮನಸ್ಸೂ ಅತ್ತ ಹರಿಯುತ್ತದೆ. ಅದನ್ನು ಎತ್ತಿಕೊಳ್ಳಬೇಕು ಎನ್ನಿಸುತ್ತದೆ. ಆಗ ಬುದ್ಧನ ಕಿವಿಮಾತು, ಸವಿಮಾತು ನೆನಪಾಗಬೇಕು. 'ಆಸೆಯೇ ದುಃಖದ ಮೂಲ' ಎನ್ನಬೇಕು. ಅಂದರೆ ನಮ್ಮ ಮನಸ್ಸು ಅದನ್ನು ಎತ್ತಿಕೊಳ್ಳಲು ಹಿಂಜರಿಯುತ್ತದೆ. ದುಃಖ ತಪ್ಪುತ್ತದೆ. ಸಂತರ ಒಂದು ಮಾತು ನಮ್ಮನ್ನು ಹೀಗೆ ಕಾಯುತ್ತದೆ.

"ಅಳಿಯಾಸೆ ಬೇಡವೋ ಕಾಡ ಬೆಳದಿಂಗಳ ಸಿರಿ ಸ್ಥಿರವಲ್ಲ!" ಎಂದರು ಬಸವಣ್ಣನವರು. ಕೃಷ್ಣಪಕ್ಷದ ಬೆಳದಿಂಗಳಂತೆ ನಮ್ಮ ಸಿರಿ-ಸಂಪದ ದಿನೇದಿನೇ ಕ್ಷೀಣಿಸುತ್ತದೆ! ಅದರ ಆಸೆ ಅಳಿಯಾಸೆ, ಕೀಳಾಸೆ ಅದು ಬೇಡ!!

ಹಾಗೆಯೇ ಮಹಾವೀರನು 'ವೀತರಾಗೀ ಭವ' ಎಂದ. 'ರಾಗ' ಎಂದರೆ ಅತಿಯಾದ ಪ್ರೀತಿ, ವ್ಯಾಮೋಹ. ಯಾವುದೇ ಪ್ರಾಪಂಚಿಕ ವಸ್ತುವನ್ನು ನಾವು ಅತಿ ಗಟ್ಟಿಯಾಗಿ ಹಿಡಿದಿರಬಾರದು ಎಂಬುದು ಅದರ ಅರ್ಥ.

ವ್ಯಾಪಾರಿಯು ತಕ್ಕಡಿ ಹಿಡಿದು ಅಂಗಡಿಯೊಳಗೆ ಪ್ರವೇಶಿಸುತ್ತಾನೆ. ಜಗತ್ತನ್ನೆಲ್ಲಾ ಮರೆಯುತ್ತಾನೆ. ಆಯುಷ್ಯವನ್ನೇ ತೂಗುವುದರಲ್ಲಿ ಕಳೆಯುತ್ತಾನೆ. ಗಳಿಸುವುದು ಮುಗಿಯುವುದೇ ಇಲ್ಲ! ಪರಮ ಸತ್ಯದ ಭಾವವೇ ಬರುವುದಿಲ್ಲ! ಸಮಾಧಾನದ ಮಾತೆಲ್ಲಿ?

ಪ್ರಪಂಚದಲ್ಲಿ ಏನೆಲ್ಲ ಸುಕರ್ಮಗಳನ್ನು ಮಾಡಬೇಕು. ಮಾಡಿಯೂ ಮಾಡದಂತಿರಬೇಕು. ಅದು 'ವೀತರಾಗ.' ಅದರಿಂದ ಪರಮ ಸುಖ-ಶಾಂತಿ ಸಮಾಧಾನ. ಸಂತರ ನಿತ್ಯಾನಿತ್ಯ ವಿವೇಕದ ಇಂಥ ಒಂದು ಮಾತು ನಮ್ಮ ಹೃದಯದಲ್ಲಿದ್ದರೆ ಸಾಕು, ಭಕ್ತಿಯ ವೃಕ್ಷ ಭರದಿಂದ ಬೆಳೆಯುತ್ತದೆ!

□

ಹಾಲ ಹಿಡಿದು ಬೆಣ್ಣೆಯನರಸಲುಂಟೆ ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ ?
ಲಿಂಗದ ಪಾದತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇತಕ್ಕೆ ?
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೆನಾದಡೆ
ತಡೆಯದೆ ಹುಟ್ಟಿಸುವನು ಶ್ವಾನನ ಗರ್ಭದಲ್ಲಿ
ಅದೆಂತೆಂದಡೆ ; ಶಿವಧರ್ಮಪುರಾಣದಲ್ಲಿ —
"ಇಷ್ಟಲಿಂಗಮವಿಶ್ವಸ್ಯ ತೀರ್ಥಲಿಂಗಸ್ಯ ಪೂಜಕಃ |
ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್ |" ಎಂದುದಾಗಿ,
ಇದನರಿದು ಗುರು ಕೊಟ್ಟ ಲಿಂಗದಲ್ಲಿಯೇ ಎಲ್ಲಾ ತೀರ್ಥಂಗಳೂ
ಎಲ್ಲ ಕ್ಷೇತ್ರಂಗಳೂ ಇದ್ದಾವೆಂದು ಭಾವಿಸಿ ಮುಕ್ತರಪ್ಪುದಯ್ಯಾ.
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದು ಮಾಡಿ,
ತೀರ್ಥಲಿಂಗವ ಹಿರಿದು ಮಾಡಿ ಹೋಹಾತಂಗೆ
ಅಘೋರನರಕ ತಪ್ಪದು ಕಾಣಾ, ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

# ಆಶಯ

ಡಾ. ಎಂ.ಎನ್. ನಂದೀಶ್ ಹಂಚೆ

ಅಂಗಳದ ತುಂಬ ಹಾಸುಚಪ್ಪರ. ಚಪ್ಪರವೆಂದರೆ ಸಾಧಾರಣ ನೆರಳು ಬೀಳುವಷ್ಟು ಗರಿಗಳ ಹೊದಿಕೆ. ಕೆಳಗೆ ನಿಂತವರ, ಕುಳಿತವರ ತಲೆಯ ಮೇಲಷ್ಟು ನೆರಳು. ಅದು ಒಂದು ರೀತಿಯಲ್ಲಿ ನೆರಳೂ ಹೌದು, ಬಿಸಿಲೂ ಹೌದು. ನೆರಳುಬಿಸಿಲುಗಳ ಸಂಗಮವೆಂದರೂ ನಡೆಯುತ್ತದೆ. ಸುತ್ತೂರು ಶ್ರೀಮಠದ ಅಂಗಳದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಆರಾಧನಾ ಮಹೋತ್ಸವ ನಡೆಯುತ್ತಿದೆ. ಸುತ್ತಮುತ್ತಲಿನ ಹತ್ತೆಂಟು ಹಳ್ಳಿಯ ಜನರು ಬಂದಿದ್ದಾರೆ. ಅದು ಅರವತ್ತರ ದಶಕ. ಆ ಕಾಲಕ್ಕೆ ಆರಾಧನೆಗೆ ಭಕ್ತಿಯಿಂದ ಬರುವಷ್ಟೇ ಜನರು ಆರಾಧನೆಯ ಅನ್ನಸಂತರ್ಪಣೆಯ ಆಕರ್ಷಣೆಗಾಗಿಯೂ ಬರುತ್ತಿದ್ದರು. ಅನ್ನವೆಂದರೆ ಅದೊಂದು ಅಮೃತ ದಿವ್ಯ ಪರಮಾನ್ನ. ಮದುವೆ, ಆರಾಧನೆ ಹೀಗೆ ವಿಶೇಷ ಸಂದರ್ಭಗಳಲ್ಲಷ್ಟೇ ಜನರು ಅನ್ನವನ್ನು ನೋಡಬಹುದಾಗಿದ್ದ ದಿನಗಳವು. ನಿತ್ಯವೂ ಅನ್ನ ಊಟ ಮಾಡುತ್ತಿದ್ದುದು ಶ್ರೀಮಂತರ ಮನೆಗಳಲ್ಲಿ ಮಾತ್ರ. ಆ ಕಾಲಕ್ಕೆ ಶ್ರೀಮಂತಿಕೆ ಇದ್ದದ್ದೂ ಕೂಡ ಕೆಲವರಿಗಷ್ಟೆ.

ಆರಾಧನೆಯ ದಿನದ ಆ ವಿಶೇಷ ಕೈಂಕರ್ಯಕ್ಕೆ 'ಅನ್ನಸಂತರ್ಪಣೆ' ಎಂದು ಯಾರು ಹೆಸರಿಟ್ಟರೋ ತಿಳಿಯದು. ಸಂತರ್ಪಣೆ ಎನ್ನುವುದಕ್ಕೆ ಇಂಗ್ಲಿಷ್‌ನಲ್ಲಿ ಸ್ಯಾಟಿಸ್‌ಫೈಯಿಂಗ್, ಗ್ರ್ಯಾಟಿಫೈಯಿಂಗ್ ಎಂಬ ಅರ್ಥವಿದೆ. ಇದನ್ನು ಕನ್ನಡದಲ್ಲಿ 'ತೃಪ್ತಿ' ಎಂದು ಕರೆಯಬಹುದು. ಹಸಿದವರ ಹಸಿವನ್ನು ನೀಗಿಸುವುದು, ಹೊಟ್ಟೆ ತುಂಬಿದ ವ್ಯಕ್ತಿ ಸಂತೃಪ್ತಿಗೊಳ್ಳುವುದು, ಇಂಥ ಮಹತ್ವದ ಆಶಯವನ್ನು ಈ ಪ್ರಕ್ರಿಯೆ ಹೊಂದಿದೆ. ಶ್ರೀಮಠದ ಮುಂದೆ ಹಾಕಿದ್ದ ಚಪ್ಪರದ ಕೆಳಗೆ ಸಾಲುಗಟ್ಟಿದ್ದ ಭಕ್ತಸ್ತೋಮ ನೆಲದ ಮೇಲೆ ಚಕ್ಕಳಮಕ್ಕಳ ಹಾಕಿ ಕುಳಿತಿತ್ತು. ಪ್ರಸಾದ ಸ್ವೀಕರಿಸಿ ಎದ್ದವರು ಕುಳಿತುಕೊಳ್ಳುವವರ ನಡುವೆ ಒಂದು ರೀತಿಯ ಪೈಪೋಟಿಯೇ ಏರ್ಪಟ್ಟು, ನೆಲದಿಂದ ದೂಳು ಮೇಲೇಳುತ್ತಿದ್ದರೂ ಅದನ್ನು ಲೆಕ್ಕಿಸದೆ 'ಕುಳಿತುಕೊಳ್ಳಲು ಒಂದಿಷ್ಟು ಜಾಗವಾದರೆ ಸಾಕು' ಎನ್ನುವಂತಿತ್ತು ಅವರ ನಡವಳಿಕೆ. ಆ ಗಲಾಟೆಯಲ್ಲಿ ಜಯಿಸಿ ಪುಟ್ಟಮಾದಮ್ಮನವರು ಮತ್ತು ಅವರ ಮೊಮ್ಮಗ ಆರು ವರ್ಷ ವಯಸ್ಸಿನ ದೇವಪ್ಪ ಜಾಗ ಹಿಡಿದುಕೊಳ್ಳುವಲ್ಲಿ ಸಫಲರಾಗಿದ್ದರು.

ಪ್ರಸಾದಕ್ಕೆ ಕುಳಿತುಕೊಳ್ಳಲು ಜಾಗ ಸಿಕ್ಕಿದ ಮೇಲೆ ಊಟದ ಎಲೆ ಯಾವ ದಿಕ್ಕಿನಿಂದ ಬರುತ್ತದೆ ಎಂದು ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದ ದೇವಪ್ಪ. ಮುತ್ತುಗದ ಎಲೆಯಿಂದ ತಯಾರಿಸಿದ ಊಟದೆಲೆಗೆ ಕೈಚಾಚಿದ ಅವನು ಅದು ತೂತಾಗಿದೆ ಎಂದು ತಿಳಿದೂ ಮತ್ತೊಂದು ಎಲೆಯನ್ನು ಕೇಳಲಿಲ್ಲ. ಕೇಳಿದರೂ ಕೊಡದೆ ಇದ್ದಂಥ ದಿನಗಳವು. ನೆಲದ ಮೇಲೂ ಆ ಎಲೆಯನ್ನು ಇಡದೆ, ಇಟ್ಟರೆ ಯಾರೋ ಕಿತ್ತುಕೊಂಡುಬಿಡಬಹುದೆಂಬ ಭಯದಿಂದ, ಹಾಗೇ ಕೈಯಲ್ಲಿ ಹಿಡಿದುಕೊಂಡಿದ್ದನು. ಎಲೆಯ ಮೇಲೆ ನೀರು ಚಿಮುಕಿಸುವ ಆಟವಾಡುತ್ತಿದ್ದ. ಎಲೆಯನ್ನು ಕೈಯಲ್ಲೇ ಹಿಡಿದು ಅದನ್ನು ತೊಳೆದುಕೊಳ್ಳುವ ತೋರಿಕೆ ಮಾಡಿದ. ನೀರು ಹಾಕಿದ ಮೇಲೆ ಪಂಕ್ತಿಯ ಬಲಭಾಗದಿಂದ ಎಲೆಯ ಮೇಲೆ ಪಾಯಸ ಬಡಿಸಿದರು; ಅದನ್ನು ನೆಕ್ಕಲು ಹೋಗಿ ಬೆರಳು ಸುಟ್ಟುಕೊಂಡ. ತಕ್ಷಣವೇ ಆ ಬೆರಳನ್ನು ಬಾಯಿಯಲ್ಲಿಟ್ಟುಕೊಂಡ. ಅಕ್ಕಪಕ್ಕದವರು, ಎದುರುಬದರಿನವರು ಆರಾಮವಾಗಿ ಪಾಯಸ ನೆಕ್ಕುತ್ತಿರುವುದನ್ನು ನೋಡಿ, ನನಗೆ ಮಾತ್ರ ಬಿಸಿ ಪಾಯಸ ಬಡಿಸಿ ಅವರಿಗೆ ತಣ್ಣಗಿನ ಪಾಯಸ ಬಡಿಸಿದ್ದಾರೇನೋ ಎಂದುಕೊಂಡ. ಅವರಿಗೆ ಬಡಿಸಿದ್ದದ್ದೂ ಅದೇ ಪಾಯಸ. ಆದರೆ ಎಳೆಯ ಬೆರಳು ಬಿಸಿಯನ್ನು ತಾಳಲಾರದೆಹೋಗಿತ್ತು, ಅಷ್ಟೆ. ಪಾಯಸ ಆರಿದ ಬಳಿಕ ಅದನ್ನು ನೆಕ್ಕಬೇಕೆನಿಸುವಷ್ಟರಲ್ಲೇ ಅನ್ನ ಬಡಿಸಲು ಶುರುವಾಯಿತು. ದೇವಪ್ಪನ ಸರದಿ ಬಂದಾಗ ಆತನ ಎಲೆಯ ಮೇಲಿನ ಇನ್ನೂ ಪಾಯಸ ಹಾಗೆಯೇ ಇತ್ತು. ಅವನ ಅಜ್ಜಿ ದೇವಪ್ಪನ ಎಲೆಗೆ ಪಾಯಸದ ಮೇಲೆಯೇ ಅನ್ನ ಹಾಕುವಂತೆ ಹೇಳಿದಳು. ಅನ್ನದ ಸರದಿ ಬಂದಾಗ ಬಿಟ್ಟುಬಿಟ್ಟರೆ, ಆಗ ತಪ್ಪಿಹೋದರೆ ಮತ್ತೆ ಬರುವುದಿಲ್ಲವೆಂಬ ಆತಂಕ. ಪಾಯಸದ ಮೇಲೆ ಅನ್ನ, ಅದರ ಮೇಲೆ ಸಾಂಬಾರು, ಹೀಗೆ ಸಿಹಿ–ಖಾರಗಳ ವಿಚಿತ್ರ ರಸಸಂಗಮವಾಗಿತ್ತು, ಅವನ ಎಲೆ. ಆದರೂ ಅದನ್ನು ನಿಧಾನವಾಗಿ ಸವಿಯುವ ಬಯಕೆ ದೇವಪ್ಪನದು. ಪಂಕ್ತಿಯಲ್ಲಿ ನಿಧಾನಕ್ಕೆ ಅವಕಾಶವಿರಲಿಲ್ಲ. ಪಂಕ್ತಿಯಲ್ಲಿರುವವರು ಬೇಗಬೇಗನೆ ಊಟ ಮಾಡಿಕೊಳ್ಳಬೇಕು. ಪಂಕ್ತಿಯ ಎಲೆಯನ್ನು ಒಮ್ಮೆ ಎತ್ತಲು ಆರಂಭಿಸಿದರೆಂದರೆ – ಪರೀಕ್ಷಾ ಸಮಯ ಮುಗಿದಾಗ ಕೊಠಡಿಯ ಮೇಲ್ವಿಚಾರಕರು ಇನ್ನೂ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಯ ಕೈಯಿಂದ ಉತ್ತರಪತ್ರಿಕೆಯನ್ನು ಬಲವಂತವಾಗಿ ಕಸಿದುಕೊಳ್ಳುವಂತೆ – ಪಂಕ್ತಿಯಲ್ಲಿದ್ದವರ ಎಲೆಯನ್ನು ಕಸಿದುಕೊಳ್ಳಲಾಗುತ್ತಿತ್ತು.

ದೇವಪ್ಪ ಬಹಳ ಕಾಲದಿಂದ ಹಸಿದಿದ್ದವನಂತೆ, ಒಂದೇ ಸಮನೆ ಸುಡುವುದನ್ನೂ ಕಾಣದೆ ತಿನ್ನಲಾರಂಭಿಸಿದ. 'ತಿನ್ನು' ಎನ್ನುವ ಕ್ರಿಯಾಪದ ಅಷ್ಟೇನೂ ಉಚಿತವಲ್ಲದಿದ್ದರೂ ಆ ಕ್ರಿಯೆಯನ್ನು ಸಮರ್ಥವಾಗಿ ಸೂಚಿಸಲು ಇದಕ್ಕಿಂತ ಬೇರೆ ಪದ ತೋಚುತ್ತಿಲ್ಲ. ಆದರೆ ಹಸಿದ ಹೊಟ್ಟೆ, ತಿನ್ನುವ ಆಸೆ ಎರಡೂ ದೊಡ್ಡದಿದ್ದರೂ, ದೇವಪ್ಪನ ವಯಸ್ಸು ಸಣ್ಣದಿತ್ತು. ಆದುದರಿಂದ ಆತ ಎಷ್ಟೇ ಪ್ರಯತ್ನಪಟ್ಟರೂ ಪಂಕ್ತಿಯಲ್ಲಿ ಎಲ್ಲರ ಜೊತೆಜೊತೆಗೆ

ಊಟ ಮಾಡಲು ಆಗಲಿಲ್ಲ. ಊಟದಿಂದ ಜನ ಒಮ್ಮೆಲೆ ಮೇಲೆದ್ದರು. ಹೀಗೆ ಒಮ್ಮೆಲೆ ಏಳುವುದು ಆಗಿನ ಸಂಪ್ರದಾಯ. ಪಂಕ್ತಿಯಲ್ಲಿ ಎಲ್ಲರ ಊಟವಾದ ಮೇಲೆಯೇ ಮೇಲೇಳುವುದು ಪದ್ಧತಿಯಾದರೂ, ಹಾಗೆ ಏಳುವಾಗ ಹಿರಿಯರನ್ನಷ್ಟೇ ಗಮನಿಸಲಾಗುತ್ತಿತ್ತು. ಎಲ್ಲರೂ ಎದ್ದಾಗ ಅಜ್ಜಿ ಪುಟ್ಟಮಾದಮ್ಮನೂ ಮೇಲೆದ್ದರು. ಒಂದು ಕಡೆಯಿಂದ ಎಂಜಲೆಲೆಗಳನ್ನು ಎತ್ತಲು ಶುರು ಮಾಡಿದರು. ಇದನ್ನು ಗಾಬರಿಯಿಂದ ಗಮನಿಸಿದ ದೇವಪ್ಪ ಜನ ತನ್ನ ಎಲೆಯನ್ನು ಎತ್ತಲು ಬಂದಾಗ ಚಿಟ್ಟನೆ ಚೀರಿ ಗಲಾಟೆ ಮಾಡತೊಡಗಿದ. ಮಗುವಿನ ಈ ಕಿರುಚಾಟ ಅವನ ಅಜ್ಜಿ ಪುಟ್ಟಮಾದಮ್ಮ ಹಾಗೂ ನೆರೆದಿದ್ದವರಿಗೆ ಗಾಬರಿ ಹುಟ್ಟಿಸಿತು. ಊಟದ ಎಲೆಯ ಮೇಲೆ ಬೋರಲಾಗಿ ಕುಳಿತು ಎಲೆ ಎತ್ತಲು ಬಿಡಲು ಅವಕಾಶ ಕೊಡದೆ ಒಂದೇಸಮನೆ ಚೀರತೊಡಗಿದ.

ಈ ಚೀರಾಟದಿಂದ ವಿಚಲಿತರಾದ ಜನರನ್ನು ನೋಡಿ, ಮಠದ ಅಂಗಳದಲ್ಲಿ ಕುಳಿತಿದ್ದ ರಾಜೇಂದ್ರ ಶ್ರೀಗಳು ಅಲ್ಲಿಗೆ ಧಾವಿಸಿ ಬಂದರು. ಏನಾಗಿದೆ ಎಂದು ವಿಚಾರಿಸಲು ಜನಸಂದಣಿಯನ್ನು ಸರಿಸಿ ನೋಡಿದರು. ಅಳುತ್ತಿದ್ದ ಮಗುವನ್ನು ಅಜ್ಜಿ ಸಮಾಧಾನಪಡಿಸುತ್ತಿದ್ದಳು. ಅಳು ನಿಲ್ಲುತ್ತಿರಲಿಲ್ಲ. ಆಗ ಶ್ರೀಗಳು ದೇವಪ್ಪನ ಹತ್ತಿರ ಬಂದು ಆತನ ತಲೆ ಸವರಿ, "ನೋಡಿಲ್ಲಿ, ಮಗು. ನಾನು ಬಂದಿದ್ದೇನೆ. ಅಳಬೇಡ, ಏನಾಯಿತು ಹೇಳು" ಎಂದರು. ಪುಟ್ಟ ಕೂಸು ದೇವಪ್ಪ "ನನ್ನ ಅನ್ನ ನನ್ನ ಅನ್ನ" ಎಂದಷ್ಟೇ ಬಿಕ್ಕಳಿಸುತ್ತ ತೊದಲಿತು. ಮಗುವಿನ ಮನಸ್ಸನ್ನರಿತ ರಾಜೇಂದ್ರ ಶ್ರೀಗಳು ಎಲೆ ಎತ್ತುತ್ತಿದ್ದವನಿಗೆ "ನೋಡು, ಈ ಮಗುವಿನ ಎಲೆ ಬಿಟ್ಟು ಮಿಕ್ಕದ್ದನ್ನು ಎತ್ತು" ಎಂದರು. ಅಡುಗೆಯವರನ್ನು ಕರೆದು ತಾವೇ ತಮ್ಮ ಕೈಯಿಂದ ಮಗುವಿಗೆ ಮತ್ತೆ ಅನ್ನ ಬಡಿಸಿದರು. ಅವನ ಊಟವಾಗುವವರೆಗೂ ಅಲ್ಲಿಯೇ ನಿಂತರು. ಶ್ರೀಗಳು ನಿಂತದ್ದರಿಂದ ಮಿಕ್ಕವರೂ ನಿಂತರು. ನಿಂತವರನ್ನು ತೆರಳಲು ಹೇಳಿ, ಊಟ ಮಾಡಿ ಮುಗಿಸಿದ ದೇವಪ್ಪನ ತಲೆ ನೇವರಿಸಿ "ಮಗು, ಹೊಟ್ಟೆ ತುಂಬಿತೆ?" ಎಂದರು ನಸುನಗುತ್ತ. ಆ ಪದದ ಅರ್ಥ ಪೂರ್ಣ ತಿಳಿಯದಿದ್ದರೂ ಮಗು ಸುಮ್ಮನೆ ತಲೆಯಾಡಿಸಿತು. ಆತನ ತಲೆ ನೇವರಿಸಿ 'ಒಳಿತಾಗಲಿ' ಎಂದು ಹರಸಿದರು ರಾಜೇಂದ್ರ ಶ್ರೀಗಳು. ''ಶ್ರೀಗಳು ಹಾಗೇ ಹರಸಿದಂದಿನಿಂದ ಇಂದಿನವರೆವಿಗೂ ಒಂದು ದಿನವೂ ನಾನು ಹಸಿದವನಲ್ಲ. ಹಸಿವಾದಾಗ ಯಾರಿಂದಲೋ ಎಲ್ಲಿಂದಲೋ ಆಹಾರ ಒದಗಿಬರುತ್ತದೆ. ಅಂದಿನಿಂದ ಇಂದಿನವರೆಗೂ ನನ್ನ ಪಾಲಿಗೆ ಅನ್ನ ಅಕ್ಷಯವಾಗಿದೆ" ಎಂದು ಭಾವುಕರಾಗಿ ಸ್ಮರಿಸಿಕೊಳ್ಳುತ್ತಾರೆ ದೇವಪ್ಪನವರು. ಅನಂತರದಲ್ಲಿ ಅವರು ಶ್ರೀಗಳವರ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು ಮತ್ತೊಂದು ವಿಶೇಷ.

□

# ಶಬರಶಂಕರ ವಿಲಾಸ–ಟೀಕು

**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**

ಮ॥ ಅನಲಾಕ್ಷಂಭೃತ ಖಡ್ಗಶೂಲವಿಲಸತ್ಖಟ್ವಾಂಗಢಕ್ಕಂಕನ ।
ತ್ಕನಕಾಂಗಂ ವೃಷವಾಹನಂ ಪ್ರವಿಲಸನ್ಮಾಹೇಶ್ವರಿಯುಕ್ತನೊ ।
ಲ್ದನಿಶಂ ದ್ವಾದಶಕೋಟಿ ಭೈರವಯುತಂ ಕಾದೊಪ್ಪುಗುಂ ಭೀಷ್ಮದಂ ।
ಷ್ಟ್ರನನಂತಂ ರುರುಭೈರವಂ ಹರಪುರೀಕಾಲಾಧ್ವದಿಗ್ದ್ವಾಗಮಂ ॥ ೫೮ ॥

**ಟೀಕ** ॥ ಅನಲಾಕ್ಷ – ಕೆಂಡಗಣ್ಣುಳ್ಳ, ಭೃತ – ಧರಿಸಲ್ಪಟ್ಟ, ಖಡ್ಗ – ಕತ್ತಿ, ಶೂಲ ಮುಮ್ಮೊನೆಯ ಕವಲಗೋಲು, ವಿಲಸತ್ – ಶೋಭಿಸುವ, ಖಟ್ವಾಂಗ – ಖೇಡ್ಯ, ಡಕ್ಕಾ – ಡೋಲು ಉಳ್ಳ, ಕನತ್ – ಹೊಳೆಯುವ, ಕನಕ – ಬಂಗಾರದ ಹಾಗಿರುವ, ಅಂಗಂ – ಮೈಯುಳ್ಳ, ವೃಷವಾಹನಂ – ಎತ್ತೇ ವಾಹನವಾಗಿಯುಳ್ಳ, ಪ್ರವಿಲತ್ – ಹೆಚ್ಚಾಗಿ ಬೆಳಗುತ್ತಿರುವ, ಮಾಹೇಶ್ವರಿ – ರುದ್ರಶಕ್ತಿಯೊಡನೆ, ಯುಕ್ತಂ – ಕೂಡಿದ, ಭೀಮದಂಷ್ಟ್ರಂ – ಭಯಂಕರವಾದ ಕೋರೆದಾಡೆಗಳುಳ್ಳ, ರುರುಭೈರವಂ – ರುರುವೆಂಬ ಭಯಂಕರವಾದ ಪ್ರಮಥನು, ದ್ವಾದಶಕೋಟಿ ಭೈರವಯುತಂ – ೧೨ ಕೋಟಿ ಮಂದಿ ಭೈರವರ ದಂಡಿನೊಂದಿಗೆ ಕೂಡಿದವನಾಗಿ, ಒಲ್ದು – ಒಪ್ಪಿ, ಅನಿಶಂ ಯಾವಾಗಲೂ, ಹರಪುರಿ – ಶಿವನಗರದ, ಕಾಲಾಧ್ವ – ಪ್ರಳಯಕಾಲಮಾರ್ಗರಾಗಿರುವ, ಅಗ್ನಿರುದ್ರನ, ದಿಕ್ – ದೆಶೆಯ, ದ್ವಾರಮಂ – ಬಾಗಿಲನ್ನು, ಕಾದು – ರಕ್ಷಿಸಿ, ಒಪ್ಪುಗುಂ – ಪ್ರಕಾಶಿಸುವನು ॥

**ತಾ॥** ಕೈಲಾಸದ ಆಗ್ನೇಯದ್ವಾರದಲ್ಲಿ ೧೨ ಕೋಟಿ ಭೈರವರೊಂದಿಗೆ ರುರುಭೈರವನು ಕಾವಲಾಗಿರುವನು॥ ಮತ್ತೇ ಭವಿಕ್ರೀಡಿತ ವೃತ್ತ ॥ ೫೮ ॥

ಮ॥ ಶುಕಶೂಲಾಯುಧವಜ್ರಶಕ್ತಿಧರನಾದಿತ್ಯಪ್ರಭಂ ಚಾರುಚಂ ।
ದ್ರಕಿವಾಹಂ ದಶಕೋಟಿಭೈರವಯುತಂ ಕಾಮಾರಿಯೆಂದೆಂಬ ಕಾಂ ।
ತೆ ಕರಂ ರಂಜಿಸೆ ಚಂಡಭೈರವನು ದಾರತ್ರ್ಯಂಬಕಂ ಕಾಮನಿಂ ।
ದಕಳಂಕಂಸಲೋಪಿಪಂ ರವಿಸುತಾ ಶಾದ್ವಾರಮಾಲೀಲೆಯಿಂ ॥ ೫೯ ॥

**ಟೀಕ॥** ಶುಕ – ಗಿಳಿ, ಶೂಲ – ಕವಲುಗೋಲಿನ ಆಯುಧ, ವಜ್ರ , ಸಿಡಿಲು, ಶಕ್ತಿ, ಮುಂತಾದ ಆಯುಧಗಳನ್ನು, ಧರಂ – ಹಿಡಿದಿರುವನು, ಆದಿತ್ಯಪ್ರಭಂ – ಸೂರ್ಯನ ಹಾಗೆ ಬೆಳಕುಳ್ಳ, ಚಾರುಚಂದ್ರಕಿವಾಹಂ – ಮನೋಹರವಾದ ನವಿಲು ವಾಹನವಾಗಿಯುಳ್ಳ, ದಶಕೋಟಿಭೈರವಯುತಂ – ಹತ್ತುಕೋಟಿ ಭೈರವರಿಂದ ಕೂಡಿದ, ಕಾಮಾರಿಯೆಂದೆಂಬ

ಕಾಂತೆ – ಕಾಮಾರಿಯೆಂಬ ಹೆಸರುಳ್ಳ ಪತ್ನಿಯು, ಕರಂ – ಚನ್ನಾಗಿ, ರಂಜಿಸೆ – ಬೆಳಗೆ, ಉದಾರತ್ರ್ಯಂಬಕಂ – ಅಗಲವಾದ ಮೂರು ಕಣ್ಣುಳ್ಳ, ಕಾಮನಿಂದ ಅಕಳಂಕಂ – ಮನ್ಮಥನಿಂದ ಕಳಂಕವಿಲ್ಲದೆ, ಎಂದರೆ ಜಿತೇಂದ್ರಿಯನಾದ, ಚಂಡಭೈರವಂ – ಚಂಡನೆಂಬ ಭೈರವನು, ಲೀಲೆಯಿಂ – ವಿನೋದದಿಂದ, ಆರವಿಸುತಾಶಾದ್ವಾರಂ – ಯಮದಿಕ್ಕಿನ ಬಾಗಿಲನ್ನು, ಸಲೆ – ಚನ್ನಾಗಿ, ಸೇವಿಪಂ – ಕಾದಿರುವನು ॥

**ತಾ॥** ಕೈಲಾಸದ ದಕ್ಷಿಣ ಬಾಗಿಲಿಗೆ ಹತ್ತು ಕೋಟಿ ಭೈರವರಿಗೊಡಿಯನಾದ ಚಂಡಭೈರವನು ಕಾವಲಾಗಿರುವನು. ಮತ್ತೇ ಭವಿಕ್ರೀಡಿತ ವೃತ್ತ ॥

ವೃ॥ ಗರುಡಾರೂಢನುಪಾತ್ತ ಚಕ್ರಜಲಜಂಕೌಮೋದಕೀಶಾರ್ಙ್ಗ ಮೊ ।
ಪ್ಪಿರೆ ನಾರಾಯಣೀಗೂಡಿ ನೈಋತದಿಶಾದ್ವಾರಸ್ಥಿತಂ ಕಣ್ಗೆ ಬಂ ।
ಧುರನಾದಂ ಸಲೆ ಪಂಚಕೋಟಿ ಗಣಿತೋದ್ಯದ್ಭೈರವರ್ಸೇವಿಸು ।
ತ್ತಿರೆ ತನ್ನಂ ಘನಯೋಗಿನೀಪರಿವೃತಂ ಕ್ರೋಡಾಹ್ವಯಂ ಭೈರವಂ ॥ ೬೦ ॥

**ಟೀಕ॥** ಗರುಡಾರೂಢಂ – ಗರುಡನನ್ನು ಏರಿದ, ಉಪಾತ್ತ – ಹೊಂದಲ್ಪಟ್ಟ, ಚಕ್ರಜಲಜಂ – ಚಕ್ರವೂ ಶಂಖವೂ ವುಳ್ಳ, ಕೌಮೋದಕೀ ಶಾರ್ಙ್ಗಂ – ಗದೆಯೂ ಬಿಲ್ಲೂ ಒಪ್ಪಿ – ಇರಲಾಗಿ, ನಾರಾಯಣಿಯೆಂಬ ಹೆಂಡತಿಯೊಡನೆ ಕೂಡಿ, ಕ್ರೋಡಾಹ್ವಯಂ– ಕ್ರೋಡನೆಂಬ ಹೆಸರುಳ್ಳ ಭೈರವನು, ಘನಯೋಗಿನೀ ಪರಿವೃತಂ – ಮಹಾಯೋಗಿನೀ ಶಕ್ತಿಗಣಗಳಿಂದ ಬಳಸಲ್ಪಟ್ಟವನಾಗಿ ತನ್ನನ್ನು, ಪಂಚಕೋಟಿ ಗಣಿತೋದ್ಯದ್ಭೈರವರ್ – ಐದು ಕೋಟಿ ಲೆಕ್ಕವುಳ್ಳ ಮಹಾಭೈರವರು, ಸೇವಿಸುತ್ತ – ಪರಿಚರಿಸುತ್ತ, ಇರೆ – ಇರಲಾಗಿ, ನೈಋತ್ಯ ದಿಶಾದ್ವಾರಸ್ಥಿತಂ – ನೈಋತ್ಯ ದಿಕ್ಕಿನ ಬಾಗಿಲಿನಲ್ಲಿರುವವನಾಗಿ, ಸಲೆ – ಚನ್ನಾಗಿ, ಕಣ್ಗೆ – ದೃಷ್ಟಿಗೆ, ಬಂಧುರಂ – ಚಲುವನು, ಆದಂ – ಆದನು.

**ತಾ॥** ನೈಋತ್ಯದ ಬಾಗಿಲಿಗೆ ಐದು ಕೋಟಿ ಭೈರವರಿಗೆ ಪತಿಯಾದ ಕ್ರೋಡಭೈರವನು ಕಾವಲಾಗಿರುವನು ॥ ಮತ್ತೇ ಭವಿಕ್ರೀಡಿತ ವೃತ್ತ ॥

**ಮ॥** ನವಮೇಘಾಂಶು ಜಟಾಧರಂ ಮುಸಲಶಂಖಂ ಖೇಟಕಂಖಡ್ಗಮೊ ।
ಪ್ಪುಮಾಲ್ದೋಳ್ದಳಿನಾರು ಕೋಟಿಭಟರಂದೊಪ್ಪಿರ್ದು ವಾರಾಹಿಯೆಂ ।
ಬವಳೋಳ್ಕೂಡಿ ಉಲಾಯವಾಹನದ ಕಣ್ಗಿಂಬಾದನುನ್ಮತ್ತಭೈ ।
ರವನುದ್ಯದ್ವರುಣಾಶೆಯೋಳ್ಪುರದ ಬಾಗಿಲ್ವಾಡದೋಳ್ಕೂಲಿಯ ॥ ೬೧ ॥

**ಟೀಕ॥** ನವಮೇಘಾಂಶು ಜಟಾಧರಂ – ಹೊಸ ಮೇಘದಂತೆ ಕಿರಣಗಳುಳ್ಳ ಜಡೆಗಳನ್ನು ಧರಿಸಿದ, ಮುಸಲ – ಒನಕೆಯು, ಶಂಖವುಂ, ಖೇಟಕಂ–ಖೇಡ್ಯವು, ಖಡ್ಗವು, ಒಪ್ಪುತಿರುವ, ನಾಲ್ದೋಳ್ಗಳಿಂ – ನಾಲ್ಕು ಬಾಹುಗಳಿಂದ ಕೂಡಿದವನಾಗಿ, ಆರು ಕೋಟಿ ಭಟರಿಂ – ಸೈನಿಕರಿಂದ, ಒಪ್ಪಿಯಿರ್ದು, ವಾರಾಹಿಯೆಂಬ ಅವಳೋಳ್ – ಸತಿಯೊಡನೆ ಕೂಡಿ, ಉಲಾಯ ವಾಹನದ – ಕಾಡುಕೋಣನ ವಾಹನದಿಂದ,

ಉದ್ಯದ್ವರುಣಾಶೆಯೋಳ್ – ಹೆಚ್ಚಾದ ಪಡುವಲ ಕಡೆಯಲ್ಲಿ, ಕೂಲಿಯಪುರದ – ಶಿವನಗರದ, ಬಾಗಿಲ್ವಾಡದೋಳ್ – ಬಾಗಿಲ ಚೌಕಟ್ಟಿನ ಬಳಿಯಲ್ಲಿ, ಕಣ್ಗೆ ಇಂಬಾದಂ – ಚನ್ನಾಗಿ ಕಾಣಿಸುವನು.

**ತಾ** ॥ ಪಡುವಲ ಬಾಗಿಲಿನಲ್ಲಿ ಆರು ಕೋಟಿ ಭೈರವರಿಗೆ ಪತಿಯಾದ ಉನ್ಮತ್ತಭೈರವನು ಕಾವಲಾಗಿರುವನು ॥ ಮತ್ತೇ ಭವಿಕ್ರೀಡಿತ ವೃತ್ತ ॥ ೬೧ ॥

ಚಂ॥ ಅಡರ್ದು ಮದೇಭಮಂ ಪಿಡಿದು ಶಕ್ತಿಧನುಃಪರಿಘತೋಮರಂಗಳಂ ।
ಜಡೆಕನಕಾಂಶು ರಂಜಿಪೊಡವಿಂ ಶಶಿಯೆಂಬಳೂಳೊಂದಿ ರಂಜಿಸು ।
ವೆಡವಲದೋಳ್ತ್ರಿಕೋಟಿಸಮಸಾಹಸ ಭೈರವರೊಪ್ಪಿಕಾದು ನಿಂ ।
ದೊಡೆ ನೆಸದಂಮರುದ್ದೆಸೆಯ ಬಾಗಿಲೊಳೊಲ್ದು ಕಪಾಲಿಭೈರವಂ ॥ ೬೨ ॥

**ಟೀಕ**॥ ಮಬದೇಭಮಂ – ಮದಿಸಿದ ಆನೆಯನ್ನು, ಅಡರ್ದು – ಏರಿ, ಶಕ್ತಿಧನುಃ ಪರಿತೋಮರಂಗಳಂ – ಶಕ್ತ್ಯಾಯುಧ, ಬಿಲ್ಲು, ಪರಿಘ, ತೋಮರಗಳನ್ನು, ಪಿಡಿದು – ಹಿಡಿದು, ಬಿಡದೆ – ಯಾವಾಗಲೂ, ಕನಕಾಂಶು ರಂಜಿಪ – ಬಂಗಾರದ ಕಿರಣಗಳು ಹೊಳೆಯುತ್ತಿರುವ, ಒಡಲಿಂ – ಮಯ್ಯೊಡನೆ ಶಶಿಯೆಂಬಳು ಒಂದಿ – ಶಶಿಯೆಂಬ ಮಡದಿಯಂ ಕೂಡಿ, ರಂಜಿಸುತ್ತ – ಪ್ರಕಾಶಿಸುತ್ತ, ಎಡವಲದೋಳ್ – ಇರ್ಕೆಲದಲ್ಲಿ, ತ್ರಿಕೋಟಿ – ಮೂರು ಕೋಟಿ ಲೆಕ್ಕವುಳ್ಳ, ಸಮಸಾಹಸ – ತನಗೆ ಸರಿಯಾದ ಶಕ್ತಿಯುಳ್ಳ ಭೈರವರು, ಒಪ್ಪೆ – ಒಪ್ಪುತಿರಲಾಗಿ, ಒಡನೆ – ಕೂಡೆ, ಕಪಾಲಿಭೈರವಂ – ಕಪಾಲಿ ಎಂಬ ಭೈರವನು, ಮರುದ್ದೆಶೆಯ – ವಾಯುದಿಕ್ಕಿನ ಬಾಗಲೊಳು, ಒಲ್ದು – ಒಪ್ಪಿ, ಕಾದುನಿಂದು – ಕಾಯುತ್ತಾ ನಿಂದು, ಎಸೆದಂ = ಬೆಳಗಿದನು ॥

ತಾ॥ ವಾಯುಕೋಣದ ಬಾಗಲಿಗೆ ಮೂರುಕೋಟಿ ಭೈರವರೊಡನೆ ಕಪಾಲಿ ಭೈರವನು ಕಾವಲಾಗಿರುವನು ॥ ಚಂಪಕಮಾಲಾವೃತ್ತ ॥ ೬೨ ॥

ಉ॥ ಮಂಡಿಸಿ ಕಾಕವಾಹನದ ಘಂಟಕೆ ಶೂಲಕಪಾಲಿ ಢಕ್ಕೆಗ ।
ಳ್ಚಂಡಕರಂಗಳೊಳ್ಪೆಳೆಯೆವನ್ನೆರಡೊಂದಿದ ಕೋಟಿಭೈರವ ।
ರ್ತಂಡದೆಸೇವಿಸುತ್ತಿರೆ ಕುಬೇರದಿ ವಿಶ್ರಾಂತಿ ನಿರ್ದನಲ್ಲಿಚಾ ।
ಮುಂಡಿಯೊಳೊಂದಿ ಧೂಮರುಚಿಕಾಯಒ ಭೀಷಣನೆಂಬ ಭೈರವಂ ॥ ೬೩ ॥

**ಟೀಕ**॥ ಕಾಕವಾಹನದ – ಕಾಗೆಯೆಂಬ ಸ್ವಾರಿಯ ಮೇಲೆ, ಘಂಟಕೆ – ಘಂಟೆಯೂ, ಕೂಲಕಪಾಲಢಕ್ಕೆಗಳ್ – ಕವಲುಗೋಲು, ಕಪ್ಪುರವು, ಡಕ್ಕೆಯೂ, ಚಂಡಕರಂಗಳೋಳ್ – ಪ್ರಬಲ ಹಸ್ತಗಳಲ್ಲಿ, ಪೊಳೆಯೆ – ಹೊಳಿಯೆ, ಪನ್ನೆರಡು – ಹನ್ನೆರಡು, ಒಂದಿದ ಪೊಂದಿದ – ಕೋಟಿ ಲೆಕ್ಕವುಳ್ಳ ಭೈರವರು, ತಂಡದೆ – ಗುಂಪಿನೊಡನೆ, ಸೇವಿಸುತ್ತ– ಆಜ್ಞಾನುವರ್ತಿಗಳಾಗಿ, ಇರೆ – ಇರಲಾಗಿ, ಚಾಮುಂಡಿಯೋಳ್ – ಚಾಮುಂಡಿಯೆಂಬ ಶಕ್ತಿಯೊಡನೆ, ಒಂದಿ – ಕೂಡಿ, ಧೂಮರುಚಿಕಾಯದ – ಹೊಗೆಯ ಕಾಂತಿಯುಳ್ಳ ಮೈಯುಳ್ಳ, ಭೀಷಣನೆಂಬ ಭೈರವನು, ಕುಬೇರದ ಕಾಶ್ರಿತಂ – ವುತ್ತರ ದಿಕ್ಕಿನಲ್ಲಿರುವನಾಗಿ – ಅಲ್ಲಿ, ಆಬಾಲಕನಲ್ಲಿ, ಇರ್ದಂ – ಇದ್ದನು.

ತಾ॥ ಉತ್ತರ ದ್ವಾರದಲ್ಲಿ ಹನ್ನೆರಡು ಕೋಟಿ ಭೈವರೊಡನೆ ಭೀಷಣಭೈರವನು ಕಾವಲಾಗಿರುವನು. ಉತ್ಪಲಮಾಲಾವೃತ್ತ ॥ ಭ, ರ, ನ, ಭ, ಭ, ರ, ಗಣಗಳೂ ೧ ಲಘು, ೧ ಗುರು, ಪಾದಕ್ಕೆ ೨೦ ಅಕ್ಷರವುಳ್ಳ ಕೃತಿಛಂದಸ್ಸಿನಲ್ಲಿ ಹುಟ್ಟಿದ್ದು – ೮ನೆಯ ಅಕ್ಷರ ಯತಿಸ್ಥಾನವು ॥ ೬೩ ॥

**ಮ॥ಸ್ರ॥** ಗಿರಿಕಾರೂಢಂ ಗದಾಖೇಟಕಫಲಕ ಮಹಾಖಡ್ಗಹಸ್ತಂ ಸುವರ್ಣ ।
ಸ್ಫುರಿತಾಂಗಂ ಫಾಲನೇತ್ರಂ ಸ್ವಸಮಬಲಲಸದ್ಭೈರವರ್ಕೋಟಿ ಎಂಟೊ
ಪ್ಪಿರೆ ಸಂಹಾರಾಖ್ಯನಿರ್ಪಂಬಳವೆರಸಿ ಮಹಾಕಾಳಿಯಾಣ್ಮಂಕಳಾಭಾ ।
ಸುರನೊಲ್ದೀಶಾನ ದಿಗ್ಭಾಗದೊಳೆ ವಿಭವದಿಂ ಭೈರವಂ ಭಸ್ಮಭೂಷಂ ॥ ೬೪ ॥

**ಟೀಕ॥** ಗಿರಿಕಾರೂಢಂ – ಉಡುತೆಯನ್ನು ಏರಿದ, ಗದಾಖೇಟಕ ಫಲಕ – ಮಹಾಖಡ್ಗ, ಹಸ್ತಂ – ಗದೆ, ಗುರಾಣಿ, ಹಲಗೆ, ಕತ್ತಿ, ಕೈಯಲ್ಲುಳ್ಳ, ಸುವರ್ಣಸ್ಫುರಿತಾಂಗಂ – ಬಂಗಾರದಂತೆ ಹೊಳೆಯುವ ಮೈಯುಳ್ಳ, ಫಾಲನೇತ್ರಂ – ಹಣೆಯಲ್ಲಿ ಕಣ್ಣುಳ್ಳ, ಎಂಟು ಕೋಟಿ ಲೆಕ್ಕವುಳ್ಳ, ಸ್ವಸಮಬಲಲಸತ್ – ತನ್ನೊಡನೆ ಸಮಾನವಾದ ಬಲದಿಂದ ಶೋಭಿಸುವ ಭೈರವರು ಒಪ್ಪಿಯಿರಲಾಗಿ, ಕಾಳಿಯ ಆಣ್ಮಂ – ಕಾಳಿಕಾದೇವಿಗೆ ಗಂಡನಾದ, ಭಸ್ಮಭೂಷಂ – ಭಸಿತಮೇ ಆಭರಣವಾಗಿಯುಳ್ಳ, ಕಳಾಭಾಸುರಂ – ಕಳೆಗಳಿಂದ ಶೋಭಿಸುವ, ಭೈರವರು ಒಪ್ಪಿಯಿರಲಾಗಿ, ಕಾಳಿಯಆಣ್ಮಂ – ಕಾಳಿಕಾದೇವಿಗೆ ಗಂಡನಾದ, ಭಸ್ಮಭೂಷಂ – ಭಸಿತವೇ ಆಭರಣವಾಗಿಯುಳ್ಳ, ಕಳಾಭಾಸುರಂ – ಕಳೆಗಳಿಂದ ಶೋಭಿಸುವ, ಭೈರವಂ ಸಂಹಾರಾಖ್ಯಂ – ಸಂಹಾರನೆಂಬ ಹೆಸರುಳ್ಳ ಭೈರವನು, ಪಡೆವೆರಸಿ – ದಂಡಿನಿಂದ ಕೂಡಿ, ಈಶಾನ್ಯದಿಗ್ಭಾಗದೊಳ್ – ಈಶಾನ್ಯ ದಿಕ್ಕಿನ ಪ್ರಾಂತದಲ್ಲಿ, ವಿಭವದಿಂ – ಐಶ್ವರ್ಯದೊಡನೆ, ಒಲ್ದು – ಒಪ್ಪಿ, ಇರ್ಪಂ – ಇರುವನು.

**ತಾ** ॥ ಕೈಲಾಸದ ದೇವಮೂಲೆಯ ಬಾಗಿಲಿನಲ್ಲಿ ಎಂಟು ಕೋಟಿ ಭೈರವರಿಗೊಡೆಯನಾದ ಸಂಹಾರಭೈರವನು ಕಾವಲಾಗಿರುವನು ॥ ಮಹಾಸ್ರಗ್ಧರಾವೃತ್ತ ॥ ೬೪ ॥

ವ॥ ಇಂತು ಸಂತತಮೆಸವ ಪೃಥುಬಲರೆನಿಪಷ್ಟಭೈರವರ ಕಾಪಿನಸೀಮೆಯಿಂದೊಳಗೆ ಫಣಿವರಂಗಾದೊಡೆ ಮಣಿಸಲರಿದೆನಿಪಪೆಂಪಂ ಪಡೆದತಿಪ್ರಕಾಶ ಮನತಿಕೌತುಕಮನತ್ಯಂತ ವೈಭವಮನುರುತರ ಸೌಂದರ್ಯಮನೊಳಕೊಂಡು ಕಣ್ಗೆ ಮಂಗಳಮಾಗಿ ಮನಕೆ ಮನೋಹರಮೆನೆ ಸೊಗಯಿವ ಶಿವರಾಜಧಾನಿಯಲ್ಲಿ

**ಟೀಕು॥** ಇಂತು – ಹೀಗೆ, ಸಂತತಂ – ಯಾವಾಗಲೂ, ಎಸೆವ – ಶೋಭಿಸುವ, ಪೃತುಬಲರ್ಯೆನಿಪ – ವಿಸ್ತಾರವಾದ ಬಲವುಳ್ಳವರು ಎನ್ನಿಸಿಕೊಂಡು, ಅಷ್ಟಭೈರವರ – ಎಂಟು ಮಂದಿ ಭಯಂಕರರಾದ ರುದ್ರಮೂರ್ತಿಗಳ, ಕಾಪಿನ – ಕಾವಲುಳ್ಳ, ಸೀಮೆಯಿಂದ ಒಳಗೆ – ಸ್ಥಲದಲ್ಲಿ, ಫಣೀ ವರಂಗೆ – ಶೇಷನೆಂಬ ಸರ್ಪರಾಜಂಗೆ, ಆದೊಡಂ – ಆದರೂ, ಉಣಿಸಲ್ – ಲೆಕ್ಕಿಸಲು, ಅರಿದೆನಿಪ – ತಿಳಿಯದೆನಿಸುವ, ಪೆಂಪಂ – ಅಭಿವೃದ್ಧಿಯನ್ನು, ಪಡೆದ – ತಳೆದ, ಅತಿಪ್ರಕಾಶಮಂ – ಹೆಚ್ಚು ಬೆಳಕನ್ನೂ,

ಅತಿಕೌತುಕಮಂ – ಬಹಳ ಅಪೇಕ್ಷೆಯನ್ನೂ, ಅತ್ಯಂತವೈಭವಮಂ – ಹೆಚ್ಚು ವ್ಯಾಪ್ತಿಯನ್ನು, ಉರುತರಸೌಂದರ್ಯಮಂ – ಅತ್ಯಧಿಕವಾದ ಚಲುವಿಕೆಯನ್ನು, ಒಳಕೊಂಡು – ಪಡದು, ಕಣ್ಗೆ – ನೋಟಕ್ಕೆ, ಮಂಗಳವಾಗಿ – ಶುಭವಾಗಿ, ಮನಕೆ – ಚಿತ್ತಕ್ಕೆ, ಮನೋಹರಮೆನೆ – ರುಚ್ಯವೆಂಬಂತೆ, ಸೊಗಯಿಪ – ಸುಖವನ್ನುಂಟುಮಾಡುವ, ಶಿವರಾಜಧಾನಿಯಲ್ಲಿ, ಪರಮೇಶ್ವರನ ಪ್ರಧಾನ ನಗರವಾದ ಕೈಲಾಸಪುರದಲ್ಲಿ ॥

ಚ॥ ಘನತರಮಾಗಿ ಪೂರ್ವದೆಶೆಯಲ್ಲಿರುಗಾಗಮಮೇಕಲಕ್ಷಯೋ ।
ಜನಮಿಸೆಗೋಪುರಾಕೃತಿಯೊಳೊಪ್ಪುಗುಮಿಂದುವಳರ್ಕ್ಷಮಲ್ಲಿ ಕಾಂ ॥
ಚನಮಯವೇತ್ರಹಸ್ತನೆಸೆಗುಂ ಚತುರರ್ಬುದಸದ್ಗಣಾವೃತಂ ।
ವನಜಭವಾದಿಗಳ್ಸಮಯಮಂ ಸಲೆ ಪಾರ್ದಿರೆ ನಂದಿಕೇಶ್ವರಂ ॥ ೬೫ ॥

ಪೂರ್ವದೆಶೆಯಲ್ಲಿ – ಮೂಡಲ ಕಡೆಯೊಳಗೆ, ಋಗಾಗಮಂ – ಋಗ್ವೇದವು, ಏಕಲಕ್ಷ ಯೋಜನ ಮಿತಗೋಪುರ – ಒಂದು ಲಕ್ಷ ಗಾವುದಗಳಾಗಿ ಅಳೆಯಲ್ಪಟ್ಟ ಗೋಪುರವುಳ್ಳ, ಆಕೃತಿಯೊಳು – ಆಕಾರದಿಂದ, ಘನತರಮಾಗಿ – ಬಹಳ ದೊಡ್ಡದಾಗಿ, ಒಪ್ಪುಗುಂ – ಪ್ರಕಾಶಿಸುವುದು, ಅಲ್ಲಿ – ಆ ಗೋಪುರದ್ವಾರದಲ್ಲಿ, ಇಂದುವಳರ್ಕ್ಷಂ – ಚಂದ್ರನಂತೆ ಬಿಳುಪಾದ, ಕಾಂಚನಮಯವೇತ್ರ ಹಸ್ತಂ – ಬಂಗಾರದ ಬೆತ್ತವು ಕೈಯೊಳಗುಳ್ಳ, ಚತುರರ್ಬುದ ಸದ್ಗಣಾವೃತಂ – ೪,೦೦೦ ಕೋಟಿ ರುದ್ರಗಣಗಳಿಂದ ಬಳಸಲ್ಪಟ್ಟವ ನಾಗಿರುವ, ನಂದಿಕೇಶ್ವರಂ – ನಂದೀಶನು, ವನಜಭವಾದಿಗಳ್ – ಬ್ರಹ್ಮ ಮುಂತಾದವರು, ಸಲೆ – ಚನ್ನಾಗಿ, ಸಮಯಮಂ – ಹೊತ್ತನ್ನು, ಪಾರ್ದು – ನಿರೀಕ್ಷಿಸಿ ಕೊಂಡು, ಇರೆ – ಇರಲಾಗಿ, ಒಪ್ಪುಗುಂ – ಪಳಗುವನು ॥ ಚಂಪಕಮಾಲಾವೃತ್ತ ॥ ೬೫ ॥

ಚ॥ ತೊಳಗಿದುದೇಕಲಕ್ಷಮಿತಯೋಜನದುದ್ದದ ನೀಲವರ್ಣಮು ।
ಜ್ವಳಿಸಿರೆ ಗೋಪುರಾಕೃತಿಯನಾಳ್ದು ಯಜುಶ್ರುತಿದಕ್ಷಿಣಾಶೆಯೋ ।
ಳ್ಬಳವದನಂತರೋಮಜಗಣಾವೃತನಲ್ಲಿ ವಿರಾಜಿಪಂ ವಧೂ ।
ವಿಳಸಿತ ವೀರಭದ್ರವಿಭುಖಡ್ಗಧನುಶ್ಶರಖೇಟಕಾನ್ವಿತಂ ॥ ೬೬ ॥

**ಟೀಕ**॥ ದಕ್ಷಿಣಾಶೆಯೋಳ್ – ತೆಂಕಲ ಕಡೆಯಲ್ಲಿ, ಏಕಲಕ್ಷ ಮಿತಯೋಜನದ – ಒಂದು ಲಕ್ಷ ಗಾವುದದ ಅಳತೆಯ, ಉದ್ದದ – ಎತ್ತರ ಉಳ್ಳ, ಗೋಪುರಾಕೃತಿಯನಾಳ್ದು – ಹೊರಬಾಗಿಲ ಆಕಾರವಂ ತಳೆದು, ನೀಲವರ್ಣಂ – ಕಪ್ಪು ಬಣ್ಣವು, ಉಜ್ವಲಿಸಿಯಿರೆ – ಬೆಳಗಿಯಿರಲು, ಯಜುಶ್ರುತಿ – ಯಜುರ್ವೇದವು, ತೊಳಗಿದುದು – ಪ್ರಕಾಶಿಸಿತು, ಅಲ್ಲಿ – ಆ ತೆಂಕಲ ಬಾಗಿಲಿನಲ್ಲಿ, ಬಲವೃತಂ ಬಲವತ್ – ಬಲವುಳ, ಅನಂತ – ನಾಶವಿಲ್ಲದ, ರೋಮಜ – ರುದ್ರನ ಜಡೆಯ ಕೂದಲಿನಿಂದೊಗೆದ, ಅಥವಾ, ಅನಂತರೋಮ – ಆಕಾಶವೇ ಕೂದಲಾಗಿವುಳ್ಳ ವ್ಯೋಮಕೇಶನಾದ, ಈಶ್ವರನ ದೆಶೆಯಿಂದ, ಜ–ಹುಟ್ಟಿದ, ಗಣ–ಪ್ರಮಥಗಣಗಳಿಂದ, ಆವೃತಂ – ಬಳಸಲ್ಪಟ್ಟಿರುವನಾದ, ಖಡ್ಗ – ಕತ್ತಿ, ಧನು – ಬಿಲ್ಲು, ಶರ–ಬಾಣ – ಖೇಟಕ, ಖೇಡ್ಯಗಳಿಂದ, ಅನ್ವಿತಂ – ಕೂಡಿರುವ,

ವಧೂವಿಲಸಿತ – ಭದ್ರಕಾಳಿಯೆಂಬ ಪತ್ನಿಯಿಂ ಕೂಡಿದ, ವೀರಭದ್ರವಿಭು – ವೀರಭದ್ರ ದೇವರು, ವಿರಾಜಿಪಂ – ವಿಶೇಷವಾಗಿ ಬೆಳಗುತ್ತಿರುವನು ॥ ೬೬ ॥

ಚ॥ ಅತಿಸಿತಮೇಕಲಕ್ಷಪರಿಲಕ್ಷಿತಯೋಜನದುದ್ದಮಾಳ್ದು ನೀ ।
ಳ್ದತಿಶಯಸಾಮವೇದಮದು ಗೋಪುರಮಾಗಿ ವಿರಾಜಕುಂ ಪಯಃ ।
ಪತಿದೆಶೆಯೋಳ್ಬಳಿಕ್ಕದರ ವಂಕದೊಳೊಪ್ಪುಗುಮುಜ್ವಳಾಂಗನ ।
ನಿತ್ಯ ಬಹುಸಂಖ್ಯ ರುದ್ರಗಣಸೇವಿತನಗ್ಗದ ನೀಲಲೋಹಿತಂ ॥ ೬೭ ॥

**ಟೀಕ॥** ಅತಿಸಿತಂ – ಬಹಳ ಬಿಳುಪಾದ, ಒಂದು ಲಕ್ಷ ಪರಿಲಕ್ಷಿತ ಯೋಜನದ – ಒಂದು ಲಕ್ಷವೆಂದು ಲೆಕ್ಕಿಸಿ ನೋಡಲ್ಪಟ್ಟ ಗಾವುದಗಳುಳ್ಳ, ಉದ್ದಂ – ಉದ್ದವನ್ನು, ಆಳ್ದು – ಪೋಷಿಸಿ, ನೀಳ್ದ – ನೀಳವಾದ, ಅತಿಶಯ ಸಾಮವೇದಮದು – ಅತಿಶಯವಾದ ಆ ಸಾಮವೇದವು, ಪಯಃಪತಿದೆಸೆಯೋಳ್ – ಪಡುವಣ ಕಡೆಯಲ್ಲಿ ಗೋಪುರವಾಗಿ, ವಿಮಾನಾಕಾರವಾಗಿ, ವಿರಾಜಿಕುಂ – ಬೆಳಗುತ್ತಿರುವುದು, ಆಮೇಲೆ, ಅದರ – ಆ ಗೋಪುರದ, ವಂಕದೋಳ್ – ಬಳಿಯಲ್ಲಿ, ಉಜ್ವಲಾಂಗಂ – ಹೊಳೆಯುತ್ತಿರುವ ಮೈಯುಳ್ಳ, ಅನ್ವಿತ ಬಹುಸಂಖ್ಯ ರುದ್ರಗಣ ಸೇವಿತಂ – ತನ್ನೊಡಗೂಡಿರುವ ಬಹು ಸಂಖ್ಯೆಯ ರುದ್ರಗಣಂಗಳಿಂದ ಸೇವಿಸಲ್ಪಟ್ಟವನಾದ, ಅಗಡ – ಸಾಮರ್ಥ್ಯವುಳ್ಳ, ನೀಲಲೋಹಿತಂ – ನೀಲಲೋಹಿತ ರುದ್ರನು, ಒಪ್ಪುಗುಂ – ಚನ್ನಾಗಿರುವನು. ॥ ಚಂಪಕಮಾಲಾವೃತ್ತ ॥ ೬೭ ॥

**ಮ॥** ಗಣಿತಂ ಗಾವುದಮೊಂದುಲಕ್ಷಮನೆ ಕೈಕೊಂಡುದ್ದಮಂಥನದ ।
ರ್ವಣವೇದಂ ಘನಗೋಪುರಾಕೃತಿಯೊಳಿರ್ಕುಂ ತಾಳ್ದು ಪೊಂಬಣ್ಣಮ ।
ಪ್ರಣುತಾಂಗಂ ಬಡಗಲ್ಗಣಾಳಿಸಹಿತಂ ತದ್ವಾರದೋಳ್ಶೌರ್ಯಭೂ ।
ಷಣನಿರ್ಪಂ ಪುದಿದೇಳ್ಗೆಯಿಂ ಸಲೆ ಮಹಾಕಾಳಂ ಕರಾಳಾಯುಧಂ ॥ ೬೮ ॥

**ಟೀಕ॥** ಗಣಿತಂ – ಲೆಕ್ಕವು, ಒಂದು ಲಕ್ಷ ಗಾವುದ ಮನೆ – ಒಂದು ಲಕ್ಷ ಗಾವುದವೆಂಬುವ ಹಾಗೆ, ಉದ್ದಮಂ ಕೈಕೊಂಡು – ಉದ್ದಮಂಪಡೆದು, ಬಡಗಲ್ – ಉತ್ತರದ, ಘನಗೋಪುರಾಕೃತಿಯೊಳು – ದೊಡ್ಡ ಗೋಪುರದ ಆಕಾರದೊಡನೆ, ಅಥರ್ವಣವೇದಂ ತಾಂ – ಅಥರ್ವಣ ವೇದಮಂ ತಾನು, ಪೊಂಬಣ್ಣಮಂ – ಬಂಗಾರದ ಬಣ್ಣಮಂ ತಾಳ್ದು ಧರಿಸಿ, ಇರ್ಕುಂ – ಇರುವದು, ತದ್ವಾರದೋಳ್ – ಆ ಬಾಗಿಲಿನಲ್ಲಿ, ಗಣಾಳಿಸಹಿತಂ – ಗಣಗಳ ಸಾಲುಗಳಿಂದ ಕೂಡಿದವನಾಗಿ, ಪ್ರಣುತಾಂಗಮಂ – ಕೊಂಡಾಡಲ್ಪಟ್ಟ ಮೈಯುಳ್ಳ, ಶೌರ್ಯಭೂಷಣಂ – ಶೂರತ್ವವೇ ತೊಡವಾಗಿರುವ, ಕರಾಳಾಯುಧಂ – ಭಯಂಕರವಾದ (ಅಗಲವಾದ) ಆಯುಧವುಳ್ಳ, ಮಹಾಕಾಳಂ – ಮಹಾಕಾಲನು, ಸಲೆ – ಚನ್ನಾಗಿ, ಏಳ್ಗೆಯಿಂ – ಉಚ್ಛ್ರಾಯದಿಂದ, ಪುದಿದು – ತುಂಬಿ, ಇರ್ಪಂ – ಇರುವನು. ಮತ್ತೇಭವಿಕ್ರೀಡಿತ ವೃತ್ತ ॥ ೬೮ ॥

**ಚ॥** ಬಳಸಿಡಿದಿರ್ದ ಮಾಣಿಕದ ಮಂಟಪರಾಜಿಯ ರಮ್ಯಹರ್ಮ್ಯಸಂ ।
ಕುಳದ ಕನತ್ಸುವರ್ಣಮಯ ಕಾಲದನಾಲ್ದೆಸೆಗೋಪುರಂಗಳು ।
ಜ್ವಲಿಸುವ ದ್ವಾರವಟ್ಟದ ಬೆಡಂಗಮರ್ದೊಪ್ಪಿರೆಮಧ್ಯದಲ್ಲಿ ಕಂ ।
ಗೊಳಿಸಿದುದೇಕಕೋಟಿಮಿತಯೋಜನದೋಲಗಸಾಲೆ ಶೂಲಿಯ ॥ ೬೯ ॥

**ಟೀಕ** ॥ ಬಳಸಿ – ಸುತ್ತಿಕೊಂಡು, ಇಡಿದಿರ್ದ – ತುಂಬಿ ಇರುವ, ಮಾಣಿಕದ – ಕೆಂಪುಗಳ (ರತ್ನಗಳ), ಮಂಟಪದ – ಚಪ್ಪರದ ಮನೆಗಳ, ರಾಜಿಯ–ಸಾಲುಳ್ಳ, ರಮ್ಯ – ಮನೋಹರವಾದ, ಹರ್ಮ್ಯ – ಉಪ್ಪರಿಗೆಗಳ, ಸಂಕುಲದ – ಗುಂಪುಳ್ಳ, ಕನತ್ ಬೆಳಗುವ, ಸುವರ್ಣಮಯ – ಬಂಗಾರದ, ಹೆಚ್ಚಾಗಿಯುಳ್ಳ – ಸಾಲದ ಪಡಸಾಲೆಗಳುಳ್ಳ, ನಾಲ್ದೆಸೆ – ನಾಲ್ಕು ಕಡೆಗಳ, ಗೋಪುರಂಗಳು – ದ್ವಾರವಿಮಾನಂಗಳು, ಉಜ್ವಲಿಸುವ – ಪ್ರಕಾಶಿಸುತ್ತಿರುವ, ದ್ವಾರಪಟ್ಟದ – ಬಾಗಿಲುವಾಡದ, ಬೆಡಂಗು – ಸೊಗಸು, ಆಮರ್ದು – ಅಣಿಯಾಗಿ, ಒಪ್ಪಿರೆ – ಹೊಂದಿಕೆಯಾಗಿರಲು, ಮಧ್ಯದಲ್ಲಿ – ನಡುವೆಯೊಳು, ಶೂಲಿಯ – ಶೂಲಾಯುಧವುಳ್ಳ ಶೂಲಿಯ, ಏಕ ಕೋಟಿ ಮಿತಯೋಜನದ – ಒಂದು ಕೋಟಿ ಲೆಕ್ಕದ ಗಾವುದದಳತೆಯುಳ್ಳ, ಓಲಗಸಾಲೆ – ಸಭಾಸ್ಥಾನವು, ಕಂಗೊಳಿಸಿದುದು – ಕಣ್ಣಿಗೆ ಚಂದವಾಗಿದ್ದುದು ॥

**ತಾ॥** ಪೌಳಿಯ ಸುತ್ತಲೂ ಮಾಣಿಕ್ಯದ ಮಂಟಪಗಳು, ಮಹಡಿಗಳು, ಬಂಗಾರದ ಕೈಸಾಲೆಗಳು ಒಪ್ಪುತ್ತಿರಲು ನಾಲ್ಕು ಕಡೆಗಳಲ್ಲಿಯೂ ಬಾಗಿಲುಗಳ ಮೇಲೆ ಗೋಪುರಂಗಳು ಶೋಭಿಸುತ್ತಿರಲಾಗಿ, ಪೌಳಿಯ ನಡುವೆ ನೂರು ಲಕ್ಷ ಗಾವುದಗಳ ಅಗಲವಾಗಿ ಶಿವನ ಸಭಾಮಂಟಪವು ಕಾಣಿಸುತಿತ್ತು. ಕೋಟ್ಯಾದಿ ಸಂಖ್ಯಾವಾಚಕ ಶಬ್ದಗಳು ಅನಂತಾರ್ಥ ಗಳೆಂದರಿವುದು. ಅತಿಶಯೋಕ್ತ್ಯಲಂಕಾರ, ಪ್ರಮಾಣಬದ್ಧರಿದಂ ಸ್ವಭಾವೋಕ್ತಿಯನಲಕ್ಕುಂ. ಅವರ ಮತದಲ್ಲಿಂ ಯಥಾರ್ಥ ಕಥನವೇ ಸ್ವಭಾವೋಕ್ತಿಲಕ್ಷಣವಾಗಿರ್ಪುದು; ಕೆಲವರಿದನ್ನು ಸತ್ಯಾಲಂಕಾರವೆನ್ನುವರು ॥ ಚಂಪಕಮಾಲಾವೃತ್ತ ॥ ೬೯ ॥

(ಮುಂದುವರಿಯುವುದು)

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು
ನಿಮ್ಮ ಸೊಮ್ಮಿಂಗೆ ಸವೆಸುವೆನು, ನಿಮ್ಮಾಣೆ, ಕೂಡಲಸಂಗಮದೇವಾ

**- ಬಸವಣ್ಣ**

ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ

# ಮಹದೇವಪುರ – ಕ್ಷೇತ್ರ ಅಧ್ಯಯನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು, ಪ್ರಕೃತಿಯನ್ನು ಪಳಗಿಸಿ ತನ್ನ ಜೀವನಕ್ಕೆ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಯಾವಾಗ ಮನಗಂಡನೊ ಆಗ ಊರು–ಹಳ್ಳಿಗಳ ಉಗಮವಾಯಿತು ಎನ್ನಬಹುದು. ನೆಲದೊಂದಿಗೆ ಹೋರಾಡುವ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜತೆಗೆ ತನ್ನನ್ನೂ ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿಟ್ಟನು. ಆ ಸ್ಥಳ, ಅವನ ಜೀವನದಲ್ಲಿ ಆಗಿಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತ ವಾಗಿ ಬೆಸೆಯುವ ಸಂಸ್ಕೃತಿಯ ಒಂದು ಕೊಂಡಿ ಎನಿಸಿತು. ಈ ಕೊಂಡಿಯೇ ಸ್ಥಳನಾಮ.

ಸ್ಥಳನಾಮಗಳು ನಿಸರ್ಗ, ಗಿರಿಕಂದರ, ಪಶುಪಕ್ಷಿ, ಧರ್ಮ, ಮತ, ಜಾತಿ, ದೇವತೆಗಳ, ಕುಟುಂಬನಾಮ, ಬಿರುದು, ವೃತ್ತಿ, ವ್ಯಾಪಾರಕೇಂದ್ರ, ಭೂಸ್ಥಿತಿಯನ್ನು ತಿಳಿಸುವ, ದಿಕ್ಸೂಚಿ ತಿಳಿಸುವ, ವ್ಯಕ್ತಿನಾಮ ಸೂಚಿಸುವ ಇನ್ನಿತರೆ ಹಲವಾರು ಅಂಶಗಳನ್ನು ಒಳಗೊಂಡಿರುತ್ತವೆ. ಇಂಥ ಸ್ಥಳನಾಮಗಳಲ್ಲಿ ಮಹದೇವಪುರ ಗ್ರಾಮವೂ ಒಂದು.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನಿಂದ 35 ಕಿ.ಮೀ. ದೂರದಲ್ಲಿರುವ ಪರಶುರಾಮಪುರ ಹೋಬಳಿಯ ಗ್ರಾಮ ಮಹದೇವಪುರ. ಈ ಗ್ರಾಮವು ಪ್ರಾಚೀನ ಗ್ರಾಮವಾಗಿದ್ದು, ವೇದಾವತಿ ನದಿಯ ಬಲದಂಡೆಯ ಮೇಲೆ ಇರುವ ಒಂದು ದ್ವೀಪವಾಗಿದೆ. ಊರಿನ ಪೂರ್ವಕ್ಕೆ ಚಿಕ್ಕಕೆರೆ, ದಕ್ಷಿಣಕ್ಕೆ ದೊಡ್ಡಕೆರೆ, ಈ ಎರಡು ಕೆರೆಗಳಿಂದ ಹೊರಟ ನೀರು ಕ್ರಮವಾಗಿ ಪೂರ್ವಪಶ್ಚಿಮವಾಗಿ, ದಕ್ಷಿಣೋತ್ತರವಾಗಿ ಹರಿದು ಊರಿನ ಹೊರಭಾಗದ ಅರ್ಧ ಕಿ.ಮೀ. ದೂರದಲ್ಲಿ ಸಂಗಮಗೊಂಡು ಮುಂದೆ ವೇದಾವತಿ ನದಿಯನ್ನು ಸೇರುತ್ತದೆ.

ಗ್ರಾಮವು ಸೂಕ್ಷ್ಮಶಿಲಾಯುಗ, ನೂತನಶಿಲಾಯುಗ, ಬೃಹತ್‌ಶಿಲಾಯುಗ ಸಂಸ್ಕೃತಿ ಗಳ ಮಾನವನಿಂದ ಹಿಡಿದು ಹಂತಹಂತವಾಗಿ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಹೆಸರುಗಳನ್ನು (ಗುಮ್ಮನಗುಂಟೆ, ಕೋನಾಸಾಗರ, ಬೆಜ್ಜವಾಡಿ) ಇಟ್ಟುಕೊಂಡು ನೆಲೆಸಿದ ಬಗ್ಗೆ ಅವಶೇಷಗಳು ಸಿಕ್ಕಿವೆ. ಈ ಗ್ರಾಮವು ಸದಾ ಹಚ್ಚಹಸಿರಿನ ಸೊಬಗಿನ ಮಧ್ಯೆ ಇದೆ. ಹಿಂದೆ ಈ ಗ್ರಾಮಕ್ಕೆ ಮಂಗಪೋಟಿ ಎಂದು ಇದ್ದು, ಈಗ ಮಹದೇವಪುರ ಎಂಬ ಹೆಸರಿದೆ.

ಗ್ರಾಮದ ಹೆಸರಿನ ಬಗ್ಗೆ ಚತುರ್ವೇದಿಮಂಗಳ, ಚತುರ್ವೇದಿ–ನಾಲ್ಕುವೇದಗಳು, ಮಂಗಳ–ಶುಭ, ಶುಭದಾಯಕ, ಒಳ್ಳೆಯ, ಮಂಗಲಪೋಟಿ–ಮಂಗಳ–ಶುಭ,

ಶುಭದಾಯಕ, ಒಳ್ಳೆಯ, ಪೋಟಿ–ತೆಲುಗಿನಲ್ಲಿ–ಪೈಪೋಟಿ, ಕಿತ್ತಾಟ, ಜಗಳ. ಹಿಂದೆ ಮಂಗಲಕರವಾದ ಚತುರ್ವೇದಗಳನ್ನು ಈ ಗ್ರಾಮದ ಅಗ್ರಹಾರದಲ್ಲಿ ಬೋಧಿಸುತ್ತಿದ್ದು, ಈ ಅಗ್ರಹಾರದಲ್ಲಿ ವಿದ್ಯೆ ಕಲಿಯಲು ಪೈಪೋಟಿ ನಡೆಯುತ್ತಿದ್ದ ಸ್ಥಳ ಇದಾಗಿರ ಬಹುದಾಗಿದ್ದು, ಈ ಕಾರಣಕ್ಕೆ ಮಂಗಲಪೋಟಿ–ಮಂಗಲ–ಪೋಟಿ ಎಂದಾಗಿರುವ ಸಾಧ್ಯತೆಯನ್ನು ಶಾಸನಾಧಾರದಿಂದ ಹೇಳಬಹುದು.

**ಸ್ಥಳೀಯರ ಪ್ರಕಾರ**

ಮಂಗಪೋಟಿ ಎಂದರೆ: ಮಂಗ+ಪೋಟಿ–ಮಂಗಪೋಟಿ
ಮಂಗ–ಕಪಿ, ಪೋಟಿ–ಚೇಷ್ಠೆ, ಕಿತ್ತಾಡುವುದು, ಜಗಳ, ಪೈಪೋಟಿ
ಮಂಗಪೋಟಿ–ಕಪಿಚೇಷ್ಠೆ ಎಂದರ್ಥ ಆಗುತ್ತದೆ.

ಗ್ರಾಮದ ಮುಖಂಡರ ಪ್ರಕಾರ, ಹಿಂದೆ ಈ ಊರಿನಲ್ಲಿ ಬಹಳ ಕಪಿಗಳು ಇದ್ದು ಬೆಳೆಯನ್ನು ನಾಶಮಾಡುತ್ತಾ ಚೇಷ್ಟೆ ಪೈಪೋಟಿ ಮಾಡುತ್ತಿದ್ದವು. ಅದಕ್ಕೋಸ್ಕರ ಮಂಗಪೋಟಿ ಎಂದು ಹೆಸರು ಬಂದಿದೆ ಎನ್ನುತ್ತಾರೆ.

ಮಂಗಲ (ಗಾರಿ) ನೀರುಳ್ಳ ಪ್ರದೇಶ ಅಂದರೆ ಗ್ರಾಮದ ಸುತ್ತಲೂ ನೀರು ಇದ್ದು ಇದೊಂದು ದ್ವೀಪವಾಗಿರುವುದರಿಂದ ಈ ಗ್ರಾಮಕ್ಕೆ ಮಂಗಲ–ಮಂಗಲಪೋಟಿ–ಮಂಗಪೋಟಿ ಆಗಿರುವ ಸಾಧ್ಯತೆಯೂ ಇದೆ.

1) ನೊಳಂಬ ರಾಜನಾದ ಮಂಗಲಪೋತ ರಾಜನು ಹೆಂಜೇರನ್ನು ಆಳುತ್ತಿರುವಾಗ ಈ ಗ್ರಾಮ ಇವನ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು. ಹಾಗೆಯೇ ಈ ಗ್ರಾಮದಲ್ಲಿ ಇವರಿಗೆ ಸಂಬಂಧಿಸಿದ ಪ್ರಭುರಾಮ ಮಂಗಲದ ತಾಮ್ರಪಟ ಶಾಸನ ದೊರೆತಿದೆ. ಈ ಶಾಸನದಲ್ಲಿ ಇವರ ವಂಶಾವಳಿ ಇದೆ. ಪ್ರಭುರಾಮ ಮಂಗಲಪೋತವೇ ಮುಂದೆ ಮಂಗಲಪೋಟಿ ನಂತರ ಮಂಗಪೋಟಿ ಆಗಿರಬೇಕು. ಪಾಳೇಗಾರರ ಕಾಲದಲ್ಲಿ ಗ್ರಾಮಕ್ಕೆ ಮಹದೇವಪುರ ಎಂದು ಹೆಸರಿದ್ದುದು ತಿಳಿದು ಬಂದಿದೆ.
2) ಮಹಾ–ಖರ್ವ, ಪದ್ಮ, ಕ್ರೋಣಿ, ಶಂಖ, ಕ್ಷಿತಿ, ಕ್ಷೋಭ
3) ದೇವ–ದ್ಯಾವ (ದೇವರು) ಇಂದ್ರ, ಶಿವ
4) ಮಹದೇವ–ಶಿವ, ಮಾದೇವ
5) ಈ ಸ್ಥಳನಾಮಕ್ಕೆ ಸಂಬಂಧಿಸಿದಂತೆ ಗ್ರಾಮದ ದಕ್ಷಿಣಕ್ಕೆ, ಅಂದರೆ ಆಂಧ್ರಪ್ರದೇಶದ ಅಮರಾಪುರದ ಕಡೆಯಿಂದ ಬರುವಾಗ ಊರಿಗೆ ಪ್ರವೇಶ ಮಾಡುವ ಸ್ಥಳದಲ್ಲಿ ಗಣಪತಿ ದೇವಸ್ಥಾನ, ವಾಯುವ್ಯ ದಿಕ್ಕಿಗೆ ಶಿವಾಲಯ, (ಈಗ ಪಾಳುಬಿದ್ದಿದೆ), ಈಶಾನ್ಯಕ್ಕೆ ಈಶ್ವರ, ವೀರಭದ್ರ ದೇವಾಲಯಗಳಿವೆ. ಊರ ಬಾಗಿಲಿನಲ್ಲಿ ಹನುಮಂತ ದೇವಾಲಯವಿದೆ.

ಶಾಸನಾಧಾರಿತ ದಾಖಲೆಗಳಲ್ಲಿ ಗ್ರಾಮಕ್ಕೆ ಗೊರವೂರು, ಪ್ರಭುರಾಮಮಂಗಲ, ಮಂಗಪೋಟಿ, ಭೈರವನದುರ್ಗ ಎಂಬ ಪ್ರಾಚೀನ ಹೆಸರುಗಳಿದ್ದು ನಂತರ ಮಹದೇವ ಪುರ ಎಂದು ಹೆಸರು ಬಂದಿದೆ. ಜೊತೆಗೆ ಗ್ರಾಮದ ಸುತ್ತಲೂ ಇರುವ ಬೆಜ್ಜವಾಡಿ, ಗುಮ್ಮನಗುಂಟೆ, ಮಂಗಲಪಲ್ಲಿ ಇವು ಬೇಚರಾಕ್ ಗ್ರಾಮಗಳಾಗಿವೆ. ಉದ್ಭವಮೂರ್ತಿ ಭೂತಪ್ಪನ ಗುಡಿ ಅಥವಾ ಕರೆಕಲ್ಲು ತಿಮ್ಮಲಾಪುರದ ಬಗ್ಗೆ ಸ್ಥಳೀಯರಾದ ಶ್ರೀಮತಿ ಹನುಮಕ್ಕ ಸಣ್ಣಗುರಪ್ಪ ಅವರಿಂದ ಮಾಹಿತಿ ದೊರೆಯಿತು. ಎರಡನೆಯ ಕಸ್ತೂರಿ ರಂಗಪ್ಪನಾಯಕನು (1748–54) ರಾಯದುರ್ಗ ಸೀಮೆಯ ಕರೆಕಲ್ಲು ತಿಮ್ಮಲಾಪುರಕ್ಕೆ (ದಕ್ಷಿಣ ಕರ್ನಾಟಕ ಅರಸು ಮನೆತನಗಳು) ಮಹದೇವನಕೋಟೆ ಎಂದು ನಾಮಕರಣ ಮಾಡಿದ ಬಗ್ಗೆ ಉಲ್ಲೇಖವಿದೆ. ಮುಂದೆ ಇದು ಮಹದೇವಪುರ ಆಗಿದೆ.

**ಭೌಗೋಳಿಕತೆ :** ಗ್ರಾಮವು ಉತ್ತರಕ್ಕೆ ಆಂಧ್ರಪ್ರದೇಶದ ಕಲ್ಯಾಣದುರ್ಗ, ದಕ್ಷಿಣಕ್ಕೆ ಮಡಕಶಿರಾ, ಪೂರ್ವಕ್ಕೆ ತುಮಕೂರು ಜಿಲ್ಲೆ ಪಾವಗಡ, ಪಶ್ಚಿಮಕ್ಕೆ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ, ಹಿರಿಯೂರು ತಾಲ್ಲೂಕುಗಳಿಂದ ಸುತ್ತುವರೆದಿದೆ. ಭೌಗೋಳಿಕವಾಗಿ ಸುತ್ತಮುತ್ತಲೂ ಯಾವುದೇ ಬೆಟ್ಟಗುಡ್ಡಗಳಿಲ್ಲದೆ ಅಲ್ಲಲ್ಲಿ ಚಿಕ್ಕ, ಚಿಕ್ಕ ಕಣಶಿಲೆಗಳಿವೆ. ಹಳ್ಳಕೊಳ್ಳಗಳಿಂದ ಕೂಡಿದ್ದು, ಜಿಲ್ಲೆಯ ದೊಡ್ಡ ನದಿಯಾದ ವೇದಾವತಿ ನದಿಯ ಬಲದಂಡೆಯ ಮೇಲೆ ಇದೆ. ಸಮುದ್ರಮಟ್ಟದಿಂದ ಸುಮಾರು 2800 ಅಡಿ ಎತ್ತರದಲ್ಲಿದ್ದು, ಧಾರವಾಡ ಶಿಲಾಸ್ತೋಮ ಮತ್ತು ಕ್ಲೋಸ್‌ಪೇಟೆ ಶಿಲಾಸ್ತೋಮದಿಂದ ಆವೃತವಾಗಿದೆ. ಅಂದರೆ ಅತ್ಯಂತ ಪುರಾತನವಾದ ಅರ್ಷಿಯಸ್ ಶಿಲಾಸ್ತೋಮ ದಡಿಯಲ್ಲಿದೆ. ವಾರ್ಷಿಕವಾಗಿ ಕೇವಲ 20–30 ಇಂಚಿಗೂ ಕಡಮೆ ಮಳೆ ಬೀಳುವ ಭೂಭಾಗವಾಗಿ, ದಕ್ಷಿಣ ಭಾರತದ ಪರ್ಯಾಯ ದ್ವೀಪದ ಮಳೆನೆರಳಿನ ಭೂಪ್ರದೇಶವಾಗಿದೆ. ಥಾರ್ ಮರುಭೂಮಿಯನ್ನು ಬಿಟ್ಟರೆ ಈ ಭಾಗವೇ ಅತಿ ಶುಷ್ಕವಾಗಿರುವ ಪ್ರದೇಶ.

ಪಿ. ಮಹದೇವಪುರ ಗಾಮವು ಪ್ರಾಗೈತಿಹಾಸಿಕವಾಗಿ ಹಾಗೂ ಐತಿಹಾಸಿಕವಾಗಿ ಶಾಸನೋಕ್ತ ಮಹತ್ವ ಪಡೆದ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಶಾಸನೋಕ್ತವೂ, ಐತಿಹಾಸಿಕವೂ ಆದ ಈಶ್ವರ ದೇವಾಲಯ, ಗಣಪತಿ ದೇವಾಲಯ, ವೀರಭದ್ರಸ್ವಾಮಿ ದೇವಾಲಯ, ಆಂಜನೇಯಸ್ವಾಮಿ ದೇವಾಲಯಗಳು ಪ್ರಮುಖವಾಗಿದೆ. ಗ್ರಾಮದಲ್ಲಿ ವಿಜೃಂಭಣೆಯಿಂದ ನಡೆಯುವ ಶ್ರೀ ರಾಮನವಮಿ ಹಬ್ಬ ತಾಲ್ಲೂಕಿನಲ್ಲಿಯೇ ಪ್ರಸಿದ್ಧವಾಗಿದೆ. ಊರಿನ ಪೂರ್ವಕ್ಕೆ ಕೆರೆ ಇದೆ. ಪಶ್ಚಿಮಕ್ಕೆ ಊರಿನ ಹೆಬ್ಬಾಗಿಲು ದಾಟಿ ಊರ ಒಳಗಡೆ ಹೋದರೆ ಗ್ರಾಮವನ್ನು ಕಾಯುವ ಅಂಜನೇಯನ ದೇವಾಲಯವಿದೆ. ಈ ದೇವಾಲಯದಲ್ಲಿ ಶ್ರೀರಾಮ, ಸೀತಾಮಾತೆ, ಲಕ್ಷ್ಮಣ ಮತ್ತು ಆಂಜನೇಯನ ಮೂರ್ತಿಶಿಲ್ಪಗಳಿವೆ. ಇವಲ್ಲದೆ ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಮಾರಮ್ಮ, ಎಲ್ಲಮ್ಮ, ವೀರಗಾರರ ಗುಡಿಗಳು, ಚನ್ನಕೇಶವ ದೇವಾಲಯ, ರಂಗನಾಥ ದೇವಾಲಯ ಹಾಗೂ ಇತರೆ ದೇವಾಲಯಗಳೂ ಗ್ರಾಮದಲ್ಲಿವೆ.

**ಈಶ್ವರ ದೇವಾಲಯ :** ಇದೊಂದು ಪ್ರಾಚೀನ ದೇವಾಲಯ. ಶಿಲ್ಪಶೈಲಿಯ ಆಧಾರದ ಮೇಲೆ 7–8ನೇ ಶತಮಾನದ ನೊಳಂಬರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯವೆಂದು ಹೇಳಬಹುದು. ಈ ದೇವಾಲಯವು ಪಾಳೇಗಾರರ ಕಾಲದಲ್ಲಿ ವಿಸ್ತಾರಗೊಂಡ ವೀರಭದ್ರ ದೇವಾಲಯದ ನವರಂಗಕ್ಕೆ ಅಂಟಿಕೊಂಡಿರುವ ಸಭಾಮಂಟಪಕ್ಕೆ ಹೊಂದಿಕೊಂಡಂತೆ ಪೂರ್ವಾಭಿಮುಖವಾಗಿದೆ. ಗರ್ಭಗುಡಿ ಪೂರ್ವ–ಪಶ್ಚಿಮ 96 ಇಂಚು, ಉತ್ತರ–ದಕ್ಷಿಣ 91 ಇಂಚು ಇದೆ. ಲಿಂಗದ ಎತ್ತರ 11 ಇಂಚು, ಪಾಣಿಪೀಠದ ಎತ್ತರ 82 ಇಂಚು, ಪೀಠದ ಮಧ್ಯೆ 26 ಇಂಚು, ಪೂರ್ವ ಪಶ್ಚಿಮವಾಗಿದೆ. ಗರ್ಭಗುಡಿ ಮಾತ್ರ ಇದೆ. ಮೇಲ್ಛಾವಣಿ ಸರಳವಾಗಿದೆ. ಗರ್ಭಗುಡಿಯ ಮುಂದೆ ಬಸವ ವಿರಾಜಮಾನವಾಗಿ ಮಲಗಿದೆ. ದೇವಾಲಯ ಇಂದಿಗೂ ಸುಸ್ಥಿತಿಯಲ್ಲಿದ್ದು ಪೂಜೆ ನಡೆಯುತ್ತಿದೆ.

**ಬಸವಣ್ಣನ ವಿಗ್ರಹ :** ಈಶ್ವರ ದೇವಾಲಯದ ಮುಂದೆ ಇರುವ ಬಸವನ ಮೂರ್ತಿಶಿಲ್ಪವು ಪಶ್ಚಿಮ ದಿಕ್ಕಿಗೆ ಮುಖ ಮಾಡಿದೆ. ಅಂದರೆ ಲಿಂಗಕ್ಕೆ ಎದುರಾಗಿ ಮಲಗಿದೆ. ಅಣೆಗೆಕಟ್ಟು, ಘಂಟೆ ಸರಗಳಿಂದ ಅಲಂಕರಿಸಲಾಗಿದೆ. ಬಸವ ಮೂರ್ತಿಯ ಅಗಲ 23 ಇಂಚು, ಉದ್ದ 53 ಇಂಚು, ಬಾಲದ ಹಿಂದೆ ಎತ್ತರ 22 ಇಂಚು, ಭುಜದ ಎತ್ತರ 28 ಇಂಚು, ತಲೆಯ ಎತ್ತರ 33 ಇಂಚು ಇದ್ದು ವಿಶೇಷವಾದ ಬಸವನ ವಿಗ್ರಹವಾಗಿದೆ. ಈ ಮೂರ್ತಿಶಿಲ್ಪವು ಸಹ ನೊಳಂಬರ ಕಾಲದಲ್ಲಿ ಖಂಡರಿಸಿ ಪ್ರತಿಷ್ಠಾಪನೆಗೊಂಡಿದೆ.

**ಗಣೇಶ ದೇವಾಲಯ :** ಈಶ್ವರ ದೇವಾಲಯದ ಪಕ್ಕದಲ್ಲೇ ಚಿಕ್ಕದಾದ ಗೂಡಿನಲ್ಲಿ ನೊಳಂಬರ ಕಾಲದ ಅಭಯಹಸ್ತ ವಿಘ್ನೇಶ್ವರನ ಮೂರ್ತಿ ಇದೆ. ಮೊದಲಿಗೆ ಪೂಜೆ ನಡೆಯುತ್ತಿದ್ದು ಭಿನ್ನವಾದ ಮೇಲೆ ಒಳಪಟ್ಟ ಗಣೇಶ ಶಿಲ್ಪವಾಗಿತ್ತು. ಅದು ತ್ರುಟಿತ ಆದ ಮೇಲೆ ಹಳೆಯ ವಿಗ್ರಹವನ್ನು ಪಕ್ಕಕ್ಕೆ ಇರಿಸಿ ಎರಡು ವರ್ಷದ ಹಿಂದೆ ಹೊಸ ಗಣೇಶನನ್ನು ಪ್ರಾಣಪ್ರತಿಷ್ಠಾಪನೆ ಮಾಡಲಾಗಿದೆ.

**ವೀರಭದ್ರ ದೇವಾಲಯ :** ಗ್ರಾಮದ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿರುವ ವೀರಭದ್ರ ದೇವಾಲಯವು ಕ್ರಿ.ಶ. 12 ನೇ ಶತಮಾನಕ್ಕೆ ಸೇರಿದೆ. ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ ಹಾಗೂ ದೇವಾಲಯಕ್ಕೆ ಎದುರಾಗಿ ನಿಲ್ಲಿಸಲಾದ ಸುಮಾರು 20 ಅಡಿ ಎತ್ತರದ ದೀಪಸ್ತಂಭ ಇದೆ.

ವೀರಭದ್ರ ದೇವಾಲಯದಲ್ಲಿ 4 ಅಡಿ ಎತ್ತರದ ಕಪ್ಪುಶಿಲೆಯಲ್ಲಿ ಕಂಡರಿಸಿರುವ ವೀರಭದ್ರನ ಶಿಲ್ಪವಿದೆ. ಕತ್ತಿ, ಗುರಾಣಿ, ಬಿಲ್ಲು, ಬಾಣಗಳನ್ನು ಹಿಡಿದು ನಿಂತ ವೀರಭದ್ರ ಮೂರ್ತಿಯು ಸೊಂಟದಲ್ಲಿ ಧೋತಿಯನ್ನು ಧರಿಸಿದೆ. ವಿವಿಧ ಆಭರಣಗಳಿಂದ ಅಲಂಕೃತನಾದ ವೀರಭದ್ರನು ಕೈಬಳೆ, ಕಾಲ್ಕಡಗ, ಯಜ್ಞೋಪವೀತ ಇವುಗಳನ್ನು ಧರಿಸಿದ್ದಾನೆ. ವೀರಭದ್ರನಿಗೆ ಕಂಚಿನ ಪ್ರಭಾವಳಿಯನ್ನು ತೊಡಿಸಲಾಗಿದೆ. ಅಂತರಾಳದ ಬಲಬದಿಯಲ್ಲಿ 14 ನೇ ಶತಮಾನದ ಶಿಲಾಶಾಸನವಿದೆ. ಸಭಾಮಂಟಪದ ನಾಲ್ಕು ಕಂಬಗಳನ್ನು ಚಚ್ಚೌಕ ಮತ್ತು ಅಷ್ಟಮುಖಗಳಲ್ಲಿ ಕಡೆದಿದ್ದಾರೆ.

ಸಭಾಮಂಟಪದಲ್ಲಿರುವ ನಂದಿಯ ಶಿಲ್ಪ ಒಂದೂವರೆ ಅಡಿ ಎತ್ತರವಾಗಿದೆ. ಸಭಾಮಂಟಪದ ಮೇಲ್ಭಾಗದಲ್ಲಿ ನಕ್ಷತ್ರಾಕಾರದ ಸರಳವಾದ ಭುವನೇಶ್ವರಿ ಇದೆ. ಈ ದೇವಾಲಯ ಭಗ್ನಗೊಳ್ಳುತ್ತಿರುವುದನ್ನು ಕಂಡ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿ ಇಂದಿಗೂ ಸುಸ್ಥಿತಿಯಲ್ಲಿ ಕಾಪಾಡಿ ಸದಾ ಪೂಜೆಗೆ ಒಳಪಡುವ ದೇವಾಲಯವನ್ನಾಗಿ ಮಾಡಿದ್ದಾರೆ. ವೀರಭದ್ರ ದೇವಾಲಯದ ಮುಂದೆ ಹಾಗೂ ಈಶ್ವರ ದೇವಾಲಯದ ಬಲಭಾಗದ ಗೋಡೆಯಲ್ಲಿ ನಂದಿ, ಖಡ್ಗ, ಸೂರ್ಯ, ಚಂದ್ರರಿರುವ 12ನೇ ಶತಮಾನದ ಶಿಲಾಶಾಸನವಿದೆ.

**ಗಣೇಶ ದೇವಾಲಯ :** ಈ ದೇವಾಲಯ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಕಲ್ಯಾಣದುರ್ಗ ತಾಲ್ಲೂಕು, ಅಮರಾಪುರದ ಕಡೆಯಿಂದ ಗ್ರಾಮಕ್ಕೆ ಬರುವ ರಸ್ತೆಯ ಎಡಭಾಗದಲ್ಲಿದೆ. ಇದು ಗ್ರಾಮದ ಉತ್ತರಕ್ಕೆ ಇದೆ. ನೊಳಂಬರ ಕಾಲದಲ್ಲಿ ನಿರ್ಮಾಣಗೊಂಡ ಅಭಯ ಹಸ್ತ ವಿಘ್ನೇಶ್ವರನ ಮೂರ್ತಿ ಇಲ್ಲಿದೆ. ಸದಾ ಪೂಜೆಗೆ ಒಳಪಟ್ಟ ಗಣೇಶ ಶಿಲ್ಪವಾಗಿತ್ತು. ಅದು ತ್ರುಟಿತ ಆದ ಮೇಲೆ ಹಳೆ ವಿಗ್ರಹವನ್ನು ಪಕ್ಕಕ್ಕೆ ಇರಿಸಿ ಎರಡು ವರ್ಷದ ಕೆಳಗೆ ಹೊಸ ಗಣೇಶನನ್ನು ಇಟ್ಟು ಪ್ರಾಣ ಪ್ರತಿಷ್ಠಾಪನೆ ಮಾಡಲಾಗಿದೆ. ಇಡೀ ಊರಿನ ಜನರಿಗೆ ಸಂಕಷ್ಟದ ಸಂದರ್ಭದಲ್ಲಿ ಅಭಯಹಸ್ತ ನೀಡುವ ಗಣೇಶನಾಗಿದ್ದಾನೆ. ಭಕ್ತರು ಹೆಚ್ಚಿದಂತೆ ರಸ್ತೆ ಪಕ್ಕದಲ್ಲಿರುವುದರಿಂದ ಚಿಕ್ಕ ಗುಡಿಯ ಜಾಗದಲ್ಲಿ ದೊಡ್ಡ ಗುಡಿ, ಗೋಪುರವನ್ನು ನಿರ್ಮಿಸಲಾಗಿದೆ.

**ಆಂಜನೇಯ ದೇವಾಲಯ :** ಪಿ. ಮಹದೇವಪುರ ಗ್ರಾಮದಲ್ಲಿ ಶ್ರೀರಾಮನ ಭಕ್ತನಾದ ಆಂಜನೇಯನ ದೇವಾಲಯವಿದೆ. ಇದನ್ನು ವಿಜಯನಗರ ಕಾಲದಲ್ಲಿ ನಿರ್ಮಿಸಲಾಗಿದೆ. ಈ ಮೂರ್ತಿಯನ್ನು ವ್ಯಾಸರಾಯರು ಪ್ರತಿಷ್ಠಾಪಿಸಿದ್ದಾರೆ. ಈ ದೇವಸ್ಥಾನ ಶಿಥಿಲವಾಗಿದ್ದು 150 ವರ್ಷಗಳ ಹಿಂದೆ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿದ್ದಾರೆ. ಫೆಬ್ರವರಿ 1698ರಲ್ಲಿ ಶ್ರೀರಾಮ, ಲಕ್ಷ್ಮಣ, ಸೀತೆ, ಆಂಜನೇಯರ ವಿಗ್ರಹವನ್ನು ಗ್ರಾಮಸ್ಥರೆ ತಂದು ಪ್ರತಿಷ್ಠಾಪಿಸಿದ್ದಾರೆ.

**ಗ್ರಾಮದ ಶಾಸನಗಳು**

1) ಗ್ರಾಮದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಅಂದರೆ ಪರಶುರಾಮಪುರದಿಂದ ಅಮರಾಪುರಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಪೂರ್ವಕ್ಕೆ ಈಶ್ವರ ದೇವಾಲಯ ಉತ್ತರಾಭಿಮುಖವಾಗಿ ವೀರಭದ್ರ ದೇವಾಲಯಗಳಿವೆ. ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ಸಿಕ್ಕ ತಾಮ್ರಪಟ ಶಾಸನವನ್ನು ಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಕಟಿಸಿದ್ದಾರೆ. ಈ ಶಾಸನವು ನೊಳಂಬರ ವಂಶಾವಳಿ ಬಗ್ಗೆ ಮಾಹಿತಿ ನೀಡುತ್ತದೆ (7–8ನೇ ಶತಮಾನ).

2) ನಿಡಗಲ್ಲು ಚೋಳರ ರಾಜನಾದ ಮಲ್ಲಿದೇವ ಚೋಳನು (1143–96) ಕ್ರಿ.ಶ. 1169 ಆಗಸ್ಟ್ 5 ಗುರುವಾರ ಮಂಗಪೋಟಿ ಅಗ್ರಹಾರದ ಭೂಮಿಯನ್ನು ಮತ್ತು

ಎಣ್ಣೆಗಾಣವನ್ನು ಭಂಡಾರಿ ಕೇತಣನಿಗೆ ದಾನ ನೀಡಿದ ಬಗ್ಗೆ ಗ್ರಾಮದ ವೀರಭದ್ರ ದೇವಾಲಯದ ಶಾಸನ ಮಾಹಿತಿ ನೀಡುತ್ತದೆ. ಈ ಶಾಸನವು 12ನೇ ಶತಮಾನಕ್ಕಿಂತ ಹಿಂದೆಯೇ ಈ ಗ್ರಾಮವು ಅಗ್ರಹಾರವಾಗಿದ್ದು ಮಂಗಪೋಟಿ ಎಂಬ ಹೆಸರಿದ್ದುದನ್ನು ಉಲ್ಲೇಖಿಸಿದೆ. ಹಾಗೆಯೇ ಗ್ರಾಮದ ಜನರು ಹಾಗೂ ಸುತ್ತಮುತ್ತಲ ಜನರು ಇಂದಿಗೂ ಮಂಗಪೋಟಿ ಎಂದು ಕರೆಯುತ್ತಾರೆ.

3) ಇದೇ ಗ್ರಾಮದ ಚಿಕ್ಕಕೆರೆ ತೂಬಿನ ಬಳಿ ಬಿದ್ದಿರುವ ಕಲ್ಲಿನಲ್ಲಿ ತ್ರುಟಿತಗೊಂಡ 5 ಸಾಲುಗಳ ಶಾಸನವಿದೆ. ಶಾಸನದಲ್ಲಿ ಶ್ರೀಮತು ಪ್ಲವಂಗ ಸಂವತ್ಸರದ ವೈಶಾಖ ಸು. 10. ನರ....ನಾರಿ......ತನಗೆ.....ನು ಎಂದಿದೆ. ಈ ಶಾಸನವು 12ನೇ ಶತಮಾನದ ಶಾಸನವಾಗಿದ್ದು ಕೆರೆತೂಬಿನ ಬಳಿ ಇರುವುದರಿಂದ ಕೆರೆಗೆ ಏನಾದರೂ ದತ್ತಿ ನೀಡಿರುವ ಬಗ್ಗೆ ಉಲ್ಲೇಖವಿರಬಹುದೆನಿಸುತ್ತದೆ; ಆದರೆ ಅದರ ಬಗ್ಗೆ ಖಚಿತವಾಗಿ ತಿಳಿಯಲು ಶಾಸನ ತ್ರುಟಿತವಾಗಿರುವುದರಿಂದ ಸಾಧ್ಯವಾಗುತ್ತಿಲ್ಲ.

4) ಮತ್ತೊಂದು ಅಪ್ರಕಟಿತ ಶಾಸನವು ವೀರಭದ್ರ ದೇವಾಲಯದ ಸುಕನಾಸಿಯ ಬಲಭಾಗದ ಗೋಡೆಯ ಭಾಗದಲ್ಲಿ ಇದನ್ನು ಡಾ. ಎಸ್.ಜಿ. ರಾಮದಾಸ ರೆಡ್ಡಿಯವರು ಪ್ರಕಟಿಸಿದ್ದಾರೆ. ಇದು 13 ಸಾಲುಗಳಿಂದ ಕೂಡಿದ ಕನ್ನಡ ಲಿಪಿಯಿಂದ ಕೂಡಿದ 14ನೇ ಶತಮಾನದ ಶಾಸನ. ಶಾಸನದಲ್ಲಿ ಅಯ್ಯಗಳ ವಂಶಾವಳಿಯ ಬಗ್ಗೆ ಉಲ್ಲೇಖವಿದೆ. ಈ ವಂಶದವರು ಮಂಗಪೋಟಿಯ ಗ್ರಾಮದ ವೀರಭದ್ರ ದೇವಾಲಯಕ್ಕೆ ಧೂಪ, ದೀಪ ನೈವೇದ್ಯಕ್ಕೆ ದತ್ತಿ ಕೊಟ್ಟ ಬಗ್ಗೆ ಮಾಹಿತಿಯಿದೆ. ಅಯ್ಯಗಳ ಬಗ್ಗೆ ತಿಳಿಸುವ ಪ್ರಮುಖ ಶಾಸನವಾಗಿದ್ದು ಅಯ್ಯಗಳು ಎಂದರೆ ಯಾರು? ಗ್ರಾಮದ ಬಗ್ಗೆ ಅವರಿಗೆ ಇದ್ದ ಕಾಳಜಿ ಏನು? ಸಿರಿಯಕ್ಕ ಎಂಬುವವರು ಯಾರು? ಮುಂತಾದ ಇನ್ನಿತರ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕಾಗಿದೆ. ಒಟ್ಟಾರೆ ಇದೊಂದು ದತ್ತಿ ಶಾಸನವಾಗಿದೆ.

ಗ್ರಾಮವು ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಕಾಲದಿಂದ ಇಂದಿನವರೆಗೆ ಜನವಸತಿಯ ಭೂಪ್ರದೇಶವಾಗಿದೆ. ಗ್ರಾಮದಲ್ಲಿ ದೊರಕಿರುವ ಶಿಲಾಯುಗದ ಮಾನವನ ಅವಶೇಷಗಳು ಹಾಗೂ ಕ್ರಿ.ಶ. 7ನೇ ಶತಮಾನದಿಂದ ದೊರಕಿರುವ ಶಾಸನಗಳು. ರಾಜಮಹಾರಾಜರ ಕಾಲದಲ್ಲಿ ನಿರ್ಮಾಣಗೊಂಡು ಉಳಿದುಬಂದಿರುವ ದೇವಾಲಯಗಳು, ಕೋಟೆಯ ಭಾಗಗಳು, ಹೋರಾಟದಲ್ಲಿ ವೀರಮರಣ ಹೊಂದಿದವರ ನೆನಪಿಗಾಗಿ ನೆಟ್ಟಿರುವ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಗ್ರಾಮದ ಗತ ಇತಿಹಾಸವನ್ನು ಸಾರಿ ಹೇಳುತ್ತವೆ. ಗ್ರಾಮದಲ್ಲಿರುವ ದೇವಾಲಯಗಳು ಶೈವಧರ್ಮದ ಮೇಲೆ ಬೆಳಕು ಚೆಲ್ಲುತ್ತವೆ. ಒಟ್ಟಿನಲ್ಲಿ ಇದು ವೇದಾವತಿ ನದೀ ತೀರದಲ್ಲಿ ಪ್ರಾಚೀನ ಗ್ರಾಮವಾಗಿದ್ದು, ಕರ್ನಾಟಕ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಮುಖ ಆಕರವಾಗಿದೆ ಎಂದು ಹೇಳಬಹುದು.

□

# ಸರ್ವಜ್ಞ ವಚನ ವ್ಯಾಖ್ಯಾನ

**ಪ್ರೊ. ಮೊರಬದ ಮಲ್ಲಿಕಾರ್ಜುನ**

**ಮಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದ್ದು**
**ಹಿಂಡನಗಲಿದ ಮದಗಜದಂತಿರ್ಪವರ**
**ಕಂಡು ನಂಬುವುದು ಸರ್ವಜ್ಞ**

ಈ ಪ್ರಪಂಚದಲ್ಲಿ ಯಾರನ್ನು ನಂಬುವುದು ಎಂಬ ಪ್ರಶ್ನೆಗೆ ಸರ್ವಜ್ಞ ಇಲ್ಲಿ ಖಚಿತ ಉತ್ತರವನ್ನು ಕೊಡುತ್ತಿದ್ದಾನೆ.

ಮಂಡೆ ಬೋಳಾಗಿ, ತುಂಡುಗಂಬಳಿ ಹೊದ್ದು, ಸಮೂಹದಿಂದ ಭಿನ್ನವಾಗಿ ತಮ್ಮದೆ ನಿಲುವನ್ನು ಹೊಂದಿ, ಧೈರ್ಯವಾಗಿ ಬದುಕುವವರನ್ನು ಕಂಡು ನಂಬುವುದು ಎನ್ನುತ್ತಾನೆ ಸರ್ವಜ್ಞ, ಯಾಕೆಂದರೆ ಇವರು ವೈರಾಗ್ಯಪರರು, ಅರಿಷಡ್ವರ್ಗಗಳನ್ನು ಮೀರಿದವರು, ಆಶಾಪಾಶಗಳಿಗೆ ಒಳಗಾಗದವರು, ಮೋಸ ವಂಚನೆ ಕುಟಿಲತೆಗಳಿಲ್ಲ ದವರು, ಸ್ವಾರ್ಥಿಗಳಲ್ಲದವರು, ಸತ್ಯ ನ್ಯಾಯ ನೀತಿ ಧರ್ಮಪರರು.

ಸ್ವತಃ ಸರ್ವಜ್ಞ ಹೀಗಿದ್ದ, ವೇಮನ ಹೀಗಿದ್ದ, ನಮ್ಮ ಬಹಳಷ್ಟು ಋಷಿಮುನಿಗಳು ಹೀಗಿದ್ದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮಾ ಗಾಂಧೀ ಕೂಡ ಹೀಗೆಯೇ ಇದ್ದರು. ಬಹುಸಂಖ್ಯಾತ ಮುಗ್ಧ ಜನಸಮುದಾಯ ಇಂತಹವರನ್ನು ನಂಬಿಯೇ ಬದುಕುತ್ತಿದೆ ಎಂಬುದನ್ನು ನಾವು ಗಮನಿಸಬೇಕು.

**ಕ್ಷಣಮಾತ್ರವಾದೊಡು ಗುಣಿಗಳೊಡನಾಡುವುದು**
**ಗುಣಹೀನರುಗಳ ಒಡನಾಟ ಬಹುದುಃಖದ**
**ಅಣಲೊಳಿರ್ದಂತೆ ಸರ್ವಜ್ಞ**

ದಿನಕ್ಕೆ ಇಪ್ಪತ್ನಾಲ್ಕು ಗಂಟೆಗಳು, ವಾರಕ್ಕೆ ಏಳು ದಿನಗಳು, ತಿಂಗಳಿಗೆ ನಾಲ್ಕು ವಾರಗಳು. ವರ್ಷಕ್ಕೆ ಹನ್ನೆರಡು ತಿಂಗಳುಗಳು, ಹೀಗೆ ಕಾಲಗಣನೆ ಮಾಡುತ್ತೇವೆ. ಆದರೆ ಹೀಗೆ ಗಣಿಸುವ ಕಾಲವನ್ನು ಎಷ್ಟು ಸಾರ್ಥಕವಾಗಿ ಬಳಸಿಕೊಂಡಿದ್ದೇವೆ, ಒಟ್ಟು ಬದುಕಿನಲ್ಲಿ ಎಷ್ಟು ಕಾಲ ನಾವು ನಿಜವಾದ ಸುಖ ಸಂತೋಷ ತೃಪ್ತಿ ನೆಮ್ಮದಿಯಿಂದ ಬದುಕಿದ್ದೇವೆ ಎಂಬ ಪ್ರಶ್ನೆ ಎದುರಾದಾಗ ನಿರುತ್ತರರಾಗುತ್ತೇವೆ.

ನೀವು ಯಾರಿಗಾದರೂ 'ನೀವೇನು ಬಿಡಿ, ಸುಖವಾಗಿದ್ದೀರಿ, ಏನೂ ತೊಂದರೆಯಿಲ್ಲ' ಎಂದು ನೋಡಿ, ಅವರು ಸಂಕಟಗಳ ಸರಮಾಲೆಯನ್ನು ನಿಮ್ಮೆದುರು ಬಿಚ್ಚಿಡುತ್ತಾರೆ. ಇತರರಿಂದ ತಮಗಾದ ತೊಂದರೆಗಳ ಸುದೀರ್ಘ ವರದಿಯನ್ನು ಒಪ್ಪಿಸುತ್ತಾರೆ. ಸ್ವತಃ ನಮ್ಮ ಪ್ರತಿಕ್ರಿಯೆಯೂ ಇದಕ್ಕಿಂತ ಭಿನ್ನವೇನೂ ಆಗಿರುವುದಿಲ್ಲ.

ಸರ್ವಜ್ಞ ಇದಕ್ಕೆ ಪರಿಹಾರ ಸೂಚಿಸಿದ್ದಾನೆ. ಬದುಕಿನಲ್ಲಿ ನಾವು ಪ್ರತಿಕ್ಷಣವನ್ನೂ ಗುಣಸಂಪನ್ನರೊಂದಿಗೆ ಕಳೆಯಬೇಕು. ಆಗ ಬದುಕು ಬಂಗಾರವಾಗುತ್ತದೆ. ಗುಣಹೀನರಾದವರೊಂದಿಗಿನ ಒಡನಾಟ ನಮ್ಮನ್ನು ಸಂಕಟದ ದವಡೆಗೆ ಸಿಲುಕಿಸುತ್ತದೆ. ಅಲ್ಲಿಂದ ಪಾರಾಗಿ ಬದುಕಿ ಬರುವುದು ಕಷ್ಟ.

**ಏನನಾದೊಡೆ ಇತ್ತು ಜ್ಞಾನಿಯ ಒಡನಾಡು**
**ಜ್ಞಾನವಿಲ್ಲದವರ ಒಡನಿಂದ ವೈಪಣವ**
**ತಾನಿತ್ತು ತೊಲಗು ಸರ್ವಜ್ಞ**

ಅಲ್ಲಮಪ್ರಭುಗಳು ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ : 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಅದು ಜಗಕಿಕ್ಕಿದ ವಿಧಿ, ನಿನ್ನೊಡವೆಯೆಂಬುದು ಜ್ಞಾನರತ್ನ. ಅಂತಪ್ಪ ದಿವ್ಯರತ್ನವ ಕೆಡಗುಡದೆ ನೀನಲಂಕರಿಸಿದೆ ಯಾದೊಡೆ ನಮ್ಮ ಗುಹೇಶ್ವರಲಿಂಗದಲ್ಲಿ ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ, ಎಲೆ ಮನವೆ!'

ಈ ವಚನಕ್ಕಿರುವ ಟೀಕಿನ ಪ್ರಕಾರ ಶಿವ ತನ್ನ ಕಾಣದಂತೆ ಮಣ್ಣು, ಹೊನ್ನು, ಹೆಣ್ಣೆಂಬ ಮಾಯಾವಿಧಿಯನ್ನು ಸೃಷ್ಟಿಸಿದ್ದಾನೆ. ಅವು ನಿನ್ನದು ಎಂಬ ಭ್ರಾಂತಿಯನ್ನು ಬಿಟ್ಟು ನಿನ್ನ ನಿಜದ ಅರಿವನ್ನು ಹೊಂದಿರುವ ಸಮ್ಯಗ್ ಜ್ಞಾನವನ್ನು ಸಾಧಿಸಿದರೆ ನೀನೇ ಸಾಕ್ಷಾತ್ ಪರಶಿವನಾಗುವೆ ಎಂಬ ತಾತ್ಪರ್ಯವಿದೆ.

ಆದ್ದರಿಂದಲೆ ಸರ್ವಜ್ಞ ನಮಗೆ ಏನನ್ನು ತೆತ್ತಾದರೂ ಸರಿಯೆ ಜ್ಞಾನಿಗಳೊಂದಿಗೆ ಒಡನಾಡಿ ನೀವೂ ನಿಜವಾದ ಜ್ಞಾನಿಗಳಾಗಿ ಎಂದಿದ್ದಾನೆ. ಅಜ್ಞಾನಿಗಳೊಂದಿಗೆ ಒಡನಾಡುವ ಸಂದರ್ಭ ಬಂದರೆ ಅವರಿಗೆ ಎರಡು ಪಟ್ಟು ಹಣ ಕೊಟ್ಟಾದರೂ ದೂರವಿರಿ ಎನ್ನುತ್ತಾನೆ. ಎಂತಹ ಎಚ್ಚರಿಕೆ!

**ತಂತಿವಾದ್ಯವು ಲೇಸು ಮಂತ್ರಿಯ ಗಣ ಲೇಸು**
**ಯಂತ್ರವಾಹಕನ ಕೃಪೆ ಲೇಸು ಶಿವಯೋಗಿಗೆ ಸ್ವ**
**ತಂತ್ರವೆ ಲೇಸು ಸರ್ವಜ್ಞ**

ಬದುಕಿನಲ್ಲಿ ಆಯ್ಕೆಗೆ ಅವಕಾಶವಿರುವಾಗ ಇದ್ದುದರಲ್ಲಿ ಉಳಿದವುಗಳಿಗಿಂತ ಯಾವುದು ಒಳ್ಳೆಯದು ಎಂಬುದನ್ನು ನಾವು ನಿರ್ಧರಿಸಬೇಕಾಗುತ್ತದೆ. ಮತ್ತು ಅದು

ಉಳಿದವುಗಳಿಗಿಂತ ಯಾಕೆ ಲೇಸು ಎಂಬ ವಿವೇಚನೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಆಗ ನಾವು ನಿಜವಾದ ವಿವೇಕಿಗಳು ಎಂದಾಗುತ್ತೇವೆ.

ಸರ್ವಜ್ಞ ಇಂತಹ ವಿವೇಕದ ಕೆಲವು ಮಾದರಿಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾನೆ. ಸಂಗೀತಕ್ಕೆ ಹಲವಾರು ವಾದ್ಯಗಳ ಸಾಹಚರ್ಯವಿದೆ. ಒಂದೊಂದು ವಾದ್ಯಕ್ಕೂ ಒಂದೊಂದು ವಿಶಿಷ್ಟತೆಯಿದೆ. ಆದರೆ ಇವುಗಳಲ್ಲಿ ತಂತಿವಾದ್ಯವೇ ಉಳಿದವುಗಳಿಗಿಂತ ಒಳ್ಳೆಯದು. ಯಾಕೆಂದರೆ ಅದು ಆರ್ಭಟ, ಅಬ್ಬರಗಳಿಂದ ಹೊರತಾಗಿದೆ. ಹೆಚ್ಚು ದೇಹಶ್ರಮದ ಅಗತ್ಯವಿಲ್ಲ. ನಯವಾಗಿ ಬೆರಳಿನಿಂದ ಮೀಟಿದರೆ ಸಾಕು ಹೃದಯ ಭಾವ ಸಂಗೀತವಾಗಿ ಹೊರಹೊಮ್ಮುತ್ತದೆ. ಮಾತಿನ ಸಾಹಚರ್ಯವಿದೆ. ಮೌನಕ್ಕೆ ಹತ್ತಿರವಾಗಿದೆ – ಹೀಗೆ ಇನ್ನೂ ವಿವರಿಸಬಹುದು.

ಇದೇ ರೀತಿ ರಾಜಪರಿವಾರದಲ್ಲಿ ಉಳಿದವರಿಗಿಂತ ಮಂತ್ರಿಯ ಗೆಳೆತನ ಲೇಸು. ಆತ ವಿವೇಕಿ ಮತ್ತು ಪ್ರಮುಖ ನಿರ್ಣಯಗಳ ಮಾರ್ಗದರ್ಶಕ. ನಾವು ನೆಮ್ಮದಿಯಿಂದ ಬದುಕಬೇಕು ಎಂದಾದರೆ ಇಡೀ ಜಗತ್ತಿನ ಆಗುಹೋಗುಗಳಿಗೆ ಕಾರಣಕರ್ತನಾದ ಆ ಜಗನ್ನಿಯಾಮಕನ ದಯೆ ಬೇಕು. ಶಿವಯೋಗಿಗೆ ಯಾವ ಬಂಧನವೂ ಇಲ್ಲದ ಸ್ವಾತಂತ್ರ್ಯ ಅತ್ಯಗತ್ಯ.

**ಆವೆಯ ರೋಮದಲ್ಲೊಂದು ಆವುಗಣ್ಣಿಯ ಮಾಡಿ**
**ಮಾಯದರುವನೆ (ಕರಕಟ್ಟಿ) ನಲವಿಂದ**
**ತಾನಾದ ಯೋಗಿ ಸರ್ವಜ್ಞ**

ಯೋಗಿ ಎಂದರೆ ಯಾರು? ಎಂಬುದಕ್ಕೆ ಸಂಬಂಧಿಸಿದಂತೆ ಸರ್ವಜ್ಞ ಬಹಳಷ್ಟು ವಚನಗಳಲ್ಲಿ ಪ್ರಸ್ತಾಪಿಸಿದ್ದಾನೆ. ಯೋಗಿ ಎಂದರೆ ಇಂದ್ರಿಯವನ್ನು ನಿಗ್ರಹಿಸಿದವ ಎಂಬ ಸಾಮಾನ್ಯ ಅರ್ಥದಿಂದ ಮೊದಲುಗೊಂಡು ಅರಿವಿನ ಸಾಮ್ರಾಜ್ಯದ ಅಧಿಪತಿ ಎನ್ನುವವರೆಗಿನ ವಿವಿಧ ಮುಖಗಳನ್ನು ಪರಿಚಯಿಸಿದ್ದಾನೆ.

ಪ್ರಸ್ತುತ ವಚನದಲ್ಲಿ ಒಬ್ಬ ಯೋಗಿ ಹೇಗಾಗುತ್ತಾನೆ ಎಂಬ ಬಗ್ಗೆ ವಿಶೇಷವಾದ ಒಂದು ಪೌರಾಣಿಕ ಕಲ್ಪನೆಯ ಪ್ರಸ್ತಾಪವಿದೆ. ಅದರ ಪ್ರಕಾರ ಗೋವು ದೇವತಾಪ್ರಪಂಚದ ಅದ್ಭುತ ಒಡಲು. ಹಸುವಿನ ರೋಮರೋಮದಲ್ಲೂ ಒಬ್ಬೊಬ್ಬ ದೇವತೆ ಇದ್ದಾನೆ. ದೇವತೆ ಇದ್ದರೂ ಹಸು ಹಸು ತಾನೆ? ಅದನ್ನು ಕಟ್ಟಿಹಾಕಲು ಅದರದೆ ರೋಮದಿಂದ ಹಗ್ಗವನ್ನು ಸೃಷ್ಟಿಮಾಡಿ, ಮಾಯಾಭ್ರಮೆಗೆ ಆ ಹಸು ಒಳಗಾಗದ ಹಾಗೆ ಪ್ರೀತಿಯಿಂದ ಅದನ್ನು ಕಟ್ಟಿಹಾಕಿದವನು ನಿಜವಾದ ಯೋಗಿ ಎನಿಸಿಕೊಳ್ಳುತ್ತಾನೆ. ಅಂದರೆ ದೇವತೆಯ ಅಸ್ತಿತ್ವವನ್ನು ಅರಿತಿದ್ದಾಗಲೂ ಸ್ವಯಂ ಸಂಯಮ ಅಗತ್ಯ ಎಂಬ ಭಾವ ಇಲ್ಲಿ ಮುಖ್ಯವಾಗುತ್ತದೆ.

ಈ ವಚನವನ್ನು ಗಮನಿಸುವಾಗ ಶ್ರೀಕೃಷ್ಣನ ನೆನಪಾಗುತ್ತದೆ. ಅವನು ಯೋಗಿಯಾದ ಪರಿಯನ್ನು ಸರ್ವಜ್ಞ ಇಲ್ಲಿ ಚಿತ್ರಿಸಿದ್ದಾನೇನೋ ಎನಿಸುತ್ತದೆ.

**ನೆತ್ತಿಯ ತುದಿಯಲ್ಲಿ ಹೊತ್ತಿಹ ಜಗವೆಲ್ಲ**
**ಎತ್ತನೇರತ್ತ ನರ ಸುರ ಯೋಗಿಗಿ**
**ನ್ನೆತ್ತಣ ಮೋಕ್ಷ ಸರ್ವಜ್ಞ**

ಇಡೀ ಜಗತ್ತಿನಲ್ಲಿ ಎಲ್ಲ ಚಲನೆಯೂ ಊರ್ಧ್ವಮುಖಿಯಾಗಿಯೇ ಇರಲು ಬಯಸುತ್ತದೆ. ಇದಕ್ಕೆ ಒಂದು ಕಾರಣ, ಎತ್ತರೆತ್ತರಕ್ಕೆ ಸಾಗುವ ಅಪೇಕ್ಷೆ. ಇನ್ನೊಂದು, ಉಳಿದವರಿಗಿಂತ ನಾನು ಮೇಲು ಎಂಬ ಭಾವನೆ ಉಂಟಾಗುತ್ತದೆ ಎಂಬುದು.

ಅದಕ್ಕಿಂತ ಮುಖ್ಯವಾಗಿ, ಯೋಗಸಾಧನೆಯ ದೃಷ್ಟಿಯಿಂದ ನೋಡುವುದಾದರೆ ನೆತ್ತಿಯ ತುತ್ತತುದಿಯಲ್ಲಿ ಸಹಸ್ರದಳದ ಕಮಲವಿದೆ. ವಾಯುರೂಪದಲ್ಲಿ ಚಲಿಸುತ್ತಿರುವ ಪ್ರಾಣಶಕ್ತಿ ಎನಿಸಿಕೊಂಡಿರುವ ಶಿವ ಸರ್ವಜೀವಿಗಳ ಶಿರಸ್ಸಿನಲ್ಲಿ ಸ್ಥಿತನಾಗಿದ್ದಾನೆ. ಆದ್ದರಿಂದ ನರನೇ ಆಗಿರಲಿ, ಸುರನೇ ಆಗಿರಲಿ, ಯೋಗಿಯೇ ಆಗಿರಲಿ ಶಿವಸಾಯುಜ್ಯವನ್ನು ಸಾಧಿಸಬೇಕಾದರೆ ನೆತ್ತಿಯತ್ತ ನಮ್ಮ ದೃಷ್ಟಿ, ಮನಸ್ಸುಗಳು ಸಾಗಬೇಕು.

ಬಸವಣ್ಣನವರು 'ಶಿರವೇ ಹೊನ್ನ ಕಳಶವಯ್ಯಾ' ಎಂದಿದ್ದಾರೆ. ಶಿವನ ಸಾನ್ನಿಧ್ಯವನ್ನು ಹೊಂದಿರುವ ಶಿರಸ್ಸಿನ ಮಹತ್ವ ಮತ್ತು ಪಾವಿತ್ರ್ಯವನ್ನು ಈ ಮಾತು ಸೂಚಿಸುತ್ತದೆ.

**ಅಂಬುಜದ ನವರಸವ ಇಂಬಿನಲಿ ಉಂಬಾತ**
**ಬಂದು ಹೂದೋಟ ಹೊರಗಿಕ್ಕಿ ಅದ ನೆರೆ**
**ಯುಂಬಾತ ಯೋಗಿ ಸರ್ವಜ್ಞ**

ಶಿವಯೋಗದ ಸಾಧನೆಯಲ್ಲಿ ನಾವು ತೊಡಗಬೇಕು ಎಂದಾದರೆ ನಮ್ಮ ದೇಹದಲ್ಲಿರುವ ಆಧಾರ ಸ್ವಾಧಿಷ್ಠಾನ – ಮಣಿಪೂರಕ – ಅನಾಹತ – ವಿಶುದ್ಧಿ–ಆಜ್ಞಾ – ಸಹಸ್ರಾರ – ಶಿಖಾ – ಪಶ್ಚಿಮ ಎಂಬ ಒಂಬತ್ತು ಚಕ್ರಕಮಲಗಳಲ್ಲಿ ಒಂಬತ್ತು ಜನ ಬ್ರಹ್ಮರನ್ನು ಮೂರ್ತಿಗೊಳಿಸಿ ಮನದ ಕಣ್ಣಿನಿಂದ ಮನದಣಿಯುವಂತೆ ನೋಡಿ, ಭಾವಪುಷ್ಪಗಳಿಂದ ಪೂಜೆ ಮಾಡಬೇಕು.

ಸರ್ವಜ್ಞ ಇದನ್ನೇ 'ಅಂಬುಜದ ನವರಸವ ಇಂಬಿನಲಿ ಉಂಬಾತ' ಎಂದಿದ್ದಾನೆ. ದೇಹದ ಕ್ರಿಯಾವರ್ತನೆಯನ್ನು ಅರ್ಥಮಾಡಿಕೊಂಡು ಅಂತರಂಗದ ಪೋಷಣೆಯನ್ನು ಅರ್ಥಪೂರ್ಣವಾಗಿ ಸಾಧಿಸುವ ಯೋಗದ ದಾರಿಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಇಲ್ಲಿ ಬಹಿರಾಡಂಬರದ ಪೂಜೆಗೆ ಅವಕಾಶವಿಲ್ಲ. ಆದ್ದರಿಂದ ಹೂದೋಟವನ್ನು ಹೊರಗಿಕ್ಕಿ ಅವರ ಭಾವಪರಿಮಳವನ್ನು ಯೋಗಿಯಾದವನು ತಾನು ಆಸ್ವಾದಿಸಿ ನವ ಕಮಲ ಚಕ್ರಗಳಲ್ಲಿರುವ ನವಬ್ರಹ್ಮರುಗಳಿಗೆ ಸಮರ್ಪಿಸಬೇಕು. ಆಗ ಅವನು ನಿಜವಾದ ಯೋಗಿ ಎನಿಸಿಕೊಳ್ಳುತ್ತಾನೆ.

**ಕಲ್ಲಗುಂಡೆಯ ಮೇಲೆ ಮಲ್ಲಿಗೆಯಲಿರಳಿಕ್ಕಿ**
**ನಿಲ್ಲದ ಹಣೆಯ ಬಡಿವಡೆ ಬುಗುಟಲ್ಲ–**
**ದಿಲ್ಲ ಕಂಡಯ್ಯ ಸರ್ವಜ್ಞ**

ಕಲ್ಲು, ಮರ, ಮಡಕೆ ಇತ್ಯಾದಿಗಳನ್ನು ದೇವರೆಂದು ಪೂಜಿಸುವ ಜನರಿಗೇನೂ ಕೊರತೆ ಇಲ್ಲ. ಇಂದೂ ಇದ್ದಾರೆ, ಹಿಂದೆಯೂ ಇದ್ದರು. ಆದರೆ ಇದು ಸರಿಯೆ ಎಂಬ ಪ್ರಶ್ನೆ ಮಾತ್ರ ಎಲ್ಲ ಕಾಲಕ್ಕೂ ಸಂಗತವಾಗಿದೆ.

ಹನ್ನೆರಡನೆಯ ಶತಮಾನದ ಶರಣರು ತೀರಾ ನಿಷ್ಠುರವಾಗಿಯೆ 'ಕಲ್ಲು ದೇವರು ದೇವರಲ್ಲ' ಎಂದರು. ಅಲ್ಲಮಪ್ರಭುದೇವರು 'ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕೆಡೆದಡೆ ದೇವರೆತ್ತ ಹೋದರೊ?' ಎಂದು ಪ್ರಶ್ನಿಸಿದರು.

ಇದೇ ದಾರಿಯಲ್ಲಿ ಸಾಗಿಬಂದ ಸರ್ವಜ್ಞ ಕಲ್ಲುಗುಂಡನ್ನು ದೇವರೆಂದು ಪೂಜಿಸಿ ಮಲ್ಲಿಗೆಯ ಪರಿಮಳದ ಹೂಗಳಿಂದ ಪೂಜಿಸಿ ನಮ್ಮ ಬಯಕೆಗಳನ್ನು ಪೂರೈಸೆಂದು ಕಲ್ಲುಗುಂಡಿಗೆ ತಲೆಚಚ್ಚಿಕೊಂಡರೆ ಹಣೆಗೆ ಬುಗುಟು ಬರುವುದೇ ಹೊರತು ಮತ್ತೇನೂ ಪ್ರಯೋಜನವಾಗದು ಎಂದು ವಿಡಂಬಿಸಿದ್ದಾನೆ.

ದೇವರ ಬಗೆಗಿನ ನಂಬಿಕೆಯ ಹಿಂದೆ ಇರಬೇಕಾದುದು ವಿಚಾರವೆ ಹೊರತು ಗತಾನುಗತಿಕ ಆಚಾರವಲ್ಲ ಎಂಬ ಎಚ್ಚರಿಕೆ ಇಲ್ಲಿದೆ.

**ಗುರಿಯ ತಾಗದ ಕೋಲನರುನೂರನೆಚ್ಚೇನು**
**ಬರಿ ಮಾತನಾಡಿ ಫಲವೇನು ಆ ಅರಿವು**
**ಬರುದೊರೆ ಕಾಣ ಸರ್ವಜ್ಞ**

ಬದುಕಿನಲ್ಲಿ ನಾವು ಏನೇ ಮಾಡಿದರೂ ಆದಕ್ಕೊಂದು ಗುರಿ, ಉದ್ದೇಶ ಇರಬೇಕು. ಮತ್ತು ನಮ್ಮ ಪ್ರತಿಯೊಂದು ಪ್ರಯತ್ನವೂ ಆ ಗುರಿಯೆಡೆಗೆ ನಮ್ಮನ್ನು ಮುನ್ನಡೆಸುತ್ತಿರಬೇಕು. ಆಗ ನಿಜವಾದ ಯಶಸ್ಸಿನ ಒಡೆಯರು ನಾವಾಗುತ್ತೇವೆ. ಜಗತ್ತಿನ ಎಲ್ಲ ಯಶಸ್ವಿ ಸಾಧಕರ ಬದುಕು ಹೀಗಿತ್ತು ಎಂಬುದನ್ನು ನಾವು ಗಮನಿಸಬೇಕು.

ಭಗವಾನ್ ಬುದ್ಧ ಹನ್ನೆರಡು ವರ್ಷ ತಪಸ್ಸು ಮಾಡಿದರು. ಕೊನೆಗೆ ನಿಜವಾದ ಜ್ಞಾನದ ಬೆಳಕಿನ ಒಡೆಯರಾದರು. ಬಸವಣ್ಣ ಮತ್ತು ಇತರ ಶರಣರು ಅನುಭಾವದ ಬೆಳಕಿನಲ್ಲಿ ಮಾತನಾಡಿದರು. ಅದ್ಭುತವಾದ ವಚನಗಳನ್ನು ಸೃಷ್ಟಿಸಿದರು. ನಾವು ಅರಿವಿನ ದಾರಿಯ ಪಯಣಿಗರಾದರೆ ಅದು ಹಿರಿಯ ತೊರೆಯಾಗಿ ನಮ್ಮ ದಾಹವನ್ನು ಹಿಂಗಿಸುತ್ತದೆ. ಇದನ್ನೇ ಸರ್ವಜ್ಞ ಗುರಿ ತಾಗದಿರುವ ನೂರಾರು ಬಾಣಗಳನ್ನು ಬಿಟ್ಟೇನು ಪ್ರಯೋಜನ? ವ್ಯರ್ಥ ಮಾತನಾಡಿದರೆ ಏನು ಫಲ? ನಿಜವಾದ ಅರಿವು ಬದುಕಿನ ಮಹಾಪ್ರವಾಹ ಎಂದಿದ್ದಾನೆ. (ಮುಂದುವರಿಯುತ್ತದೆ)

# ವಚನ ಚಳವಳಿ : ಒಂದು ಚಿಂತನೆ

**ಎಚ್.ಎಸ್. ಸಿದ್ಧಗಂಗಪ್ಪ**

ಕನ್ನಡ ಭಾಷೆಗೆ ಒಂದು ಹೊಸ ಬನಿಯನ್ನು ಕೊಟ್ಟವರು ವಚನಕಾರರು. ಅವರು ಭಾಷೆಗೆ ಒಂದು ಹೊಸ ಶಕ್ತಿಯನ್ನು ಕೊಡಲು ಸಾಧ್ಯವಾದಷ್ಟು ಸಾಮೂಹಿಕವಾಗಿ ಅವರ ಹೃದಯದಲ್ಲಿದ್ದ ಒತ್ತಡ, ಅವರಲ್ಲಿ ಉಕ್ಕುತ್ತಿದ್ದ ಒಂದು ಪ್ರತಿಭಟನಾ ಮನೋಭಾವ. ಓದು ಬರಹ ಬರದಿದ್ದರೂ ಸರಿ, ತಮ್ಮ ಹೃದಯದ ಉದ್ವೇಗ, ಉಮ್ಮಳಗಳನ್ನು ಅತ್ಯಂತ ತೀವ್ರವಾದ ಸಾಮಾಜಿಕ ಕಳಕಳಿಯನ್ನು ವಚನಕಾರರ ಮುಖಂಡರು ಒಂದು ಸಾಮಾಜಿಕ ಚಳವಳಿಯನ್ನು ಮೂಡಿಸಿ ಹೊರಟವರು. ಅದರ ಜೊತೆಯಲ್ಲಿ ಅಧ್ಯಾತ್ಮವೂ ಬೆರೆತುಕೊಂಡಿತು. ಜಗತ್ತಿನಲ್ಲಿ ಇದಕ್ಕೆ ಹಿಂದೆಯಾದರೂ, ಇದರ ಅನಂತರವಾದರೂ ಹೀಗೆ ಸಾಮಾಜಿಕ ಚಳುವಳಿಯೊಂದಿಗೆ ಆಧ್ಯಾತ್ಮಿಕ ಚಳುವಳಿಯೂ ಬೆರೆತುಕೊಂಡು ಭಾಷೆಯ ಸಮಸ್ತ ಶಕ್ತಿಯನ್ನು ಎಚ್ಚರಗೊಳಿಸಿ ಬಳಸಿಕೊಂಡ ಉದಾಹರಣೆಗಳು ಇಲ್ಲ.

ಮಾತು ಸತ್ವಪೂರ್ಣವಾಗುವುದು ಅಂತರಂಗದ ಅರಿವಿನಿಂದ ಸಹಜವಾಗಿ ಅಭಿವ್ಯಕ್ತಿಗೊಂಡಾಗ. ಅಂತರಂಗದ ಅರಿವಿನ ಶಕ್ತಿ ಅದರಲ್ಲಿ ಮಿಂಚಿನಂತೆ ಹೊಳೆದಾಗ ಆ ಮಾತಿಗೊಂದು ಶಕ್ತಿ ಬರುತ್ತದೆ. ಅದು ಜನರ ಮನಸ್ಸಿನಲ್ಲಿ ಬಹುಕಾಲ ತುಡಿಯುತ್ತ ಜೀವನದಲ್ಲಿ ಒಂದು ಹೊಳಹನ್ನು ಕಂಡುಕೊಳ್ಳಲು ನೆರವಾಗುತ್ತದೆ.

ಅನುಭಾವದ ಮೇರುಸದೃಶರಾದ ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ ಮಾತಿನ ಮಹತ್ವವನ್ನು ಸರಳವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ.

> ತನ್ನ ತಾನರಿದಡೆ ನುಡಿಯಲ್ಲಿ ತತ್ವ ನೋಡಾ
> ತನ್ನ ತಾಶ ಮರೆತರೆ ನುಡಿಯಲ್ಲಿ ಮಾಯ ನೋಡಾ
> ಅರೆದು ಮರೆದು ಶಿವಯೋಗಿಯ ಶಬುದವೆಲ್ಲ
> ಉಪದೇಶವಲ್ಲದೆ ಭಿನ್ನವುಂಟೆ?

ವಚನದ ಮೂಲಕ ಅಲ್ಲಮಪ್ರಭು ಎಂಥ ಮಹತ್ತರವಾದ ವಿಚಾರವನ್ನು ಹೇಳುವ ಮೂಲಕ ಭಾವದ ಕಣ್ಣು ತೆರೆಸಿದ್ದಾರೆ! ತನ್ನನ್ನು ತಾನು ಅರಿತು ಮಾತನಾಡಿದರೆ ಈ ಮಾತೇ ತತ್ವ, ಹಾಗೆಯೇ ಆತ್ಮಜ್ಞಾನವಿಲ್ಲದೆ ಆಡುವವನ ಮಾತು ಮಾಯೆ ಎಂಬುದನ್ನು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ.

ಶಬ್ದ, ಮಾತು ಶರಣರಿಗೆ ಸಾಕಾರವಾದದ್ದು ಗಟ್ಟಿಯಾದದ್ದು. ಮಾತಿಗೆ ಮಡಿಯುಂಟು. ಮೈಲಿಗೆಯುಂಟು, ಅದು ಎಂಜಲೂ ಆಗಬಹುದು. 'ಶಬ್ದವಂಚನೆ ಶ್ರೋತ್ರದೆಂಜಲು' ಎಂದು ಹೇಳಿದ ಅಲ್ಲಮಪ್ರಭು, ಇಂದ್ರಿಯಗಳನ್ನು ರೂಪ ರಸನಗಳನ್ನು ಪಟ್ಟಿಮಾಡಿದ್ದಾರೆ. "ಸ್ಪರ್ಶವೆಂದರೆ ತ್ವಕ್ಕಿನೆಂಜಲು, ರೂಪೆಂಬೆನೆ ನೇತ್ರದೆಂಜಲು, ರುಚಿಯೆಂಬೆನೆ ಜಿಹ್ವೆಯೆಂಜಲು, ಪರಿಮಳವೆಂಬೆನೆ ಘ್ರಾಣದೆಂಜಲು, ನಾನೆಂಬನೆ? ಅರಿವಿನೆಂಜಲು, ಹಾಗಾದರೆ ಎಂಜಲೇ ಅಲ್ಲದ್ದು ಯಾವುದು?" ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗೂಹೇಶ್ವರ ಲಿಂಗವು."

ಮಾತುಕೃತಿ, ನಡೆ–ನುಡಿ ಒಂದೇ ಆಗಿರಬೇಕು ಎಂಬ ಮಾತನ್ನು ಅನೇಕ ಸಲ, ಅನೇಕ ಸಂದರ್ಭಗಳಲ್ಲಿ ಕೇಳಿದ್ದೇವೆ, ಕೇಳುತ್ತಲೂ ಇದ್ದೇವೆ. ನಡೆನುಡಿಯನ್ನು ಕುರಿತು ಷಣ್ಮುಖಸ್ವಾಮಿಯವರು "ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆ ನುಡಿ ಎರಡನ್ನು ಪರಿಪೂರ್ಣ ತುಂಬಿ, ಲಿಂಗವ ಕೂಡಬಲ್ಲಾತನೇ ಶರಣ ನೋಡಾ ಅಖಂಡೇಶ್ವರ" ಎಂದು ಸರಳವಾಗಿ ಪ್ರತಿಕ್ರಿಯಿಸಿದ್ದಾರೆ.

ಬಸವಣ್ಣನವರು ತಮ್ಮ ವಚನವೊಂದರಲ್ಲಿ ಅನುಭಾವಿಯ ಮಾತು ಆತ್ಮಲಿಂಗವನ್ನು ತೆರೆದು ತೋರಿಸಬಲ್ಲದು ಎಂದು ಹೇಳಿದ್ದಾರೆ.

ಕೆರೆ ಹಳ್ಳ ಬಾವಿಗಳು ಮೈದೆಗೆದರೆ
ಗೊಳ್ಳೆ ಗೊರಟೆ ಚಿಪ್ಪುಗಳು ಕಾಣಬಹುದು
ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ
ಲಿಂಗವೆ ಕಾಣಬಹುದು

ವಚನಕಾರರು ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಹಾಗೂ ಆಡುಭಾಷೆಯಲ್ಲಿ ವಚನಗಳನ್ನು ರಚಿಸುವುದರ ಮೂಲಕ ಅರಿವಿನ ಜ್ಯೋತಿಯನ್ನು ಬೆಳಗಿಸಿದರು. ಜನಸಾಮಾನ್ಯರಲ್ಲೂ ವಿಚಾರಮಾಡುವ ಶಕ್ತಿಯನ್ನು ಬೆಳೆಸಿದರು. ಮಾತನಾಡುವ ಆತ್ಮಸ್ಥೈರ್ಯವನ್ನು ತುಂಬಿದರು.

"ಸಂಸ್ಕೃತದ ಹಿರಿಮೆಯನ್ನು ಸಡಿಲಿಸಿ ಕನ್ನಡದ ಹೆಚ್ಚಳ ಬೆಳೆದುದು ಈ ವಚನ ಸಾಹಿತ್ಯದಿಂದ, ಪದ್ಯದ ವ್ಯಾಮೋಹ ಸರಿದು, ಗದ್ಯಕ್ಕೆ ಪುರಸ್ಕಾರ ದೊರೆತುದು ಈ ವಚನಗಳಿಂದ. ಬಹುಕಾಲದಿಂದಲೂ ಪಂಡಿತರ ಸ್ವತ್ತಾಗಿದ್ದ, ರಾಜ್ಯಲಕ್ಷ್ಮಿಯ ತೊತ್ತಾಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವಕಮ್ಮಟದಲ್ಲಿಯೇ ಅಚ್ಚೊತ್ತಿದ ವಚನನಾಣ್ಯಗಳನ್ನು ಜನಸಾಮಾನ್ಯರಲ್ಲಿ ಸಲ್ಲುವಂತೆ ಹರಡಿಸಿದವರು ವಚನಕಾರರು" ಎಂಬ ಪ್ರೊ. ಶಿ.ಶಿ. ಬಸವನಾಳರ ಅಭಿಪ್ರಾಯ ಗಮನಾರ್ಹ.

ಕಷ್ಟಸಾಧ್ಯವಾದ ವಿಚಾರಗಳನ್ನು ಸುಲಭವಾಗಿ, ಜನಸಾಮಾನ್ಯರೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು ವಚನಸಾಹಿತ್ಯದ ಪ್ರಮುಖ

ವೈಶಿಷ್ಟ್ಯಗಳಲ್ಲಿ ಒಂದು. ಈ ವಚನ ಚಳುವಳಿಯಲ್ಲಿ ಪಂಡಿತರಿಂದ ಪಾಮರರವರೆಗೆ ಎಲ್ಲರೂ ಮುಕ್ತವಾಗಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಸ್ವಾತಂತ್ರ್ಯ ಪಡೆದಿದ್ದರು. "ದೇವವಾಣಿಯು ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನು ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರು" ಎಂಬ ಪ್ರೊ. ಬಸವನಾಳರ ಅಭಿಪ್ರಾಯ ವಚನಸಾಹಿತ್ಯ ಸಾರುತ್ತದೆ.

ವಚನ ಸಾಹಿತ್ಯ ಅನುಭವ ಮೂಸೆಯಲ್ಲಿ ಎರಕ ಹೊಯ್ದ ನಾಣ್ಯಗಳು, ಸದಾಕಾಲಕ್ಕೆ ಚಲಾವಣೆಯಾಗುವಂತಹವು. ವಚನಗಳು ಶಬ್ದದ ಮೋಡಿಯಲ್ಲ. ಅನುಭವ ಹಾಗೂ ಅನುಭಾವಗಳ ಸಂಕೀರ್ಣ, ಸಕಲರಿಗೂ ಲೇಸನೇ ಬಯಸಿದ, ಬಯಸುವ ಸಾರ್ವಕಾಲಿಕ ಸಾಹಿತ್ಯ. "ವಚನ ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು, ಅನುಭಾವವೂ ಹೌದು. ಮುಖ್ಯವಾಗಿ ವಚನ ಸಾಹಿತ್ಯ ಮೇಲ್ತರಗತಿಯ ಸಾಹಿತ್ಯ" ಎಂಬ ಡಾ. ರಂ.ಶ್ರೀ ಮುಗಳಿಯವರ ಮಾತುಗಳು ವಚನ ಸಾಹಿತ್ಯದ ಲಕ್ಷಣವನ್ನು ತಿಳಿಸುತ್ತದೆ.

ವಚನ ರಚನೆಯನ್ನು ಕುರಿತು ವಿದ್ವಾಂಸರು ವ್ಯಾಪಕವಾದ ಚರ್ಚೆ, ಚಿಂತನೆ ನಡೆಸಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಶರಣರು ವಚನ ಸಾಹಿತ್ಯವನ್ನು ಕುರಿತು ಮೌಲಿಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರ ಮೂಲಕ ಅದಕ್ಕೊಂದು ಭದ್ರಬುನಾದಿ ಹಾಕಿದ್ದಾರೆ. ಆರೋಗ್ಯಪೂರ್ಣವಾದ ಚರ್ಚೆಯನ್ನು ಮಾಡಿದ್ದಾರೆ.

ಪ್ರಭುದೇವರು 'ವಚನ ರಚನೆಯೆಂಬುದು ಮಾತಿನ ಬಣ್ಣದ ಪರಿಯಲ್ಲ ನೋಡಾ' ಎಂದು ಹೇಳಿ ವಚನಗಳು ಕೇವಲ ಮಾತಿನ, ಶಬ್ದದ ಜೋಡಣೆಯಲ್ಲ, ವಚನಗಳಲ್ಲಿ ಬರುವ ಒಂದೊಂದು ಶಬ್ದಕ್ಕೂ ವಿಶೇಷವಾದ ಅರ್ಥವಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಕ್ಕಮಹಾದೇವಿಯ ದೃಷ್ಟಿಯಲ್ಲಿ "ವಚನಕ್ಕೆ ಶೃಂಗಾರ ಸತ್ಯವ ನುಡಿವರು" ಆಗಿದೆ.

ಈ ಮೇಲಿನ ಅಭಿಪ್ರಾಯಗಳನ್ನು ಗಮನಿಸಿದಾಗ ವಚನದ ರಚನೆ ಹೇಗೆ ಇತರ ಸಾಹಿತ್ಯ ರಚನೆಗಳಿಗಿಂತ ಭಿನ್ನವಾದುದು ಎಂಬುದು ತಿಳಿಯುತ್ತದೆ. ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಆಡುಮಾತಿನ ಸೊಗಡನ್ನು ಸಮರ್ಪಕವಾಗಿ, ಅಷ್ಟೇ ಸಮರ್ಥವಾಗಿ ಬಳಸಿಕೊಂಡ ವಚನಕಾರರು ಮಾರ್ಗಸಾಹಿತ್ಯದ ಮತ್ತು ಮಹಾಕಾವ್ಯದ ಲಕ್ಷಣಗಳಾದ ಅಷ್ಟಾದಶ ವರ್ಣನೆಗಳು, ನವರಸಗಳು, ಮೂವತ್ತೆರಡು ಅಲಂಕಾರಗಳು, ಪ್ರಾಸ, ರೀತಿ, ಬಂಧ, ಛಂದ, ಶೈಲಿ ಮುಂತಾದ ಅಂಶಗಳನ್ನು ನಿರ್ಭಿಡೆಯಿಂದ ನಿರಾಕರಿಸಿದರು.

ಈ ವಿಚಾರವನ್ನು ಕುರಿತು ಶರಣ ಸಿದ್ಧರಾಮ ತನ್ನ ವಚನವೊಂದರಲ್ಲಿ ಹೀಗೆ ಪ್ರತಿಪಾದಿಸಿದ್ದಾನೆ.

ವಚನ ರಚನೆಯ ಬಿಟ್ಟು
ಕುತ್ಸಿತ ಕಾವ್ಯಾಲಂಕಾರ ನೋಡುವವರ ನೋಡಾ
ಹುಡಿಮಣ್ಣ ಹೊಯ್ಯದೆ ಮಾಣ್ಬನೆ
ಮಹಾದೇವ ಕಪಿಲಸಿದ್ಧ ಮಲ್ಲಿಕಾರ್ಜುನ

ಸಿದ್ಧರಾಮ ತನ್ನ ಮತ್ತೊಂದು ವಚನದಲ್ಲಿ ವೇದಶಾಸ್ತ್ರಗಳು ಪುರಾಣಗಳು, ಇತಿಹಾಸ ಇವುಗಳನ್ನು ಕಟುವಾಗಿ ಟೀಕಿಸಿದ್ದಾನೆ.

ಶಾಸ್ತ್ರವೆಂಬುದು ಮನ್ಮಥಶಾಸ್ತ್ರವಯ್ಯಾ
ವೇದಾಂತವೆಂಬುದು ಮೂಲಮನೋವ್ಯಾಧಿಯಯ್ಯಾ
ಪುರಾಣವೆಂಬುದು ಮೃತರ ಗಿರಾಣವಯ್ಯಾ
ಇತಿಹಾಸವೆಂಬುದು ರಾಜನ ಕಥಾಭಾಗವನ್ನು
ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನ

ವೇದಶಾಸ್ತ್ರ ಪುರಾಣ ಇತಿಹಾಸಗಳು ಕೆಲವರ ಸ್ವತ್ತಾಗಿದ್ದು, ಜನಸಾಮಾನ್ಯರ ನೋವು ನಲಿವುಗಳನ್ನು, ದುಃಖ ದುಮ್ಮಾನಗಳನ್ನು ಅಭಿವ್ಯಕ್ತಿಸುವಲ್ಲಿ ವಿಫಲವಾಗಿವೆ. ವಚನ ಸಾಹಿತ್ಯ ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡುವಲ್ಲಿ, ಅವರ ಮಾನಸಿಕ ದುಗುಡ ದುಮ್ಮಾನಗಳಿಗೆ ಸ್ಪಂದಿಸುವ, ಅವರ ಕೊರಳಿಗೆ ದನಿಯಾಗಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವ ವಿಶೇಷ ಗುಣವನ್ನು ಹೊಂದಿದೆ.

ವಚನಗಳನ್ನು ಕುರಿತು ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರೊ. ಶಿ.ಶಿ. ಬಸವನಾಳರು "ವಚನಗಳು ಗದ್ಯದ ಒಂದು ಮಾದರಿಯೆಂದೇ ಸ್ಥೂಲವಾಗಿ ಹೇಳಬಹುದಾದರೂ ಅವು ನಿಜವಾಗಿಯೂ ಗದ್ಯದ ಒಂದು ವಿಶಿಷ್ಟ ಮಾದರಿಯೆಂದೇ ಹೇಳುವುದು ವಿಹಿತ. ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯಪದ್ಯಗಳ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ, ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ" ಎಂದು ಅರ್ಥೈಸಿದರೆ, ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು "ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕ ಭಾವಗೀತೆ"ಗಳೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಂಶೋಧಕರಾದ ಡಾ. ಎಂ.ಎಂ. ಕಲಬುರ್ಗಿಯವರು "ವಚನಗಳು ಆಚಾರದ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ." ಎಂದಿದ್ದಾರೆ. ವಚನಗಳನ್ನು ಅವಲೋಕಿಸಿದಾಗ, ಡಾ. ಕಲಬುರ್ಗಿಯವರ ಅಭಿಪ್ರಾಯವನ್ನು ಒಪ್ಪಬೇಕಾಗುತ್ತದೆ.

ವಚನಕಾರರು ಸಮಾಜಕ್ಕೆ ನೀಡಿದ ಒಂದು ಅತ್ಯಮೂಲ್ಯ ಕಾಣಿಕೆ ಎಂದರೆ, ಕಾಯಕ ತತ್ತ್ವದ ಪರಿಕಲ್ಪನೆ. ಕಾಯಕದ ಪರಿಕಲ್ಪನೆ ವಚನ ಸಾಹಿತ್ಯದಲ್ಲಿ ಸರಳವಾಗಿ

ಅಭಿವ್ಯಕ್ತಿಗೊಂಡಿದೆ. "ಸರ್ವೋದಯದ ಎಲ್ಲ ಅರ್ಥಗಳನ್ನು ಒಳಗೊಂಡು ಅವನ್ನು ಮೀರಿರುವುದು ಶರಣರ ಕಾಯಕ ತತ್ತ್ವದ ಪರಿಕಲ್ಪನೆ. ಇಂದು ಅದು ತೀರಾ ಅಗತ್ಯವಾಗಿ ಮತ್ತು ತೀರಾ ತುರ್ತಾಗಿ ಬೇಕಾಗಿರತಕ್ಕ ಒಂದು ಮೌಲ್ಯ. ಇಂತಹ ಅನೇಕ ಜೀವನ ಮೌಲ್ಯಗಳನ್ನು ಕೇವಲ ಬರೀ ಬೋಧಿಸದೆ ನಿಜಜೀವನದಲ್ಲಿ ಶರಣರು ಮಾಡಿ ತೋರಿಸಿದರು. ಇಂದಿನ ಯಾವ ಪ್ರಜಾಪ್ರಭುತ್ವ ಯುಗದಲ್ಲಿ ಬಾಯಿ ಇಲ್ಲದವರಿಗೆ ಬಾಯಿ ಬಂತು, ಕೈ ಇಲ್ಲದವರಿಗೆ ಕೈ ಬಂತು ಎಂದು ಏನು ಹೇಳುತ್ತಿದ್ದೇವೆಯೋ ಅಂತಹುದನ್ನು ಆ ಯುಗದಲ್ಲೇ ನೀಡಿದ್ದು ಶರಣ ಸಾಹಿತ್ಯ. ಅದು ಕುಳಿತುಕೊಂಡು ಬರೆದಂತಹ ಸಾಹಿತ್ಯವಲ್ಲ; ಜೀವನದಲ್ಲಿ ಬೆರೆತು ನಡೆದು ಬಂದಂತಹ ಸಾಹಿತ್ಯ".

ಯಾವುದೇ ಸಾಹಿತ್ಯಕ್ಕೆ ಒಂದು ಸಾಮಾಜಿಕ ಬದ್ಧತೆ ಇರಬೇಕು. ಅಂಥದೊಂದು ಸಾಮಾಜಿಕ ಬದ್ಧತೆಯನ್ನು ಸಾಧ್ಯವಾಗಿಸುವ ಮೂಲಕ ಸಮಾಜ ಅಭಿವೃದ್ಧಿ ಹೊಂದುತ್ತದೆ. ಇಂತಹ ಚಲನಶೀಲ ಸಾಹಿತ್ಯ ನಮಗೆ ಇಂದು ಅಗತ್ಯ. ಇಂತಹ ಸಾಹಿತ್ಯನಿರ್ಮಾಣದಿಂದ ಸಮಾಜ ಜಾಗೃತಿಯಾಗುತ್ತದೆ. ವಚನಸಾಹಿತ್ಯ ಅಂತಹ ಸಮಷ್ಟಿ ಜಾಗೃತಿಯನ್ನು ಉಂಟು ಮಾಡಿದ್ದರಿಂದ ಅದೊಂದು ಜೀವಂತ ಸಾಹಿತ್ಯವಾಹಿನಿಯಾಗಿ ಜನರನ್ನು ಜಾಗೃತಿಗೊಳಿಸಿತು, ಎಚ್ಚರಿಸಿತು.

"12ನೇ ಶತಮಾನದ ಶರಣ ಸಾಹಿತ್ಯ ಒಂದು ಪ್ರಕಾರವಲ್ಲ, ಅದೊಂದು ಜೀವನದ ವಿಧಾನ. ವಚನದಿಂದ ಒಂದು ದೊಡ್ಡ ಚಳುವಳಿಯಾಯಿತು ಎಂಬುದು ಬಹುಶಃ ಕನ್ನಡ ಇತಿಹಾಸದಲ್ಲಷ್ಟೇ ಅಲ್ಲ, ಯಾವ ಇತಿಹಾಸದಲ್ಲೂ ಇಂತಹ ಘಟನೆಗಳು ಸಿಗುವುದು ಬಹಳ ಅಪರೂಪ. ಇದು ಬರೀ ಸಾಹಿತ್ಯವಾಗಿ ಉಳಿಯದೆ, ಇಡೀ ಜನರನ್ನು ಎಚ್ಚರಿಸುವಂತಹ ಒಂದು ಚಳವಳಿಯಾಯಿತು". ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಈ ಅಭಿಪ್ರಾಯಗಳು ವಚನ ಸಾಹಿತ್ಯ ಹಾಗೂ ವಚನ ಸಾಹಿತ್ಯ ಸಮಾಜಕ್ಕೆ ನೀಡಿದ ಕೊಡುಗೆಗೆ ಭಾಷ್ಯ ಬರೆದಂತಿದೆ. ಮನಸ್ಸಿನ ಭಾವನೆಗಳಿಗೆ ಒಂದು ಮೂರ್ತಿರೂಪವನ್ನು ಕೊಟ್ಟು, ಕೊರಳಿಗೆ ದನಿಯಾದ ವಚನಗಳಲ್ಲಿ ಮೂಡಿಬಂದ ಅಭಿವ್ಯಕ್ತಿಗಳು ಜನರನ್ನು ಅಂಧಕಾರದಿಂದ ಬೆಳಕಿನೆಡೆಗೆ ದಾರಿ ತೋರಿಸಿದ ತೋರುಗಂಬಗಳು.

ಡಾ. ಆರ್.ಸಿ. ಹಿರೇಮಠಯವರು ವಚನಸಾಹಿತ್ಯವನ್ನು ಕುರಿತು ಹೀಗೆ ಹೇಳಿದ್ದಾರೆ: "ವಚನ ವಾಙ್ಮಯ ಅನುಭಾವದ ಕೆನೆ; ಆಧ್ಯಾತ್ಮದ ಕೊನೆ. ಆತ್ಮಆತ್ಮ ಮತಿಸಿ ಹುಟ್ಟಿದ ದಿವ್ಯ ಸಾಹಿತ್ಯವದು. ಶಬ್ದಸೋಪಾನದ ಬಲದಿಂದ ನಿಶ್ಶಬ್ದವನ್ನು ಕಟ್ಟಿದ ಕುಸುಮ. ಮರ್ತ್ಯದ ಮನದ ಕತ್ತಲೆಯ ಕಳೆಯಲೆಂದು ಶರಣರು ಬೆಳಗಿಟ್ಟ ಮಹಾಜ್ಯೋತಿ, ಈ ವಚನ ವಾಙ್ಮಯ".

ವಚನಸಾಹಿತ್ಯ ಮೌಲ್ಯಗಳ ಒಂದು ಸಂಕೀರ್ಣ. ಅದು ಹಲವಾರು ಶ್ರೇಯಸ್ಕರ ಮೌಲ್ಯಗಳನ್ನು ಗರ್ಭೀಕರಿಸಿಕೊಂಡಿದೆ ಮಾತ್ರವಲ್ಲ, ತನಗೆ ತಾನು ಒಂದು ಮಹತ್ವದ ಮೌಲ್ಯವಾಗಿದೆ. ಈ ಮೌಲ್ಯಸಮುಚ್ಚಯದ ಅನುಸಂಧಾನ ಇಂದಿಗೂ ಅತ್ಯಂತ ಪ್ರಸ್ತುತ ಮತ್ತು ಪ್ರಯೋಜಕ.

ವಚನ ಒಂದು ಅಚ್ಚಗನ್ನಡ ಮಾಧ್ಯಮ. ಅದರಲ್ಲಿರುವುದು ಜನಭಾಷೆ, ಸಂಸ್ಕೃತ ಅಲ್ಲಿ ಇಲ್ಲವೆಂದಲ್ಲ. ಆದರೆ ಅದು ಕೂಡ ಕನ್ನಡವೇ ಎನಿಸುವಷ್ಟು ಪರಿಚಿತವಾದದ್ದು. ಕನ್ನಡ ಭಾಷೆಯ ಸಮಸ್ತ ಸುಪ್ತ ಶಕ್ತಿಯನ್ನು ವಚನಕಾರರು ಎಚ್ಚರಿಸಿ ಅದ್ಭುತ ರೀತಿಯಲ್ಲಿ ಬಳಸಿಕೊಂಡರು. ಅಷ್ಟೇ ಅಲ್ಲ, ಅದಕ್ಕೆ ಹೊಸ ಆಯಾಮಗಳನ್ನು ಅಳವಡಿಸಿದರು.

ವಚನಕಾರರಲ್ಲಿ ಭಾವತೀವ್ರತೆ ತನ್ನ ಅಭಿವ್ಯಕ್ತಿಯ ದಾರಿಯನ್ನು ತಾನೇ ಕಂಡುಕೊಳ್ಳುತ್ತದೆ. ಅಂಥ ಸಂದರ್ಭಗಳಲ್ಲಿ ವಚನಕಾರ ಪ್ರಜ್ಞಾಪೂರ್ವಕವಾಗಿ ಮಾಡಬಹುದಾದದ್ದು ಕಡಿಮೆ. ಹೀಗಿರುವುದರಿಂದಲೇ ಈ ವಚನಗಳು ಸಹಜವಾಗಿ ಓದುಗರ ಹೃದಯವನ್ನು ತಟ್ಟುತ್ತವೆ, ಮುಟ್ಟುತ್ತವೆ.

"ರಾಮಾಯಣ, ಮಹಾಭಾರತ ಆಕರಗಳ ಮೇಲೆಯೇ ಹೆಚ್ಚಾಗಿ ಕಣ್ಣಿಟ್ಟು ಆಸ್ಥಾನಗಳಲ್ಲಿ ಚಂಪುವಿನಲ್ಲಿ ಸ್ತುತಿಸುತ್ತಿದ್ದು ಕನ್ನಡಕ್ಕೆ ಹೊಸ ಆಕರಗಳ ಬಾಗಿಲು ತೆರೆದು ಮನುಷ್ಯನ ಒಳತೋಟಿಗೆ ಬಾಯಿಕೊಟ್ಟು ಕನ್ನಡದಲ್ಲಿ ಹೊಸ ಯುಗವನ್ನು ಆರಂಭಿಸಿದವರು ಶರಣ ಸಾಹಿತ್ಯ ನಿರ್ಮಾತೃಗಳು."

"ಶರಣರು ತಾವು ಸಾಹಿತ್ಯರಚನೆ ಮಾಡುತ್ತಿದ್ದೇವೆ ಅನ್ನುವ ಒಂದು ಪ್ರಜ್ಞೆಯಾಗಲೀ, ತಾವು ಬರೆಯುವ ವಚನಗಳ ಮೂಲಕ ಸಾಹಿತ್ಯಪರಂಪರೆಯ ನಿರ್ಮಾಣ ಆಗುತ್ತಿದೆ ಎನ್ನುವ ಎಚ್ಚರಿಕೆಯಾಗಲೀ ಇಲ್ಲದೆ ತಮಗೆ ತಾವೇ ಆತ್ಮಾರಾಮವಾದಂತಹ ಸ್ಥಿತಿಯೊಳಗೆ ಹೊರಹೊಮ್ಮುವಂತಹ ಸಾಹಿತ್ಯ. ಹೀಗಾಗಿ ಸಾಹಿತ್ಯೇತರ ಮನೋಧರ್ಮದಿಂದ ಹುಟ್ಟಿಕೊಂಡ ನಿಜವಾದ ಸಾಹಿತ್ಯ ವಚನಸಾಹಿತ್ಯ ಎಂದು ಹೇಳಬಹುದು." ಈ ಅಭಿಪ್ರಾಯಗಳು ವಚನ ಸಾಹಿತ್ಯದ ವೈಶಿಷ್ಟ್ಯತೆಯನ್ನು ಸೂಚಿಸುತ್ತದೆ.

ಒಂದು ಕಡೆ ಸಿದ್ಧರಾಮ ತನ್ನ ವಚನದಲ್ಲಿ "ಇಂತಪ್ಪ ವಚನರಚನೆಯನ್ನು ಬಿಟ್ಟು" ಎನ್ನುತ್ತಾನೆ. ಇಂತಹ ವಚನಗಳು ಅಂದರೆ ತಮ್ಮ ಆತ್ಮಸಾಧನೆಗೆ, ಆತ್ಮಶೋಧನೆಗೆ ಕಾರಣ ವಾಗುವಂತಹ ವಚನರಚನೆಗಳನ್ನು ಬಿಟ್ಟು, "ಕುತ್ಸಿತ ಕಾವ್ಯಾಲಂಕಾರವ ನೋಡುವವರ ನೋಡಿ ಹುಡಿ ಮಣ್ಣು ಹೊಯ್ತುದೇ ಮಾಣ್ಸನೇ ಕಪಿಲಸಿದ್ಧ ಮಲ್ಲಿಕಾರ್ಜುನ" ಎನ್ನುತ್ತಾನೆ.

ವಚನಕಾರರು 'ವಚನ' ಎಂಬ ಪದವನ್ನು ಮಾತು, ನುಡಿ, ಅನುಭವೋಕ್ತಿ ರೂಢಿಗತವಾದ ಸಾಮಾನ್ಯ ಅರ್ಥದಲ್ಲಿಯೂ; ಒಂದು ವಿಧದ ರಚನೆ, ಒಂದು ಸಾಹಿತ್ಯ ಪ್ರಕಾರ ಒಂದು ವಿಶೇಷ ಅರ್ಥದಲ್ಲಿಯೂ ಬಳಸಿದುದು ಕಂಡುಬರುತ್ತದೆ. ಶರಣರು ಆಡಿದ ಮಾತೇ ಅನುಭವದ ನುಡಿಯಾಗಿ, ಹಾಡಲು ಗೀತವಾಗಿ, ಓದಲು ಗದ್ಯವಾಗಿ,

ಹೇಳಲು ಉದ್ಧರಣೆಯ ವಾಕ್ಯವಾಗಿ ಇವೆಲ್ಲ ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಒಂದು ವಿನೂತನ ಸಾಹಿತ್ಯ ಪ್ರಕಾರ ರೂಪವನ್ನು ತಾಳಿ ನಿಂತಿದೆ.

"ವಚನಕಾರರು ಸ್ವತಂತ್ರಮತಿಗಳು ಹಾಗೂ ಪ್ರಯೋಗಶೀಲರು. ಅವರ ಜೀವಿತದ ಮುಖ್ಯ ಗುರಿ ಆತ್ಮನಿರೀಕ್ಷಣೆ ಮತ್ತು ಸಮಾಜಸುಧಾರಣೆ. ಅಂತರಂಗದ ಸಿದ್ಧಿಗಾಗಿ ಅವರ ಆತ್ಮನೊಡನೆ ಸಂಭಾಷಿಸಿದರೆ, ಬಹಿರಂಗದ ಸಾಧನೆಗಾಗಿ ಸಾಮಾನ್ಯರೊಡನೆ ಮಾತನಾಡಿದರು. ಹಾಗೆ ಮಾತನಾಡುವಾಗ ಅವರ ಸಹಜ ನುಡಿಯೇ ಅನುಭವದ ಅಭಿವ್ಯಕ್ತಿಯ ಮಾಧ್ಯಮವಾಗಿ, ಅದು ಯಾವುದೇ ಕೃತಕ ಪ್ರಭಾವಕ್ಕೆ ಒಳಗಾಗದೆ ಇದ್ದ ರೂಪದಲ್ಲಿಯೇ ಹೊರಹೊಮ್ಮಿತು. ಅನುಭವತೀವ್ರತೆ ಈ ಅಭಿವ್ಯಕ್ತಿಯಲ್ಲಿ ಅಡಗಿರುವುದರಿಂದ ಅನಿವಾರ್ಯವಾದ ಒಂದು ವಿಶಿಷ್ಟ ರೂಪ ತನ್ನಿಂದತಾನೇ ಆ ಕ್ಷಣದಲ್ಲಿ ಮೈದಾಳಿತು. ಅದೇ ವಚನವೆನಿಸಿತು".

ವಚನಗಳು ತಮ್ಮ ಸರಳತೆ ರೂಪದಿಂದ ಸಮಾಜಕ್ಕೆ ಸರಳತೆಯ ಗುಣಗಳನ್ನು ಮನದಟ್ಟು ಮಾಡಿಕೊಟ್ಟವು. "ಕಾವ್ಯಮಾರ್ಗದಲ್ಲಿ ಸಿದ್ಧಶೈಲಿಯ ಪೆಡಸುದಾರಿಯನ್ನು ಕೈಬಿಟ್ಟು ಜನರಿಗೆ ನೇರವಾಗಿ ಮುಟ್ಟಿಸಬಲ್ಲ ಸರಳ ಮಾರ್ಗವನ್ನು ಹಿಡಿದ ವಚನಸಾಹಿತ್ಯ ಸಮಾಜದ ಜನರ ಮನಸ್ಸಿನ ಮೇಲೂ ಈ ಸರಳತೆಯ ಅಚ್ಚನ್ನು ಒತ್ತಿದ್ದು ಒಂದು ದೊಡ್ಡ ಸಾಧನೆ ಎನ್ನಬೇಕು".

ಚಂಪೂ ಕಾವ್ಯದಲ್ಲಿ ಉಪಯೋಗಿಸುತ್ತಿದ್ದ ಗದ್ಯವನ್ನು ವಚನವೆಂದೇ ಕರೆಯುತ್ತಿದ್ದರು. ಆದರೆ ಶಿವಶರಣರ ರಚನೆಗಳನ್ನು 'ವಚನ'ಗಳೆಂದು ಪಾರಿಭಾಷಿಕವಾಗಿ ಬಳಸುತ್ತೇವೆ. ಶರಣರೂ ಅವನ್ನು ಹಾಗೆಯೇ ಕರೆದರು. ಬಿಡಿಭಾಗಗಳನ್ನು ಶುಷ್ಕವಲ್ಲದ ಪದ್ಯಗಂಧಿಯಾದ ವಿಶಿಷ್ಟ ಲಯಬದ್ಧತೆಯಿಂದ ಕೂಡಿದ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಿದ ಮುಕ್ತರೂಪದ ರಚನೆಗಳನ್ನು 'ವಚನ' ಎಂದು ಕರೆಯಲಾಗುತ್ತದೆ. ವಚನಗಳನ್ನು ಕುರಿತು ಒಂದು ಜನಪದ ತ್ರಿಪದಿಯಲ್ಲಿ ಹೀಗೆ ವರ್ಣಿಸಲಾಗಿದೆ.

> ಶಿವಶರಣ ದುಂಬಿಗಳು ಭವದೊಳಗೆ ಹಾರ್ಯಾಡಿ
> ಶಿವಮತದ ಹುಟ್ಟ ಕಟ್ಟಿದವು ವಚನಗಳು
> ಸತಿಯದುಳಿದಿರುವ ಜೇನುಗಳು

ಶಿವಶರಣರು ತಮ್ಮ 'ಶಿವಮತ ಪ್ರಸಾರ ಕಾರ್ಯದಲ್ಲಿ ತೊಡಗಿದಾಗ ಮೂಡಿಬಂದ ಈ ರಚನೆಗಳು ಅವರ ಅನುಭವದ ಸಾರ ಎಂಬುದನ್ನು ಈ ತ್ರಿಪದಿ ಬಹು ಸರಳವಾಗಿ, ಸುಂದರವಾಗಿ ವರ್ಣಿಸುತ್ತದೆ.

"ವಚನಗಳು ಯಾವುದೇ ನಿರ್ದಿಷ್ಟ ಛಂದೋಬಂಧಕ್ಕೆ ಒಳಗಾಗದಿದ್ದರೂ, ಅವುಗಳಲ್ಲಿ ಅಂತರ್ಲಯವಿರುವುದರಿಂದ ಅವು ಹಾಡಲೂ ಸಾಧ್ಯವಾಗುತ್ತಿದ್ದ ರಚನೆಗಳು. ವಚನಗಳನ್ನು ಸಾಹಿತ್ಯಕೃತಿಗಳೆಂಬ ಪ್ರಜ್ಞಾಪೂರ್ವಕ ಭಾವನೆಯಿಂದ ರಚಿಸಲಿಲ್ಲವಾದರೂ ಅವುಗಳ

ಕರ್ತೃಗಳಿಗೆ ಅವು ತಮ್ಮ ರಚನೆಗಳೆಂದು ಇತರರಿಗೆ ಗೊತ್ತಾಗಬೇಕೆಂಬ ಉದ್ದೇಶವಿತ್ತು. ಹೀಗಾಗಿ ವಚನಗಳ ಕೊನೆಯಲ್ಲಿ 'ಮುದ್ರಿಕೆ' ಅಥವಾ 'ಅಂಕಿತ'ಗಳನ್ನು ಅವರು ಬಳಸುತ್ತಾರೆ. ವಚನಗಳಂತಹ ಸಾಹಿತ್ಯ ಪ್ರಕಾರ ಅದುವರೆಗೆ ಯಾವ ಭಾಷೆಯಲ್ಲೂ ಇದ್ದಂತೆ ಕಾಣಿಸದು. ಅಂಕಿತಗಳನ್ನು ಈ ರೀತಿ ಬಳಸಿದವರಲ್ಲೂ ಪ್ರಾಯಶಃ ವಚನಕಾರರೇ ಮೊದಲಿಗರು."

"ವಚನಗಳು ಒಂದು ಕ್ಷಣದ ತೀವ್ರ ಭಾವನೆಯ ಅಭಿವ್ಯಕ್ತಿಗಳು. ಹಾಗಾಗಿ ಅಲ್ಲಿ ಒಂದು ಗಾಢ ಭಾವನೆ ಮಾತ್ರ ಎಡೆಪಡೆಯುತ್ತದೆ. ನಿರೂಪಣೆಗಿಂತ ಅವು ಸಹಜ ಉದ್ಧರಣಗಳಾಗಿರುವುದರಿಂದ ವೈಯಕ್ತಿಕ ಅನುಭಾವವೇ ಅಲ್ಲಿ ಮಾತಾಗುತ್ತದೆ. ಹೀಗೆ ಅವು ಭಾವಗೀತೆಗಳ ಲಕ್ಷಣಗಳನ್ನು ಹೊಂದುತ್ತವೆ. ಒಂದೊಂದು ಬಿಡಿ ರಚನೆಯೂ ವಚನಕಾರರ ವಿವಿಧ ಅನುಭವದ ನೆಲೆಗಳು. ವಿಚಾರವೈಖರಿ ಇವನ್ನು ಒಳಗೊಂಡಿರುವುದರಿಂದ ವೈವಿಧ್ಯವೆಂಬುದು ಅವುಗಳಲ್ಲಿ ಚೆಲ್ಲುವರಿದಿದೆ."

"ಒಂದೇ ಮಾತಿನಲ್ಲಿ ಹೇಳುವುದಾದರೆ – ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕತೆಯ ಭಾವಗೀತೆಗಳು" ಎಂಬ ವಿಮರ್ಶಕ ಡಾ. ರಂ.ಶ್ರೀ. ಮುಗಳಿಯವರ ಅಭಿಪ್ರಾಯ ಸ್ವೀಕಾರಾರ್ಹ.

12ನೇ ಶತಮಾನದಲ್ಲಿ ನಡೆದ ವಚನ ಚಳುವಳಿಯು ಕನ್ನಡ ಸಾಹಿತ್ಯದ ಸುದೀರ್ಘ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಹಿಂದೆಂದೂ ಕಂಡರಿಯದ ಸಾಮಾಜಿಕ ಚಳುವಳಿ ನಡೆಯಿತು. ಆಗ ನಡೆದ ಚಳುವಳಿ ಅಥವಾ ಕ್ರಾಂತಿ ರಕ್ತಪಾತದಿಂದ ಮೂಡಿಬಂದುದಲ್ಲ. ಜನರ ಮಾನಸಿಕ ಪರಿವರ್ತನೆ ಮಾಡುವ ಚಳುವಳಿಯಾಗಿ ಎಲ್ಲರ ಹೃದಯವನ್ನು ಗೆಲ್ಲುವಲ್ಲಿ ಸಫಲವಾಯಿತೆನ್ನಬಹುದು. ಇಲ್ಲಿ ವೈಚಾರಿಕತೆ ಹೆಚ್ಚು ಕೆಲಸ ಮಾಡಿತು. ಗಾಂಧೀಜಿ ಹೇಳಿದಂತೆ "ಹಿಂಸೆ ಮೂಡಿಬರುವುದು ಭೀತಿಯಿಂದ ಅಥವಾ ಹೇಡಿತನ ದಿಂದ. ಕತ್ತಿ, ಬಂದೂಕುಗಳನ್ನು ಹಿಡಿದ ಯೋಧನಿಗಿಂತ ಬರಿಗೈ ಬಂಟನಾದ ಸತ್ಯಾಗ್ರಹಿ ಹೆಚ್ಚು ಧೀರನೂ, ಸಮರ್ಥನೂ ಆಗಬೇಕಾಗುತ್ತದೆ. ಅದು ಕೇವಲ ದೈಹಿಕ ಶಕ್ತಿಯಲ್ಲ; ಆಂತರಿಕ ಶಕ್ತಿ, ಆತ್ಮಶಕ್ತಿ. ಆದ್ದರಿಂದ ವೈಚಾರಿಕ ಕ್ರಾಂತಿ, ರಕ್ತಕ್ರಾಂತಿಗಿಂತ ಮುಂದಿನ ಹೆಜ್ಜೆ.

"12ನೇ ಶತಮಾನದ ಶರಣರು ತಮ್ಮ ಕಾಲದ ಪರಿಸ್ಥಿತಿಗನುಗುಣವಾಗಿ ಅಂತಹ ಧೀರ ವೈಚಾರಿಕ ಆಂದೋಲನವನ್ನು ಕೈಗೊಂಡರು. ಅದರ ನೇತಾರರಾದ ಬಸವಣ್ಣನವರು ಜೀವನವನ್ನು ಸಮಗ್ರ ಸ್ವರೂಪದಲ್ಲಿ ನೋಡಿದವರು. ಅಂದಿನ ಧರ್ಮ, ಪೂರ್ಣಜೀವನಕ್ಕೆ ಮಾರಕವಾಗಿ, ಶೋಷಣೆಯ ಮಾಧ್ಯಮವಾಗಿದ್ದುದನ್ನು ಕಂಡು ಕೆರಳಿದವನು, ಸಕ್ರಿಯವಾಗಿ ಅದನ್ನು ಪ್ರತಿಭಟಿಸಿದವನು. ಆದರೆ ಆ ಪ್ರತಿಭಟನೆ ರಾಜಕೀಯ ಸ್ವರೂಪದ್ದಾಗಿರಲಿಲ್ಲ. ರಾಜ್ಯದ ಭಂಡಾರಿಯಾಗಿ ರಾಜಕೀಯದಲ್ಲಿ ಆತ ಪ್ರಧಾನ ಅಧಿಕಾರದಲ್ಲಿದ್ದರೂ ಆತ

ತನ್ನ ಕ್ರಾಂತಿಗೆ ಅವಲಂಬಿಸಿದ ಮಾರ್ಗ ವೈಚಾರಿಕವಾದದ್ದು. ಜನಜಾಗೃತಿಯ ಕಷ್ಟಕರವಾದ ಮಾರ್ಗವನ್ನು ಶಿವಪರವಾದ ಆತನ ಮನಸ್ಸು ಎತ್ತಿಕೊಂಡಿತು."

ಬಸವಣ್ಣನವರ ನೇತೃತ್ವದ ವಚನ ಚಳುವಳಿ ನಾತ್ಯಾತ್ಮಕವಾದ ಚಳುವಳಿ ಯಾಗಿರಲಿಲ್ಲ. ಮನಸ್ಸಿನ ಕತ್ತಲೆಯನ್ನು ನಿಧಾನವಾಗಿ ಕರಗಿಸಿ ವಿಚಾರಜ್ಯೋತಿಯನ್ನು ಬೆಳಗುವ ಚಳುವಳಿಯಾಗಿತ್ತು. ಅಜ್ಞಾನ, ಅಂಧಕಾರ, ಮೂಢನಂಬಿಕೆ, ಮೇಲು-ಕೀಳು ಮೊದಲಾದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಬಸವಣ್ಣ ಕೈಗೆತ್ತಿಕೊಂಡಿದ್ದು ಜನಸಾಮಾನ್ಯರಿಗೆ ಅರ್ಥವಾಗುವ ವಚನಗಳನ್ನು. ಇದಕ್ಕೆ ಮುನ್ನ ವಚನ ಪ್ರಕಾರ ದಾಸಿಮಯ್ಯ ಮುಂತಾದವರಿಂದ ಉಗಮಗೊಂಡಿತ್ತು. ನೇರವಾದ ಭಾಷೆಯಲ್ಲಿ, ಆಡುಮಾತಿನಲ್ಲಿ ಜನತೆಯನ್ನು ಮುಟ್ಟಿ ಜಾಗೃತಗೊಳಿಸುವ ಒಂದು ಉತ್ತಮವಾದ, ಸಶಕ್ತವಾದ ಶಕ್ತಿಯನ್ನು ಬಸವಣ್ಣ ಅವುಗಳಲ್ಲಿ ಕಂಡುಕೊಂಡ. ಲೇಖನಿ ಕತ್ತಿಗಿಂತ ಹರಿತವಾದದ್ದು, ತೀಕ್ಷ್ಣವಾದದ್ದು ಎಂಬುದನ್ನು ವಚನಗಳ ಮೂಲಕ ತೋರಿಸಲು ನಿರ್ಧರಿಸಿದ. ದಲಿತರಿಗೆ, ಅಸಹಾಯಕ ರಿಗೆ ಧೈರ್ಯವನ್ನು ತುಂಬಿ ಉತ್ತೇಜಿಸಿ ಪರಿಣಾಮವಾಗಿ ಸಾವಿರಾರು ವಚನಗಳು ಸೃಷ್ಟಿಯಾದವು. ಅನುಭವಮಂಟಪದಲ್ಲಿ ವಚನಗಳ ತಾರ್ಕಿಕ ಸಂಘರ್ಷದಿಂದ ಕ್ರಾಂತಿಯ ಕಿಡಿಗಳು ಸಿಡಿದವು. ಆ ಕಿಡಿಗಳು ನಾಡಿನ ಉದ್ದಗಲಕ್ಕೂ ವ್ಯಾಪಿಸಿದವು. ವಚನ ಚಳುವಳಿ ಮೇಲು-ಕೀಳು, ಅಸ್ಪೃಶ್ಯತೆ, ಮೂಢನಂಬಿಕೆ, ಕಂದಾಚಾರಗಳು, ಪುರೋಹಿತಶಾಹಿಗಳ ವಿರುದ್ಧ ನಡೆದ ಬಂಡಾಯ ಚಳುವಳಿಯಾಯಿತು.

ಬಸವಣ್ಣನವರು ವಚನ ಚಳುವಳಿಗೆ ಒಂದು ಖಚಿತವಾದ, ನಿರ್ದಿಷ್ಟವಾದ ದಾರಿಯನ್ನು ತೋರಿಸಿದರು. ಅವರು ಒಬ್ಬ ಸಮರ್ಥ ಸಮಾಜವಿಜ್ಞಾನಿಯಾಗಿ, ಧಾರ್ಮಿಕ ಪ್ರವಾದಿಯಾಗಿ ಸಮಾಜದಲ್ಲಿ ಜಡ್ಡುಗಟ್ಟಿದ ಅನೇಕ ಸ್ವರಗಳಲ್ಲಿ ಚೈತನ್ಯದ ಚಿಲುಮೆ ಚಿಮ್ಮುವಂತೆ ಮಾಡಿದರು. ಬಸವಣ್ಣನವರ ಈ ಚಳುವಳಿಗೆ ಮಾನವೀಯತೆ ತಳಹದಿಯಾಯಿತು. ಮಾನವೀಯ ಮೌಲ್ಯಗಳು ಸಮಾಜದಲ್ಲಿ ಸಾಕಾರಗೊಳ್ಳುವಂತೆ ಮಾಡಲು ಅವರು ಪ್ರಾಮಾಣಿಕ ಪ್ರಯತ್ನ ಮಾಡಿದರು. ಧರ್ಮದಲ್ಲಿದ್ದು ಕೆಲವು ನ್ಯೂನತೆಗಳನ್ನು ಕಟುವಾಗಿ ಟೀಕಿಸಿದರು. ಅವುಗಳ ವಿರುದ್ಧ ಸಿಡಿದು ನಿಂತರು.

ಬಸವಣ್ಣನವರು ತಮ್ಮ ವಿವೇಚನೆ, ಮೌಲ್ಯಗಳನ್ನು ಅಗ್ನಿಪರೀಕ್ಷೆಗೆ ಒಳಪಡಿಸಿ, ಕಾಳಿಕೆಗಳನ್ನು ಕಳೆದುಕೊಂಡು ಉಳಿದವುಗಳನ್ನು ಮಾತ್ರ ಸ್ವೀಕರಿಸಿದರು. ಆದ್ದರಿಂದಲೇ ಅದು ಇಹವನ್ನು ತಿರಸ್ಕರಿಸದೆ ಆರ್ಥಿಕ ಸಮಾನತೆಯ ಆಧಾರದ ಮೇಲೆ ರೂಪಿತವಾದ ಧರ್ಮವಾಯಿತು. ಪ್ರತಿಯೊಬ್ಬನು ದೇಹಶ್ರಮದಿಂದ ದುಡಿದು ಬಂದುದನ್ನು ಹಂಚಿ ತಿನ್ನುವುದೇ ಆ ಧರ್ಮದ ಪ್ರಾಥಮಿಕ ಅವಶ್ಯಕತೆಯಾಯಿತು. ಇದನ್ನು 'ಕಾಯಕ' ಎಂದು ಕರೆದರು.

ಅಂದಿನ ಚಳುವಳಿ ವಚನ ರಚನೆಗೆ ಸೀಮಿತವಾಗಿ ಬೌದ್ಧಿಕವಾಗಿ ಉಳಿಯಲಿಲ್ಲ. ವಚನಗಳಲ್ಲಿ ಮೂಡಿದ ತತ್ತ್ವದರ್ಶನ ಜನಸಾಮಾನ್ಯರನ್ನು ಮುಟ್ಟಿ ವ್ಯಾಪಕವಾಗಿ ಬೆಳೆಯಿತು. "ಅಂದಂದಿನ ಕಾಯಕ ಅಂದಂದು ಮಾಡಿ ಶುದ್ಧರಾಗಬೇಕು" ಎಂಬ ಮಾತು ದಿನ ನಿತ್ಯದ ಆಚರಣೆಯಲ್ಲಿ ಅಳವಟ್ಟಿತು. "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೇ ಅಯ್ಯ?" "ಈಸಕ್ಕಿಯಾಸೆ ನಿಮಗೇಕೆ, ಈಶ್ವರನೊಪ್ಪ" ಎಂದು ಹೆಚ್ಚಾಗಿ ತಂದ ಅಕ್ಕಿಯನ್ನು ಹಿಂದಕ್ಕೆ ಸುರಿದ ಲಕ್ಕಮ್ಮನ ನಿಷ್ಠೆಯನ್ನು ಕಂಡಾಗ ಈ ಚಳುವಳಿಯಿಂದಾದ ಕಾಯಕದ ಜಾಗೃತಿ ಮನವರಿಕೆಯಾಗತ್ತದೆ. ಇಂಥ ನೂರಾರು ಜನ ಶರಣ–ಶರಣೆಯರು ತಮ್ಮ ತಮ್ಮ ಸಾಮಾನ್ಯ ಕಾಯಕಗಳಲ್ಲಿ ಮಗ್ನರಾಗಿದ್ದುಕೊಂಡೇ ಪೂರ್ಣ ವ್ಯಕ್ತಿತ್ವವನ್ನು ಸಾಧಿಸಿದರು. ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ ಮೊದಲಾದವರು ಹಾಗಿರಲಿ, ಮೆಟ್ಟು ಹೊಲಿಯುವ ಕಾಯಕದ ಮಾದಾರ ಧೂಳಯ್ಯ, ದನ ಕಾಯುವ ಕೆಲಸದ ತುರುಗಾಹಿ ರಾಮಣ್ಣ, ಬಾಗಿಲು ಕಾಯುವ ಪಡಿಹಾರಿ ಉತ್ತಣ್ಣ, ಹಗ್ಗ ಹೊಸೆಯುವ ನುಲಿಯ ಚಂದಯ್ಯ ಹೀಗೆ ಹಲವಾರು ಶರಣರನ್ನು ಹೆಸರಿಸುತ್ತಾ ಹೋಗಬಹುದು. ಇವರು ವಚನಗಳಲ್ಲಿ ತಾವು ಆಂತರಿಕವಾಗಿ ಏರಿದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಧೂಳಯ್ಯ ಮೆಟ್ಟು ಹೊಲಿಯುವ ಕಾಯಕವನ್ನೇ ಆಧ್ಯಾತ್ಮಿಕ ಸಾಧನೆಯ ಸಾಂಕೇತಿಕ ಮಟ್ಟಕ್ಕೆ ಏರಿಸಿದರೆ, ರಾಮಣ್ಣ ದನಕಾಯುವುದನ್ನು ಅರ್ಥವತ್ತಾಗಿ ತನ್ನ ಸಾಧನೆಗೆ ಹೋಲಿಸಿದ್ದಾನೆ. 'ಕಾಯಕವೇ ಕೈಲಾಸ' ಎಂಬುದರ ಅರ್ಥವ್ಯಾಪ್ತಿ ಏನೆಂಬುದು ಇಂತಹ ಶರಣ ವಚನಗಳನ್ನು ಕಂಡಾಗ ಮನದಟ್ಟಾಗುತ್ತದೆ. ಸಂಸ್ಕಾರ ಯಾವುದೇ ಒಂದು ಜನಾಂಗಕ್ಕೆ ಮೀಸಲಾಗಿಲ್ಲದೆ ಅವಕಾಶವನ್ನು ಕೊಟ್ಟರೆ ಸಮಾಜದ ಅತಿ ಕೆಳಸ್ತರದಿಂದಲೂ ಅದ್ಭುತ ಪ್ರತಿಭೆ ಹೇಗೆ ಅರಳಬಹುದೆಂಬುದಕ್ಕೆ ಈ ವಚನ ಚಳುವಳಿ ಇಂತಹ ಹಲವಾರು ಉದಾಹರಣೆಗಳ ಮೂಲಕ ಸಾಕ್ಷಿಯನ್ನು ಒದಗಿಸುತ್ತದೆ.

ಬಸವಣ್ಣನವರು ರೂಪಿಸಿದ ಕಾಯಕ ತತ್ತ್ವದಡಿಯಲ್ಲಿ ಯಾರು ಬೇಕಾದರೂ ಭಾಗವಹಿಸಬಹುದಾಗಿತ್ತು. ಇಲ್ಲಿ ಯಾವುದೇ ಕಾಯಕ ಮೇಲೂ ಅಲ್ಲ; ಕೀಳೂ ಅಲ್ಲ, ಎಲ್ಲವೂ ಸಮಾನವಾದದ್ದು. ತಾವು ಮಾಡುವ ವೃತ್ತಿಯಲ್ಲಿ ಪ್ರಾಮಾಣಿಕತೆ, ನಿಷ್ಠೆ, ನೀತಿ ಇವುಗಳು ಒಳಗೊಂಡಿರಬೇಕೆಂಬುದು ಬಹು ಮುಖ್ಯವಾದ ಅಂಶವಾಗಿತ್ತು. ಸಮಾನತೆ ಪ್ರಧಾನ ಗುಣವಾಗಿತ್ತು. ಇಲ್ಲಿ ಜಾತಿ, ವರ್ಗ ಎಲ್ಲವೂ ಗೌಣವಾಗಿದ್ದು ಸಾಧನೆ ಮಾತ್ರ ಮುಖ್ಯವಾಗಿತ್ತು. ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ನಡೆನುಡಿಯಲ್ಲಿ ಏಕತೆಯನ್ನು ಸಾಧಿಸುವಂತಹುದು. ಬಸವಣ್ಣ ಮೊದಲಾದ ಶರಣರು ನುಡಿದಂತೆ ನಡೆದು ತೋರಿಸಿದರು. ಸಮಾನತೆಯನ್ನು ಬಾಯಲ್ಲಿ ಹೇಳಿದರೆ ಸಾಲದು ಎಂದರಿತು ಕಾರ್ಯತಃ ಆಚರಿಸಿ ತೋರಿಸಿದರು.

ವಚನ ಚಳುವಳಿಯ ಮತ್ತೊಂದು ಗಮನಾರ್ಹ ಸಾಧನೆ ಎಂದರೆ ಶರಣರು ಜಾತಿಭೇದವನ್ನು ತೊಡೆದಂತೆಯೇ ಲಿಂಗಭೇದವನ್ನೂ ತೊಡೆದುಹಾಕಿದರು. "ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ" ಎಂಬುದನ್ನು ಸಾಧಿಸಿ ತೋರಿಸಿದರು. ಅಕ್ಕ ನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕಮಹಾದೇವಿ ಮೊದಲಾದ ಪ್ರಮುಖರ ಜೊತೆಗೆ ಸಾಮಾನ್ಯ ಮಹಿಳೆಯರೂ ನಿಷ್ಠಾವಂತರಾಗಿ ತಮ್ಮ ಪತಿಯ ಸಾಧನೆಯಲ್ಲಿ, ಊರುಗೋಲಾಗಿದ್ದುಕೊಂಡೇ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಅವರು ತಮ್ಮ ವ್ಯಕ್ತಿತ್ವವನ್ನು ಬೆಳಗುವುದರ ಜೊತೆಗೆ ವಚನಗಳನ್ನು ರಚಿಸಿ ತಮ್ಮ ಸಾಹಿತ್ಯಕ ಪ್ರತಿಭೆಯನ್ನೂ ಅಭಿವ್ಯಕ್ತಿಗೊಳಿಸಿದರು.

"ವಚನ ಚಳುವಳಿ ಅಂದಿನ ಜನಜೀವನದಲ್ಲಿ ಸಮಗ್ರ ಕ್ರಾಂತಿಗೆ ಕಾರಣವಾದ ಒಂದು ರಚನಾತ್ಮಕ ಮತ್ತು ವಿಧಾಯಕವಾದ ಆಂದೋಲನ. ಇದು ಜೀವನವನ್ನು ಪೂರ್ಣ ದೃಷ್ಟಿಯಿಂದ ನೋಡಿತು. ವ್ಯಷ್ಟಿ–ಸಮಷ್ಟಿಗಳ, ಸಮಾಜ– ಧರ್ಮಗಳ ಅಂತರಂಗ–ಬಹಿರಂಗ, ಇಹ–ಪರ, ವಿಧಿ–ನಿಷೇಧ, ಬುದ್ಧಿ–ಭಾವ, ನಡೆ–ನುಡಿ, ನಿಷ್ಠೆ–ನಿಯಮ, ಆಚಾರ–ವಿಚಾರಗಳು ಹೀಗೆ ಒಟ್ಟು ಮಾನವ ಜೀವಿತದ ಎಲ್ಲ ಸಮಸ್ಯೆಗಳ ಪದರಗಳನ್ನು ವಿಶ್ಲೇಷಿಸಿ, ಸಾರ್ವತ್ರಿಕವಾಗಿ ವಿಚಾರಸಮ್ಮತವಾದ ಉತ್ತರವನ್ನು ಕಂಡುಕೊಳ್ಳಲು ನಡೆದ ಸಾಮೂಹಿಕ ಚಳುವಳಿ ಇದು"

ಎಂ.ಆರ್. ಶ್ರೀನಿವಾಸಮೂರ್ತಿಯವರು ವಚನ ಸಾಹಿತ್ಯವನ್ನು ಕುರಿತು "ವಚನ ಸಾಹಿತ್ಯ ಎರವಲು ತಂದದ್ದಲ್ಲ. ಅದು ಕನ್ನಡದ ಸ್ವಾರ್ಜಿತ ಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ; ಅವರು ಅಚ್ಚಗನ್ನಡ ಬೇಸಾಯಗಾರರು" ಎಂದು ಹೇಳಿರುವುದು ವಚನ ಸಾಹಿತ್ಯ ರಚನೆಯ ದಿಕ್ಕನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ವಚನ ರಚನೆಯಲ್ಲಿ ಅನುಭಾವಕ್ಕೆ ಪ್ರಾಧಾನ್ಯ ಹಾಗಾಗಿ ಅಲ್ಲಿ ಕಾವ್ಯಾಲಂಕಾರಗಳಿಗೆ ಅವಕಾಶವಿಲ್ಲ. ಸಿದ್ಧರಾಮ ತನ್ನ ವಚನವೊಂದರಲ್ಲಿ ವಿವಿಧ ಶರಣರ ವಚನಗಳ ಸಂಖ್ಯೆಯನ್ನು ಹೇಳಿ ಕೊನೆಗೆ "ಇಂತಪ್ಪ ವಚನ ರಚನೆಯ ಬಿಟ್ಟು, ಹುಡಿಮಣ್ಣ ಹೊಯ್ಯದೆ ಮಾಣ್ಬನೆ ಕುತ್ಸಿತ ಕಾವ್ಯಾಲಂಕಾರ ನೋಡುವರ ನೋಡಿ" ಎಂದು ಹಂಗಿಸಿದ್ದಾನೆ. ವಚನಗಳು ವಾಗ್ರಚನೆಯಲ್ಲ, ಕಾವ್ಯಗಳಲ್ಲ. ಹೀಗಾಗಿ ಅವುಗಳಲ್ಲಿ ಶ್ರುತಿಹಿತವನ್ನಾಗಲೀ ಛಂದೋಬದ್ಧತೆಯನ್ನಾಗಲೀ, ನುಡಿಬೆಡಗನ್ನಾಗಲೀ ನಿರೀಕ್ಷಿಸಬಾರದೆಂಬುದು ಸಿದ್ಧರಾಮನ ನಿಲುವು.

ವಚನ ರಚನೆಯು ಸಾಹಿತ್ಯಕ ಉದ್ದೇಶದಿಂದ ಆದದ್ದಲ್ಲವೆಂಬುದು ಸ್ಪಷ್ಟವಾಗಿಯೇ ಇದೆ. ಆದರೆ ಅದು ಭಾಷೆಯ ಮೂಲಕ ಅಭಿವ್ಯಕ್ತಿಗೊಳ್ಳುವಾಗ, ಪ್ರತಿಭಾಮೂಸೆಯಿಂದ ಹೊರಹೊಮ್ಮಿದಾಗ ಅದು ಸಹಜವಾಗಿಯೇ ಕಾವ್ಯತ್ವದಿಂದ ಕೂಡಿರುತ್ತದೆ. ಜನ ಸಾಮಾನ್ಯರಿಗೂ ಅರ್ಥವಾಗುವಂತೆ ರಚನೆಗೊಂಡ ವಚನಗಳು ಕನ್ನಡ ಸಾಹಿತ್ಯದ

ಶ್ರೇಷ್ಠ ಸಾಹಿತ್ಯ ಪ್ರಕಾರ; ಕನ್ನಡ ಭಾಷಾಸಾಹಿತ್ಯಗಳಿಗೆ ಒಂದು ಹೊಸ ತಿರುವನ್ನು ತಂದುಕೊಟ್ಟ ವಿಶಿಷ್ಟವಾದ ಪರಂಪರೆಯನ್ನು ನಿರ್ಮಿಸಿದ ರಚನೆಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವುದು ಸಹಜವಾಗಿಯೇ ಇದೆ.

ವಚನಗಳ ರಚನೆಯೆಂದರೆ ಅಷ್ಟಾದಶ ವರ್ಣನೆಗಳು, ಕವಿಸಮಯಗಳು, ಅಲಂಕಾರ ಗಳು, ಇವುಗಳಿಂದ ಕೂಡಿ ಮನೋಹರವಾಗಿರಬೇಕೆಂಬ ಭಾವನೆಯಿಂದ ಬಂದದ್ದಲ್ಲ, ಆದರೆ ಅವುಗಳಲ್ಲಿ ಈ ಮೇಲೆ ಹೇಳಿದ ಅಂಶಗಳೂ ಇವೆ. "ವಚನದಲ್ಲಿ ನಾಮಾಮೃತ ತುಂಬಿ" ಎಂದು ಆರಂಭವಾಗುವ ಬಸವಣ್ಣನವರ ವಚನದಲ್ಲಿ 'ತುಂಬಿ' ಶಬ್ದವು ಹೇಗೆ ಸಾರ್ಥಕವಾದ ಶ್ಲೇಷೆಯಾಗಿದೆಯೆಂಬುದನ್ನು ಹಲವಾರು ವಿದ್ವಾಂಸರು ಗುರುತಿಸಿದ್ದಾರೆ.

ವಚನಗಳು ಕನ್ನಡ ಭಾಷೆಗೆ ಒಂದು ಹೊಸ ಹೊಳಪನ್ನು ತಂದುಕೊಟ್ಟಿತು. ಈ ಹೊಳಪು 21ನೇ ಶತಮಾನದವರೆಗೂ ಉಳಿದುಬಂದಿರುವುದು ವಚನ ಸಾಹಿತ್ಯದ ಜೀವಂತಿಕೆಗೆ ಒಂದು ಉಜ್ವಲ ನಿದರ್ಶನ. ಆಡುಮಾತಿನ ಬಳಕೆ, ನುಡಿಗಟ್ಟು, ನಾಣ್ಣುಡಿ, ಗಾದೆಗಳ ಪ್ರಯೋಗ, ಶಬ್ದಗಳ ಸಹಜ ಆಯ್ಕೆ ಪ್ರಾಸಶ್ಲೇಷೆಗಳ ಅಪ್ರಯತ್ನಪೂರ್ವಕ ಪ್ರಯೋಗ, ಇವೆಲ್ಲವೂ ವಚನಗಳಲ್ಲಿ ಪಡಿಮೂಡಿವೆ.

ಕನ್ನಡ ಭಾಷೆಗೆ ಒಂದು ಹೊಸ ಆಯಾಮವನ್ನು ತಂದು ಕೊಟ್ಟವರು ವಚನಕಾರರು. ವಚನ ಸಾಹಿತ್ಯ ಕನ್ನಡದ ವಿಶೇಷ ಆಸ್ತಿ, ಸ್ವಂತ ಸಾಹಿತ್ಯ ಪ್ರಕಾರ. ವಚನ ಚಳುವಳಿಯು ಆಧುನಿಕ ಮನಸ್ಸಿಗೆ ಹಿಡಿಸಿರುವುದು ಅದರ ಜನಪರ ಧೋರಣೆಯಿಂದಾಗಿ. ತನ್ನ ಪರಿದಿಗೆ ಬಂದ ಜನರನ್ನು ಅದು ಸಂಘಟಿಸಬಯಸಿದುದು ಸಮಾನತೆಯ ನೆಲೆಗಟ್ಟಿನ ಮೇಲೆ. ಜಾತಿಗಳ ನಡುವಿನ ಅಸಮಾನತೆ, ಲಿಂಗಭೇದದ ಅರ್ಥಹೀನತೆ, ಆರ್ಥಿಕ ಶೈಕ್ಷಣಿಕ ತಾರತಮ್ಯಗಳ ಅಸಮಾನತೆ ಇವು ಸಹಜವಲ್ಲ ವೆಂದು ಸಾರಿ ಹೇಳಿ ಎಲ್ಲರಿಗೂ ಸಮಾನಾವಕಾಶದ ಹೊಸ ದಿಗಂತವನ್ನು ತೆರೆದಿದ್ದು ಈ ಚಳುವಳಿಯ ವೈಶಿಷ್ಟ್ಯ.

"ವಚನಗಳು ಒಂದು ಕಡೆ ಸಾಹಿತ್ಯ, ಮತ್ತೊಂದು ಕಡೆ ಶಾಸ್ತ್ರ ವಚನಗಳಲ್ಲಿ ಬಿಡಿ ಬಿಡಿಯಾದ ಸುಂದರ ಮುಕ್ತಕಗಳಿವೆ. ವೈಯಕ್ತಿಕ ಅನುಭಾವ ಚಿಂತನೆ ಅದಕ್ಕೆ ಸಂಬಂಧಿಸಿದ ಲೋಕಾನುಭವಗಳೊಡನೆ ಹೋಲಿಕೆ, ವಸ್ತುಸನ್ನಿವೇಶಕ್ಕೆ ಅನುಗುಣವಾದ ಭಾಷೆ ಕೇಳುಗರ ಹೃದಯ ಮುಟ್ಟಿಸುವಂತಹ ವಿನೂತನ ಉಪಮೆ ರೂಪಕ, ವ್ಯಕ್ತಿಶ್ರೇಯಸ್ಸು ಸಾಧಿತವಾಗಬೇಕೆಂಬ ಹಂಬಲಗಳ ಸಮೂಹಿತವಾದ ಸೃಷ್ಟಿ. ಈ ವಚನಗಳು ಭಾವಗೀತೆಗಳು ಆಗಿವೆ, ಬೆಡಗಿನ ವಚನಗಳೂ ಆಗಿವೆ" ಎಂಬ ಹಿರಿಯ ವಿದ್ವಾಂಸರಾದ ಡಾ. ಎಸ್.ಎಂ. ವೃಷಭೇಂದ್ರಸ್ವಾಮಿಯವರ ಅಭಿಪ್ರಾಯವೂ ಸಹ ವಚನಗಳ ವೈಶಿಷ್ಟ್ಯವನ್ನು ತಿಳಿಸುತ್ತದೆ.

□

# ಯೋಗದ ಮಹತ್ವ

**ಸಂಗಮೇಶ ಎನ್. ಜವಾದಿ**

ಯೋಗ ಪುರಾತನಕಾಲದಿಂದಲೂ ಮನುಷ್ಯನಿಗೆ ಪ್ರಕೃತಿ ನೀಡಿದ ಅತ್ಯಂತ ಪ್ರಮುಖ ಮತ್ತು ಅತಿ ಮಹತ್ವಪೂರ್ಣವಾದ ಕೊಡುಗೆಯಾಗಿದೆ. ಇದು ಮನುಷ್ಯನನ್ನು ತನ್ನ ಜೀವನದುದ್ದಕ್ಕೂ ಪ್ರಕೃತಿಯೊಂದಿಗೆ ಸಂಪರ್ಕಿಸಿ, ದೇಹ ಮತ್ತು ಮನಸ್ಸಿನ ನಡುವೆ ಸಾಮರಸ್ಯವನ್ನು ಸೃಷ್ಟಿಸುತ್ತದೆ. ಜೀವನವನ್ನು ಸುಂದರವಾಗಿಡುತ್ತದೆ. ಇದು ವ್ಯಕ್ತಿಯ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಬೌದ್ಧಿಕ ಮಟ್ಟಗಳಂತಹ ಎಲ್ಲಾ ಆಯಾಮಗಳನ್ನು ಹತೋಟಿಯಲ್ಲಿಡುತ್ತದೆ. ಶಾರೀರಿಕ, ಮಾನಸಿಕ ಮಟ್ಟದ ಸೂಕ್ಷ್ಮತೆಯನ್ನು ಒದಗಿಸುತ್ತದೆ. ಮಾನವನ ದೇಹದ ವಿಭಿನ್ನ ತೊಂದರೆಗಳನ್ನು ಸುಧಾರಿಸಿ, ಆರೋಗ್ಯವನ್ನು ಸಂಪೂರ್ಣವಾಗಿ ಸಂರಕ್ಷಿಸಿಕೊಳ್ಳಲು ಸದಾಕಾಲ ಸಹಾಯ ಮಾಡಿ, ಕಾಪಾಡುತ್ತದೆ.

ಯೋಗವು ದೇಹವನ್ನು ಆತ್ಮದೊಂದಿಗೆ ಒಂದುಗೂಡಿಸುವ ಅದ್ಭುತವಾದ ನೈಸರ್ಗಿಕ ಶಕ್ತಿ. ಇದು ಮಾನವನಿಗೆ ಆಂತರಿಕ ಶಾಂತಿಯನ್ನು ಪಡೆಯುವ ಶ್ರೇಷ್ಠ ಸಾಧನ. ಅಂತೆಯೇ ಮಾನವನ ಮನಸ್ಸಿನ ಮೇಲೆ ಬೀರುವ ಉತ್ತಮ ಪರಿಣಾಮವು ಅಸಂಖ್ಯಾತ ಆರೋಗ್ಯ ಪ್ರಯೋಜನಗಳನ್ನು ಪಡೆದು ಖುಷಿಯಿಂದ ಜೀವನವನ್ನು ನಡೆಸಬಹುದು.

ಅದಕ್ಕಾಗಿಯೇ ಕೇವಲ ದೈಹಿಕ ವ್ಯಾಯಾಮದ ಅಭ್ಯಾಸಕ್ಕಿಂತ ಹೆಚ್ಚಾಗಿ, ಯೋಗವು ಅನಂತ ಸಾರ್ವತ್ರಿಕ ಪ್ರಜ್ಞೆ ಅಥವಾ ಚೈತನ್ಯದೊಂದಿಗೆ ವೈಯಕ್ತಿಕ ಅಥವಾ ಸಾಮೂಹಿಕ ಪ್ರಜ್ಞೆಯ ಒಟ್ಟುಗೂಡುವಿಕೆಯಾಗಿದೆ. ಯೋಗವು ಮನಸ್ಸಿನ ಸ್ವಭಾವದ ವಿಚಾರಣೆಯ ವಿಧಾನವಾಗಿದೆ. ಇದು ಅಭ್ಯಾಸ ಮತ್ತು ನೇರ ಅನುಭವವನ್ನು ಒತ್ತಿ ಹೇಳುತ್ತದೆ. ಯೋಗವು ದೇಹ, ಮನಸ್ಸು ಮತ್ತು ಚೇತನದ ಬೆಳವಣಿಗೆಯನ್ನು ಸಮನ್ವಯಗೊಳಿಸುವ ವ್ಯವಸ್ಥೆಯನ್ನು ಆಧರಿಸಿದ ಪ್ರಾಚೀನ ಕಲೆಯಾಗಿದೆ. ಯೋಗವು ಉನ್ನತ ಮಟ್ಟದ ವ್ಯಕ್ತಿತ್ವದ ವಿಕಸನವನ್ನು ಸೂಚಿಸುತ್ತದೆ. ಇದು ಯೋಗಸಾಹಿತ್ಯದಲ್ಲಿ ಉಲ್ಲೇಖಿಸಲಾದ ವಿವಿಧ ಅಭ್ಯಾಸಗಳು ಮತ್ತು ತಂತ್ರಗಳನ್ನು ಒಳಗೊಂಡಿದೆ.

ಯೋಗವು ದೇಹ ಮತ್ತು ಮನಸ್ಸು ಹೆಚ್ಚು ಸ್ಥಿರವಾಗಿರಲು ಸಹಾಯ ಮಾಡುತ್ತದೆ. ಇದು ದೇಹದ ಕೀಲುಗಳು, ಅಸ್ಥಿರಜ್ಜುಗಳು ಮತ್ತು ಸ್ನಾಯುರಜ್ಜುಗಳನ್ನು

ನಯಗೊಳಿಸುತ್ತದೆ. ವೈದ್ಯಕೀಯ ಅಧ್ಯಯನಗಳ ಪ್ರಕಾರ ಎಲ್ಲಾ ಆಂತರಿಕ ಅಂಗಗಳು ಮತ್ತು ಗ್ರಂಥಿಗಳನ್ನು ಮಸಾಜ್ ಮಾಡುವ ದೈಹಿಕ ಚಟುವಟಿಕೆಯ ಏಕೈಕ ರೂಪವೆಂದರೆ ಯೋಗ. ಇದರ ಪರಿಣಾಮವಾಗಿ ಅನೇಕ ರೋಗಗಳು ಕಡಿಮೆಯಾಗುತ್ತವೆ. ಪ್ರತಿ ದಿನ ಯೋಗವನ್ನು ಅಭ್ಯಾಸ ಮಾಡುವ ಯಾರಾದರೂ ತಮ್ಮ ಜೀವನಶೈಲಿಯಲ್ಲಿ ಶಾಶ್ವತ ಸುಧಾರಣೆಯನ್ನು ಖಂಡಿತವಾಗಿಯೂ ಪಡೆಯುತ್ತಾರೆ.

ಯೋಗವು ಮನಸ್ಸನ್ನು ಸದಾ ಶಾಂತಿಯುತವಾಗಿ ಏಕಾಗ್ರತೆಯಲ್ಲಿ ಇಡುತ್ತದೆ ಮತ್ತು ಜೀವನಕ್ಕೆ ಚೈತನ್ಯವನ್ನು ಒದಗಿಸುತ್ತದೆ. ಹಾಗೆಯೇ ಒತ್ತಡ ಮತ್ತು ಆತಂಕವನ್ನು ನಿಭಾಯಿಸಲು ಸದಾ ಸಹಾಯ ಮಾಡುತ್ತದೆ. ಉಸಿರಾಟ ಶಕ್ತಿ ಸುಧಾರಿಸುತ್ತದೆ. ಸ್ನಾಯುಗಳ ಶಕ್ತಿ ಮತ್ತು ದೇಹದ ಟೋನ್‌ಅನ್ನು ಹೆಚ್ಚಿಸಲು ಸಹಕಾರಿಯಾಗಿದೆ.

**ಯೋಗದ ನಿಯಮಗಳು :** ಯೋಗ ಮಾಡಲು ಪ್ರಾರಂಭಿಸುವಾಗ ಕಷ್ಟಕರವಾದ ಆಸನಗಳು ಮತ್ತು ವ್ಯಾಯಾಮಗಳಿಂದ ಪ್ರಾರಂಭಿಸಬೇಡಿ. ಯೋಗವನ್ನು ಬೆಳಗ್ಗೆ ಸೂರ್ಯೋದಯದ ನಂತರ ಮತ್ತು ಸೂರ್ಯಾಸ್ತದ ಮೊದಲು ಮಾಡಬೇಕು. ಆಹಾರ ಸೇವಿಸಿದ ನಂತರ ಯೋಗವನ್ನು ಎಂದೆಂದಿಗೂ ಮಾಡಬಾರದು. ಯೋಗವನ್ನು ಖಾಲಿ ಹೊಟ್ಟೆಯಲ್ಲಿ ಮಾಡಬೇಕು.

ಯೋಗ ಮಾಡುವಾಗ ಸರಿಯಾಗಿ ಉಸಿರನ್ನು ಬಿಡಬೇಕೋ ಅಥವಾ ಉಸಿರಾಡಬೇಕೋ ಎಂದು ತಿಳಿದಿರಬೇಕು. ಯೋಗ ಮಾಡುವ ಸುಮಾರು 2 ರಿಂದ 3 ಗಂಟೆಗಳ ಮೊದಲು ಏನನ್ನೂ ತಿನ್ನಬಾರದು. ಯೋಗ ಮಾಡಿದ ಸುಮಾರು ಅರ್ಧ ಗಂಟೆಯ ನಂತರವೇ ಏನನ್ನಾದರೂ ತಿನ್ನಬೇಕು. ಆರಂಭಿಕ ದಿನಗಳಲ್ಲಿ ಯೋಗ ಮಾಡುವಾಗ ದೇಹದ ಭಾಗಗಳಿಗೆ ಬಲವಂತವಾಗಿ ಶ್ರಮವನ್ನು ಹೇರಬಾರದು. ಶಿಸ್ತುಬದ್ಧವಾಗಿ ಯೋಗ ಮಾಡಬೇಕು. ಯೋಗದ ಅಭ್ಯಾಸವನ್ನು ತಾಳ್ಮೆಯಿಂದ ಮಾಡಬೇಕು ಮತ್ತು ದಿಢೀರ್ ಫಲಿತಾಂಶಗಳನ್ನು ಬಯಸಬಾರದು. ಮೊಟ್ಟಮೊದಲು ಯೋಗ ಪ್ರಾರಂಭಿಸುವಾಗ ಯೋಗ ತಜ್ಞರಿಂದ ಮಾರ್ಗದರ್ಶನ, ಉಪಯುಕ್ತ ಮಾಹಿತಿಗಳನ್ನು ಪಡೆದುಕೊಳ್ಳುವುದು ಅತ್ಯಂತ ಸೂಕ್ತ ಮತ್ತು ಸಮರ್ಪಕ.

**ಯೋಗದ ಉಪಯೋಗಗಳು :** ಮೊದಲನೆಯದಾಗಿ ಮಾನವನ ಚಂಚಲತೆಯನ್ನು ಕಡಿಮೆಗೊಳಿಸುತ್ತದೆ. ಏಕಾಗ್ರತೆ ಹಾಗೂ ಶಾಂತಿಯನ್ನು ತರುತ್ತದೆ. ಸ್ನಾಯುಗಳ ನಮ್ಯತೆಯನ್ನು ಸುಧಾರಿಸಿ ದೇಹದ ಭಂಗಿ ಮತ್ತು ಜೋಡಣೆಯನ್ನು ಸರಿಗೊಳಿಸುತ್ತದೆ. ಉತ್ತಮ ಜೀರ್ಣಾಂಗ ವ್ಯವಸ್ಥೆಯನ್ನು ಒದಗಿಸಿ, ಆಂತರಿಕ ಅಂಗಗಳನ್ನು ಬಲಪಡಿಸುತ್ತದೆ. ಅಸ್ತಮಾಗೆ ಒಳ್ಳೆಯ ಚಿಕಿತ್ಸೆ ನೀಡುತ್ತದೆ ಹಾಗೂ ಮಧುಮೇಹಕ್ಕೆ ರಾಮಬಾಣ ವಾಗಿದೆ. ಜೊತೆಗೆ ಹೃದಯಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಸಹಾಯ ಮಾಡುತ್ತದೆ.

ಶಕ್ತಿ ಮತ್ತು ತ್ರಾಣವನ್ನು ಉತ್ತೇಜಿಸಿ, ಮನಸ್ಸು ಮತ್ತು ಚಿಂತನೆಗಳನ್ನು ನಿಯಂತ್ರಣಕ್ಕೆ ತಂದು ನೆಮ್ಮದಿ ನೀಡುತ್ತದೆ. ಆತಂಕ ಒತ್ತಡ ಮತ್ತು ಖಿನ್ನತೆಯನ್ನು ಹೋಗಲಾಡಿಸಿ ಮನಸ್ಸನ್ನು ಶಾಂತವಾಗಿರಿಸುತ್ತದೆ. ಒತ್ತಡವನ್ನು ಕಡಿಮೆ ಮಾಡಿ ರಕ್ತಪರಿಚಲನೆ ಮತ್ತು ಸ್ನಾಯುಗಳ ವಿಶ್ರಾಂತಿಗೆ ಸಹಾಯ ಒದಗಿಸುತ್ತದೆ ಮತ್ತು ತೂಕ ಇಳಿಕೆಗೆ ಸಹಕಾರಿಯಾಗಿದೆ. ರಕ್ತಪರಿಚಲನಾ ವ್ಯವಸ್ಥೆ, ಜೀರ್ಣಕಾರಿ ಪ್ರಕ್ರಿಯೆ ಮತ್ತು ನರ ಮತ್ತು ಅಂತಃಸ್ರಾವಕ ವ್ಯವಸ್ಥೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.

ಮನುಷ್ಯನ ಸೋಮಾರಿತನವನ್ನು ಹೋಗಲಾಡಿಸಿ, ಚೈತನ್ಯ ಮತ್ತು ಆರೋಗ್ಯಕರ ಬದುಕನ್ನು ನೀಡುತ್ತದೆ. ಯೋಗಾಭ್ಯಾಸದಿಂದ ಅಸ್ತಮಾ, ರಕ್ತದೊತ್ತಡ, ಮಧುಮೇಹ ಮತ್ತು ಕೀಲುನೋವಿನ ಅಪಾಯವನ್ನು ಸಾಕಷ್ಟು ಕಡಿಮೆಮಾಡುತ್ತದೆ. ಯೋಗ ಮಾಡುವುದರಿಂದ ಮಾನವನ ಮನಸ್ಸಿನಲ್ಲಿ ಋಣಾತ್ಮಕ ಆಲೋಚನೆಗಳೂ ಹುಟ್ಟುವುದಿಲ್ಲ. ಹಾಗೆಯೇ ಮನುಷ್ಯ ಧನಾತ್ಮಕವಾಗಿ ಮಾತ್ರ ಯೋಚಿಸುತ್ತಾನೆ. ಯೋಗದಲ್ಲಿ ತೊಡಗುವ ವ್ಯಕ್ತಿಯು ಯಾವಾಗಲೂ ಒತ್ತಡದಿಂದ ಮುಕ್ತನಾಗಿ ಸಂತೋಷವಾಗಿರುತ್ತಾನೆ. ಅಲ್ಲದೆ, ಯೋಗವು ಮನುಷ್ಯನ ಅನೇಕ ರೋಗಗಳನ್ನು ವಾಸಿ ಮಾಡುವುದಲ್ಲದೆ ಅವನಲ್ಲಿ ಉತ್ತಮ ಚಿಂತನೆ ಮತ್ತು ಸಕಾರಾತ್ಮಕ ಶಕ್ತಿಯನ್ನು ಉಂಟುಮಾಡುತ್ತದೆ. ಹಾಗೆ ನೋಡಿದರೆ ಇಂದಿನ ಓಡಾಟದ ಬದುಕಿನಲ್ಲಿ ವಿಜ್ಞಾನದ ಪ್ರಗತಿಯಿಂದಾಗಿ ಮಾನವನ ಬದುಕು ಯಂತ್ರಗಳ ಮೇಲೆ ಅವಲಂಬಿತವಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿರುವುದು ಸವಾಲಿಗಿಂತ ಕಡಿಮೆಯಿಲ್ಲ ಎನ್ನುವುದಂತೂ ನಿಜ. ಅದಕ್ಕಾಗಿಯೇ ಯೋಗವು ಮನುಷ್ಯನನ್ನು ಅನೇಕ ರೋಗಗಳಿಂದ ಮುಕ್ತಗೊಳಿಸುವುದಲ್ಲದೆ ಅವನಲ್ಲಿ ಉತ್ತಮ ಚಿಂತನೆ ಮತ್ತು ಸಕಾರಾತ್ಮಕಶಕ್ತಿಯನ್ನು ಉಂಟುಮಾಡುತ್ತದೆ.

ಯೋಗವು ಮನಸ್ಸು ಮತ್ತು ದೇಹವನ್ನು ಶುದ್ಧೀಕರಿಸಲು ಮತ್ತು ಮಾನವರ ಮನಸ್ಸು ಮತ್ತು ಭಾವನೆಗಳ ಮೇಲೆ ನಿಯಂತ್ರಣವನ್ನು ಪಡೆಯಲು ಅತ್ಯಂತ ಉಪಯುಕ್ತವಾದ ಬಹುಶಿಸ್ತಿನ ಸಾಧನವಾಗಿದೆ. ಸ್ವಯಂ ಪರಿವರ್ತನೆ ಮತ್ತು ದೈಹಿಕ ಯೋಗಕ್ಷೇಮಕ್ಕೆ ಇದು ಅತ್ಯಂತ ಜನಪ್ರಿಯ ಸಾಧನವಾಗಿ, ಮನಸ್ಸು ಮತ್ತು ದೇಹದ ಸಮಗ್ರ ಆರೋಗ್ಯಕ್ಕೆ ಚೈತನ್ಯ ಶಕ್ತಿಯಾಗಿದೆ.

ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನವನ್ನು ಸ್ಥಾಪಿಸುವುದು ಯೋಗದ ಪ್ರಮುಖ ಗುರಿಯಾಗಿ ಕೆಲಸ ಮಾಡುತ್ತದೆ. ಹೀಗೆ ಈ ಎಲ್ಲಾ ರೀತಿಯ ಯೋಗದ ಉಪಯೋಗಗಳನ್ನು ಪಡೆದುಕೊಂಡು ಮಾನವ ಉಜ್ವಲ ಭವಿಷ್ಯವನ್ನು ನಿರ್ಮಿಸಬಹುದು.

**ಆತ್ಮತೃಪ್ತಿಯೋಗ:** ಮನುಷ್ಯ ಎಷ್ಟೆಲ್ಲ ಬೆಳೆದರೂ, ಎಷ್ಟೆಲ್ಲ ಸಾಧನೆ ಮಾಡಿದರೂ, ವಿಶೇಷವಾಗಿ ಆಧುನಿಕ ಯುಗದ ಈಗಿನ ಕಾಲದಲ್ಲಿಯೂ ಮನುಷ್ಯನು ವೈದ್ಯಕೀಯ

ವಿಜ್ಞಾನ ಕ್ಷೇತ್ರದಲ್ಲಿ ಅಪಾರ ಪ್ರಗತಿ ಸಾಧಿಸಿದ್ದರೂ ಮತ್ತು ಅನೇಕ ರೀತಿಯ ರೋಗಗಳನ್ನು ಗೆದ್ದಿದ್ದರೂ ಸಹ ಅದು ಅವನಿಗೆ ಸಾಕಷ್ಟು ಮಾನಸಿಕವಾಗಿ ಘಾಸಿಗೊಳಿಸಿ, ಅಶಾಂತಿಯಲ್ಲಿಟ್ಟಿದೆ ಎನ್ನುವುದಂತೂ ಸತ್ಯ. ಅದಕ್ಕಾಗಿಯೇ ಮಾನವರಿಗೆ ಆತ್ಮತೃಪ್ತಿ ಅನ್ನುವುದು ದೂರದ ಮಾತಾಗಿದೆ. ಈಗಲಾದರೂ ಆತ ತನ್ನಿಂದ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಹೋಗುವಂಥ ನಿಟ್ಟಿನಲ್ಲಿ ಚಿಂತನೆ ಮಾಡಬೇಕಾಗಿದೆ. ಅದಕ್ಕಾಗಿಯೇ ಪ್ರಸ್ತುತ ವಾತಾವರಣದಲ್ಲಿ, ಯೋಗವು ಮಾನವರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಹಾಗಾಗಿಯೇ ಆರೋಗ್ಯವಂತ ವ್ಯಕ್ತಿಯು ತನ್ನ ಜೀವನದಲ್ಲಿ ಬಹಳಷ್ಟು ಲಾಭವನ್ನು ಗಳಿಸಬಹುದು. ಆದರೆ ಆರೋಗ್ಯಕರಪೂರ್ಣ ಜೀವನವನ್ನು ನಡೆಸಲು ನಿಯಮಿತ ಯೋಗವು ತುಂಬಾ ಅಗತ್ಯವಾಗಿರುವುದರಿಂದ ಪ್ರತಿನಿತ್ಯವೂ ಯೋಗ ಅಭ್ಯಾಸ ಮಾಡುವುದು ಸೂಕ್ತವಾಗಿದೆ. ಇನ್ನು ದೊಡ್ಡ ನಗರಗಳಲ್ಲಿ ವಾಸಿಸುವ ಜನರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಬಿಪಿ, ಶುಗರ್, ಹಾರ್ಟ್ ಸಮಸ್ಯೆ, ಅಸ್ತಮಾ ಮುಂತಾದ ರೋಗಗಳಿಂದ ನರಳುತ್ತಿದ್ದಾರೆ. ಇದಕ್ಕೆಲ್ಲ ಉತ್ತಮ ಪರಿಹಾರ ಎಂದರೆ ಯೋಗ. ಈ ಯೋಗವು ದಿನನಿತ್ಯ ಸುಮಾರು 20 ರಿಂದ 30 ನಿಮಿಷಗಳ ಕಾಲ ಯೋಗವನ್ನು ಮಾಡುವ ಮೂಲಕ ನೂರಾರು ಸಮಸ್ಯೆಗಳನ್ನು ಬರದಂತೆ ನೋಡಿಕೊಳ್ಳಬಹುದು. ಈ ತನ್ಮೂಲಕ ಆತ್ಮತೃಪ್ತಿಯ ಜೀವನವನ್ನು ನಡೆಸಬಹುದಾಗಿದೆ.

ಆರೋಗ್ಯಯುತ ಜೀವನಕ್ಕೆ ಯೋಗ ರಾಮಬಾಣದಂತೆ ಕೆಲಸ ಮಾಡುತ್ತದೆ. ಅದಕ್ಕಾಗಿಯೇ 21ನೇ ಶತಮಾನದಲ್ಲಿ ಯೋಗಕ್ಕೆ ಬಹು ಬೇಡಿಕೆ ಇದೆ. ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ.

**ಕೊನೆಯ ಮಾತು :** ಯಂತ್ರಗಳ ಅತಿಯಾದ ಅವಲಂಬನೆಯಿಂದಾಗಿ ಇಂದು ಮಾನವ ದೇಹವು ಒತ್ತಡ, ಆಯಾಸವೂ ಸೇರಿದಂತೆ ರೋಗಗಳ ಗೂಡಾಗಿದೆ. ಮಾನವ ಇಂದು ಎಲ್ಲಾ ರೀತಿಯ ಸೌಕರ್ಯಗಳನ್ನು ಗಳಿಸಿ ದೈಹಿಕವಾಗಿ ಮತ್ತು ಮಾನಸಿಕವಾಗಿ ರೋಗಿಯಾಗಿದ್ದಾನೆ. ಇದನ್ನು ಹೊಡೆದೋಡಿಸಲು ಸೂಕ್ತವಾದಂತಹ ಚಿಕಿತ್ಸೆ ಎಂದರೆ ಅದುವೇ ಯೋಗ. ಯೋಗದಿಂದ ಮಾನವ ಇಂಥ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ತಿಲಾಂಜಲಿ ಹೇಳಿ ಭಯರಹಿತವಾದ ಜೀವನವನ್ನು ನಡೆಸಲು ಸಾಧ್ಯವಾಗಬಹುದು.

□

# ಗ್ರಂಥ ಪರಾಮರ್ಶೆ

---

**ಕೃತಿ : ''ಚಾಪ್ಲಿನ್''**

ಡಾ. ಕುಂವೀಯವರ ''ಚಾಪ್ಲಿನ್'' ಕೃತಿಯಲ್ಲಿ ಜಗತ್ತಿನ ಅತ್ಯಂತ ಶ್ರೇಷ್ಠ ಕಲಾವಿದರಲ್ಲೊಬ್ಬರಾದ ಚಾರ್ಲಿ ಚಾಪ್ಲಿನ್ನರ ಜೀವನಚರಿತ್ರೆಯನ್ನು ತುಂಬ ಸುಂದರವಾಗಿ ರಚಿಸಲಾಗಿದೆ. ಬಡತನವನ್ನೇ ಹಾಸಿ, ಹೊದ್ದು, ಜೀವನದಲ್ಲಿ ಅತ್ಯಂತ ಕಠಿಣತರವಾದ ಸಮಸ್ಯೆಗಳನ್ನೆದುರಿಸಿದ ಚಾಪ್ಲಿನ್ ಕೇವಲ ಅವರ ಕಲಾವಂತಿಕೆಯ ಬಲದಿಂದ ಇಡೀ ವಿಶ್ವವನ್ನು ಆಕರ್ಷಿಸಿದುದು ಅಚ್ಚರಿಯ ವಿಷಯ. ಬಹುಶಃ ಯುದ್ಧದ ಭೀಕರತೆಯನ್ನು, ಸರ್ವಾಧಿಕಾರದ ಐಲುಗಳನ್ನು ವಿದೂಷಕನ ಮುಖವಾಡವಿಟ್ಟುಕೊಂಡೇ ವಿಡಂಬನೆ ಮಾಡುತ್ತ ಜಗತ್ತನ್ನು ಚಿಂತನೆಗೆ ಹಚ್ಚಿದ ಮಹಾನ್ ಕಲಾವಿದ. 'ಸರ್' ಪ್ರಶಸ್ತಿಗೆ ಭಾಜನನಾಗಿದ್ದ ಈ ಅಭಿಜಾತ ಕಲಾವಿದ ಮೂಕಿ ಚಿತ್ರಗಳಿಂದ ತೊಡಗಿ ವಾಕ್ಚಿತ್ರದ ಯುಗದಲ್ಲಿಯೂ ಅವರ ಛಾಪು ಮೂಡಿಸಿದರು. ಹಾಸ್ಯದ ಮೂಲಕ ಗಂಭೀರ ಅಂಶಗಳನ್ನು ಪ್ರತಿಪಾದಿಸಿದ ಅವರ ದುರಂತ ಕೊನೆ ವಿಧಿಯ ವಿಕಟಾಟ್ಟಹಾಸವೇ ಸರಿ. ಅವರ ಕುರಿತಾದ ಅಂಶಗಳು ಈ ಕೃತಿಯಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಮೂಡಿಬಂದಿದೆ.

* * *

**ಕೃತಿ : ''ಲೋಲಿಂಬರಾಜಕೃತ ವೈದ್ಯಜೀವನ''**

ಡಾ. ಉಮಾಶಂಕರ್‌ರವರ "ಲೋಲಿಂಬರಾಜಕೃತ ವೈದ್ಯಜೀವನ" ಕ್ರಿ.ಶ. 16ನೆಯ ಶತಮಾನದಲ್ಲಿದ್ದ ಲೋಲಿಂಬರಾಜನೆಂಬ ಕವಿಯು ಎಲ್ಲ ರೀತಿಯ ರೋಗಗಳಿಗೆ ನೀಡಬೇಕಾದ ಚಿಕಿತ್ಸೆಗಳನ್ನು ಐದು ಅಧ್ಯಾಯಗಳಲ್ಲಿ ಸುಮಾರು 220 ಶ್ಲೋಕಗಳಲ್ಲಿ ವಿವರಿಸಿರುವ ಈ ಮೂಲ ಗ್ರಂಥ ಸಂಸ್ಕೃತದಲ್ಲಿದೆ. ಕವಿಯು ಒಬ್ಬ ಮುಸಲ್ಮಾನ ರಾಜನ ಮಗಳನ್ನು ವಿವಾಹವಾದ ಐತಿಹ್ಯ, ಶಾಸ್ತ್ರಗ್ರಂಥವೊಂದು ಶೃಂಗಾರರಸ ಸಮ್ಮಿಶ್ರವಾದ ಕಾವ್ಯಗ್ರಂಥವಾಗಿ ರೂಪುಗೊಂಡಿರುವ ಐತಿಹ್ಯಗಳು ಕುತೂಹಲಕರ. ಸಂಸ್ಕೃತ ಭಾಷೆಯಲ್ಲಿರುವ ಇಂಥ ಜ್ಞಾನಪ್ರಸಾರಕ ಗ್ರಂಥಗಳು ಪ್ರಾದೇಶಿಕ ಭಾಷೆಗೆ ಅನುವಾದವಾಗಬೇಕಾದ ಅಗತ್ಯವನ್ನು ಮನಗಂಡು ಅದರಲ್ಲಿ ಕೃತಕೃತ್ಯರಾಗಿರುವುದು ಅನನ್ಯ ಸಾಧನೆ. ಅಪಾರ ಪರಿಶ್ರಮ, ವಿದ್ವತ್ತುಗಳಿಲ್ಲದೆ, ಇಂಥ ಉತ್ಕೃಷ್ಟ ಕೆಲಸ ಸಾಧ್ಯವಾಗುವುದಿಲ್ಲ. ಈ ಸಾರಸ್ವತ ಸಾಹಸ ಅಭಿನಂದನೀಯವಾದುದು.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಭೀಮಣ್ಣ ಖಂಡ್ರೆಯವರದು ಹೋರಾಟದ ಬದುಕು

ಭೀಮಣ್ಣ ಖಂಡ್ರೆಯವರದು ಹೋರಾಟದ ಬದುಕು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 2ರಂದು ಭಾಲ್ಕಿಯಲ್ಲಿ ಡಾ. ಭೀಮಣ್ಣ ಖಂಡ್ರೆಯವರ ಜನ್ಮ ಶತಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕರ್ನಾಟಕದ ಏಕೀಕರಣ, ಸಮಾಜದ ಸಂಘಟನೆ ಮತ್ತು ಶ್ರೇಯಸ್ಸಿಗಾಗಿ ದುಡಿದವರು. ಗ್ರಾಮಾಂತರ ಪ್ರದೇಶಗಳಲ್ಲಿ ಸೇವಾ ಕಾರ್ಯಗಳನ್ನು ಕೈಗೊಂಡವರು. ಅವರ ತತ್ತ್ವಾದರ್ಶಗಳು, ನಂಬಿಕೆಗಳಿಗೆ ಎಂದೂ ವಿರುದ್ಧವಾಗಿ ನಡೆದವರಲ್ಲ. ರಾಜಕೀಯದಲ್ಲಿ ಶುದ್ಧಹಸ್ತರಾಗಿ ಜನಮನ್ನಣೆ ಪಡೆದವರು. ವೀರಶೈವ – ಲಿಂಗಾಯತ ಮಹಾಸಭೆಯನ್ನು ಸಮರ್ಥವಾಗಿ ಮುನ್ನಡೆಸಿದವರು ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಸಮಾಜ ಸೇವೆ ಮಾಡಲು ಖಂಡ್ರೆಯವರ ಕುಟುಂಬ ಪ್ರೇರಣದಾಯಕವಾಗಿದೆ. ಗಾಂಧೀಜಿಯವರ ಹೋರಾಟಕ್ಕೆ ಓಗೊಟ್ಟು ಖಂಡ್ರೆಯವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅವರ ಹೋರಾಟದ ಹೆಜ್ಜೆಗಳು ಶಾಶ್ವತವಾದವುಗಳು. ಸಾರ್ಥಕವಾದ ಬದುಕನ್ನು ಸಾಗಿಸಿದ್ದಾರೆ. ಬಸವಣ್ಣನವರ ಅಪ್ಪಟ ಅನುಯಾಯಿಗಳಾಗಿರುವ ಅವರು ವಚನ ಸಾಹಿತ್ಯವನ್ನು ಇಡೀ ರಾಜ್ಯಕ್ಕೆ ಪಸರಿಸಲು ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಎಐಸಿಸಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಖಂಡ್ರೆಯವರ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸೇವೆ ಅಮೋಘ. ವೀರಶೈವ–ಲಿಂಗಾಯತ ಸಂಘಟನೆಗೆ ಹೊಸ ಶಕ್ತಿ ತುಂಬಿದ್ದಾರೆ. ಅವರು ಅಂದುಕೊಂಡಿದ್ದನ್ನು ಸಾಧಿಸುವ ಛಲಗಾರ. ವೀರಶೈವ–ಲಿಂಗಾಯತ ಮಹಾಸಭಾವನ್ನು ಸಮರ್ಥವಾಗಿ ಮುನ್ನಡೆಸಿದ ಯಶಸ್ಸು ಖಂಡ್ರೆಯವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಶ್ರೀ ಶಾಮನೂರು ಶಿವಶಂಕರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಡಾ. ಗೊ.ರು. ಚನ್ನಬಸಪ್ಪನವರು ಅಭಿನಂದನಾ ನುಡಿಗಳನ್ನಾಡಿದರು. ಶ್ರೀ ಈಶ್ವರ ಬಿ. ಖಂಡ್ರೆಯವರು ಸ್ವಾಗತಿಸಿದರು. ಶ್ರೀಶೈಲ, ಮುಂಡರಗಿ, ಸಿರಿಗೆರೆ, ಶಿರಹಟ್ಟಿ ಜಗದ್ಗುರುಗಳವರು, ಸಿದ್ಧಗಂಗಾ, ಭಾಲ್ಕಿ, ಇಳಕಲ್, ಮಾದಾರ ಚನ್ನಯ್ಯ ಗುರುಪೀಠ, ಬಾತಾಂಬ್ರ, ಬೈಲೂರು, ಹಾರಕೂಡ,

ಚಿದಂಬರಾಶ್ರಮ, ಕೂಡಲಸಂಗಮ, ಹರಿಹರ, ಗುಳೇದಗುಡ್ಡ ಮಠಗಳ ಶ್ರೀಗಳು, ಶ್ರೀ ಬಂತೆ ವರಜ್ಯೋತಿ, ಡಾ. ಅಕ್ಕ ಅನ್ನಪೂರ್ಣ ತಾಯಿ, ಡಾ. ಎನ್. ತಿಪ್ಪಣ್ಣ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯ್ಲಿ, ಶ್ರೀ ಸುಶೀಲ್ ಕುಮಾರ್ ಶಿಂಧೆ, ಶ್ರೀ ಜಗದೀಶ ಶೆಟ್ಟರ್, ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್, ಸಚಿವರುಗಳಾದ ಶ್ರೀ ಹೆಚ್.ಕೆ. ಪಾಟೀಲ್, ಶ್ರೀ ಎಂ.ಬಿ. ಪಾಟೀಲ್, ಶ್ರೀ ಕೆ.ಜೆ. ಜಾರ್ಜ್, ಶ್ರೀ ಶರಣಬಸಪ್ಪ ದರ್ಶನಾಪುರ, ಶ್ರೀ ಶಿವಾನಂದ ಪಾಟೀಲ್, ಡಾ. ಶರಣಪ್ರಕಾಶ್ ಪಾಟೀಲ್, ಶ್ರೀ ರಹೀಂ ಖಾನ್‌ರವರುಗಳು ಉಪಸ್ಥಿತರಿದ್ದರು.

**ದಾಂಪತ್ಯದಲ್ಲಿ ಅನ್ಯೋನ್ಯತೆ ಬಹಳ ಮುಖ್ಯ**

ದಾಂಪತ್ಯದಲ್ಲಿ ಅನ್ಯೋನ್ಯತೆ ಬಹಳ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 5ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀಮತಿ ಮಲ್ಲಿಕಾ ಮಳವಳ್ಳಿ ಮತ್ತು ಶ್ರೀ ಬಿ.ಎಂ. ಮಹದೇವಪ್ಪರವರ ಷಷ್ಟ್ಯಬ್ದಿ ಸಮಾರಂಭ ಹಾಗೂ 'ಕಾತ್ಯಾಯಿನಿ' ಕಾದಂಬರಿ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ದಾಂಪತ್ಯ ಎಲ್ಲಿ ಅನ್ಯೋನ್ಯವಾಗಿರುತ್ತದೆಯೋ ಅದು ಭಗವಂತನಿಗೆ ಪ್ರಿಯವಾಗಿರುತ್ತದೆ. ದಾಂಪತ್ಯದಲ್ಲಿ ಒಬ್ಬರು ಮೌನವಾಗಿದ್ದರೆ ಆ ಜೀವನ ಸುಗಮವಾಗಿ ಸಾಗುತ್ತದೆ ಎಂದು ಹೇಳಿದರು.

ಶ್ರೀ ಎಂ.ಎಸ್. ಶಿವಪ್ರಕಾಶ್‌ರವರು ಮಾತನಾಡಿ, ಶ್ರೀ ಬಿ.ಎಂ. ಮಹಾದೇವಪ್ಪನವರು ಸಮಾಜದ ಏಳಿಗೆಗಾಗಿ ಹಗಲಿರುಳು ದುಡಿದಿದ್ದಾರೆ. ಶ್ರೀಮತಿ ಮಲ್ಲಿಕಾ ಮಳವಳ್ಳಿಯವರು ಬರೆದ ಕಾದಂಬರಿಗಳು ಸಾಮಾಜಿಕ ಪಿಡುಗುಗಳಾದ ಮೂಢನಂಬಿಕೆಗಳು, ಬಾಲ್ಯವಿವಾಹ, ವರದಕ್ಷಿಣೆ ಮುಂತಾದವುಗಳ ಬಗ್ಗೆ ಜನಜಾಗೃತಿ ಮೂಡಿಸುವಂತಿವೆ ಎಂದು ತಿಳಿಸಿದರು.

ಕೃತಿ ಕುರಿತು ಮಾತನಾಡಿದ ಕವಿಗಳಾದ ಡಾ. ಪ್ರದೀಪ್‌ಕುಮಾರ್ ಹೆಬ್ರಿರವರು, 'ಕಾತ್ಯಾಯಿನಿ' ಕಾದಂಬರಿಯು ಸ್ತ್ರೀಶಕ್ತಿ ಚರಿತ್ರೆಯಾಗಿದೆ. ಬದುಕಿನ ನಾನಾ ಆಯಾಮಗಳು ಕಣ್ಣಿಗೆ ಕಟ್ಟುವಂತೆ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಗ್ರಾಮೀಣ ಪ್ರದೇಶದ ಧರ್ಮ, ಭಾಷೆಯ ಸೊಗಡನ್ನು ಎತ್ತಿ ಹಿಡಿದಿದ್ದಾರೆ. ಕಾದಂಬರಿಯ ನಾಯಕಿಯಾದ ಕಾತ್ಯಾಯಿನಿಯು ಹೆಣ್ಣುಮಕ್ಕಳ ಏಳಿಗೆಗಾಗಿ ಶ್ರಮಿಸುತ್ತಾಳೆ. ಹೆಣ್ಣುಮಕ್ಕಳು ವಿದ್ಯಾವಂತರಾಗುವುದರ ಜೊತೆಗೆ ಪ್ರಜ್ಞಾವಂತರಾಗಿರಬೇಕು ಎಂಬುದು ಈ ಕಾದಂಬರಿಯ ತಿರುಳು ಎಂದು ವಿಶ್ಲೇಷಿಸಿದರು.

ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್.ಎಸ್. ಮುದ್ದೇಗೌಡರವರು 'ಕಾತ್ಯಾಯಿನಿ' ಕಾದಂಬರಿಯಲ್ಲಿ ಹಳ್ಳಿಯ ಬದುಕಿನ ಹೆಣ್ಣುಮಗಳು ತನ್ನ ಆಸ್ತಿಯನ್ನು ಮಾರಿ, ಆಸ್ಪತ್ರೆಯನ್ನು ಕಟ್ಟಿಸಿ ಜನರ ಆರೋಗ್ಯ ಕಾಪಾಡಲು ಮುಂದಾಗುವುದು ಗಮನಾರ್ಹ ಸಂಗತಿ ಎಂದರು.

ಶ್ರೀ ಶಿವರುದ್ರಪ್ಪನವರು, ಶ್ರೀ ಮ.ಗು. ಸದಾನಂದಯ್ಯನವರು, ಶ್ರೀ ಶಿವಕುಮಾರ್‌ರವರು ಮಾತನಾಡಿದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪ್ರೊ.

ಬಿ.ಎಂ. ಸದಾಶಿವಮೂರ್ತಿ ಸ್ವಾಗತಿಸಿದರು. ಕು. ಅದ್ರಿತ್ ವಂದಿಸಿದರು. ಶ್ರೀ ಶ್ರೀಕಂಠಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ದೇಶಸೇವಾ ಮನೋಭಾವವನ್ನು ಮೂಡಿಸುವ ಸ್ಕೌಟ್ಸ್ ಗೈಡ್ಸ್**

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ದೇಶಸೇವೆ ಮಾಡುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 5ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ 6 ದಿನಗಳಿಂದ ಜರುಗಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೂಲ ತರಬೇತಿ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ವಿದ್ಯಾರ್ಥಿಗಳಿಗೆ ನಾಲ್ಕು ಗೋಡೆಯ ಮಧ್ಯೆ ಶಿಕ್ಷಣ ನೀಡುವುದು ಅಷ್ಟೇ ಅಲ್ಲ, ಅವರಿಗೆ ಹೊರ ಜಗತ್ತಿನ ಜ್ಞಾನವನ್ನು ತಿಳಿಸುವುದು ಮುಖ್ಯ. ವಿದ್ಯೆ ಕಲಿಯುವವರು ನಿದ್ರೆ ಮತ್ತು ಸುಖಕ್ಕೆ ಹಾತೊರೆಯಬಾರದು. ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗಗಳನ್ನು ತೆರೆಯುವ ಮೂಲಕ ಮಕ್ಕಳಲ್ಲಿ ಸೇವಾ ಮನೋಭಾವನೆಯನ್ನು ಬೆಳೆಸಲಾಗುವುದು. ಸೇವೆಯಲ್ಲಿ ತೊಡಗಿಸಿಕೊಂಡಾಗ ಸಿಗುವ ತೃಪ್ತಿ ಬೇರೆ ಯಾವುದೇ ಉದ್ಯೋಗ ಮಾಡಿದರೂ ಸಿಗುವುದಿಲ್ಲ ಎಂದು ಹೇಳಿದರು.

ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಶಿಕ್ಷಕರಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ತರಬೇತಿ ನೀಡಲು ಅವಕಾಶ ಮಾಡಿಕೊಟ್ಟಿರುವುದು ನಿಜಕ್ಕೂ ಅಭಿನಂದನೀಯ. ಈಗಾಗಲೇ ರಾಜ್ಯಾದ್ಯಂತ ಏಳು ಸಾವಿರ ಶಿಕ್ಷಕರಿಗೆ ತರಬೇತಿ ನೀಡಿದ್ದು ಪ್ರತಿವರ್ಷ ರಾಜ್ಯದಲ್ಲಿ ಹತ್ತು ಸಾವಿರ ಶಿಕ್ಷಕರಿಗೆ ತರಬೇತಿ ನೀಡುವ ಗುರಿಯನ್ನು ಹೊಂದಿದೆ. ಆಸಕ್ತ ಅಂಗನವಾಡಿ ಕಾರ್ಯಕರ್ತರಿಗೂ ಕೂಡ 'ಬನ್ನಿ ಆಂಟೀಸ್' ತರಬೇತಿ ನೀಡಲಾಗುತ್ತಿದೆ. ಇತ್ತೀಚೆಗೆ ಹುತಾತ್ಮರಾದ ಭಾರತೀಯ ಸೇನೆಯ ಕ್ಯಾಪ್ಟನ್ ಪ್ರಾಂಜಲ್ ಸ್ಕೌಟ್ಸ್ ಗೈಡ್ಸ್‌ನ ತರಬೇತಿ ಪಡೆದಿದ್ದು ದೇಶ ಸೇವೆ ಮಾಡಲು ಉತ್ಸುಕನಾಗಿ ಸೇನೆಗೆ ಸೇರಿದ್ದರು ಎಂಬುದು ಹೆಮ್ಮೆಯ ಸಂಗತಿ. ಅವರಲ್ಲಿ ರಾಷ್ಟ್ರಪ್ರೇಮ ಬೆಳೆಯಲು ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕಾರಣ ಎಂದು ತಿಳಿಸಿದರು.

ಮೈಸೂರು ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥ್‌ರವರು ದೇಶ, ಧರ್ಮ, ಸೇವೆ ಈ ಮೂರು ಅತ್ಯಂತ ಪ್ರಮುಖ ವಿಷಯಗಳು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಪಡೆದ ಶಿಕ್ಷಕರು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಮೂಲಕ ರಾಷ್ಟ್ರಪ್ರೇಮ, ಸೇವಾ ಮನೋಭಾವನೆಯನ್ನು ಬೆಳೆಸುವುದು ಅಗತ್ಯವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿಗಳಾದ ಶ್ರೀ ಅಬ್ದುಲ್ ಜಮೀಲ್, ಖಜಾಂಚಿಗಳಾದ ಡಾ. ಕೆ.ಬಿ. ಗುರುಮೂರ್ತಿ, ಸ್ಕೌಟ್ಸ್ ಜಿಲ್ಲಾ ಆಯುಕ್ತರಾದ ಶ್ರೀ ಟಿ.ಎಸ್. ರವಿಶಂಕರ್

ಹಾಗೂ ಗೈಡ್ಸ್ ಜಿಲ್ಲಾ ಆಯುಕ್ತರಾದ ಶ್ರೀಮತಿ ಪುಷ್ಪವಲ್ಲಿ ಹಾಗೂ ಸಂಸ್ಥೆಯ ಮುಖ್ಯಸ್ಥರುಗಳು ಉಪಸ್ಥಿತರಿದ್ದರು. ಶಿಬಿರಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಅಬ್ದುಲ್ ಜಮೀಲ್ ಸ್ವಾಗತಿಸಿದರು. ಶ್ರೀ ಹೆಚ್.ಎಸ್. ಗಂಗಾಧರಸ್ವಾಮಿ ವಂದಿಸಿದರು. ಶ್ರೀ ಅಂದಯ್ಯ ಶಿರೂರಮಠ ಕಾರ್ಯಕ್ರಮ ನಿರೂಪಿಸಿದರು.

**ಮನುಷ್ಯನಿಗೆ ಆರೋಗ್ಯವೇ ಅಮೂಲ್ಯ**

ಮನುಷ್ಯನಿಗೆ ಆರೋಗ್ಯವೇ ಅಮೂಲ್ಯವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 9ರಂದು ಗುಂಡ್ಲುಪೇಟೆಯಲ್ಲಿ ಮೈಸೂರು ಜೆಎಸ್ಎಸ್ ಆಸ್ಪತ್ರೆ ಹಾಗೂ ಗುಂಡ್ಲುಪೇಟೆ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ 2022ರ ಡಿಸೆಂಬರ್‌ನಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕಳೆದ ಡಿಸೆಂಬರ್‌ನಿಂದ ಪ್ರತಿ ತಿಂಗಳ ಎರಡನೆಯ ಭಾನುವಾರದಂದು ಗುಂಡ್ಲುಪೇಟೆ ಮತ್ತು ನಾಲ್ಕನೆಯ ಭಾನುವಾರದಂದು ಸರಗೂರಿನಲ್ಲಿ ನಡೆದ ಉಚಿತ ವೈದ್ಯಕೀಯ ತಪಾಸಣಾ ಶಿಬಿರಗಳು ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ ಜನತೆಯ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಸುಮಾರು ಹನ್ನೊಂದು ಸಾವಿರ ಜನ ಈ ಶಿಬಿರದ ಪ್ರಯೋಜನ ಪಡೆದಿದ್ದಾರೆ. ಶಿಬಿರಗಳಲ್ಲಿ ಗಂಭೀರ ಖಾಯಿಲೆ ಇರುವವರಿಗೆ ತಿಳಿವಳಿಕೆ ನೀಡಲಾಗಿದ್ದು, ಅವರು ಹೆಚ್ಚಿನ ಚಿಕಿತ್ಸೆಯನ್ನು ಮೈಸೂರಿನ ಜೆಎಸ್ಎಸ್ ಆಸ್ಪತ್ರೆಯಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಕಾಯಿಲೆಗಳು ಬಂದಾಗ ಚಿಕಿತ್ಸೆ ಪಡೆಯದಿದ್ದಲ್ಲಿ ರೋಗಗಳು ಉಲ್ಬಣಗೊಳ್ಳುತ್ತವೆ. ಹಾಗಾಗದಂತೆ ಎಚ್ಚರ ವಹಿಸುವುದು ಅತ್ಯಗತ್ಯ. ನಾವು ಸೇವಿಸುತ್ತಿರುವ ಆಹಾರಗಳಲ್ಲಿ ಆರೋಗ್ಯಕ್ಕೆ ಹಾನಿಕರವಾದ ಅಂಶಗಳು ಸೇರ್ಪಡೆಯಾಗುತ್ತಿವೆ, ಈ ಬಗ್ಗೆ ಗಮನಹರಿಸುವ ಅಗತ್ಯವಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್‌ರವರು ಇಂದು ಆರೋಗ್ಯ ರಕ್ಷಣೆ ಎಲ್ಲರ ಜವಾಬ್ದಾರಿ. ಹೊಸ ಹೊಸ ಖಾಯಿಲೆಗಳು ದಿನೇ ದಿನೇ ಹೆಚ್ಚುತ್ತಿರುವುದನ್ನು ಸರಕಾರವೂ ಸಹ ಗಂಭೀರವಾಗಿ ಪರಿಗಣಿಸುತ್ತಿದೆ. ಹಾಗಾಗಿ ತಪಾಸಣೆಗೆ ಹಿಂಜರಿಯುವ ಗ್ರಾಮೀಣ ಪ್ರದೇಶದ ಜನತೆಗೆ ಉಚಿತವಾಗಿ ತಪಾಸಣೆ ಮಾಡಿ ಔಷಧಿಗಳನ್ನು ಕೊಡುವುದರ ಜೊತೆಗೆ, ಹೆಚ್ಚುವರಿ ಚಿಕಿತ್ಸೆಯ ವೆಚ್ಚದಲ್ಲಿ ವಿನಾಯಿತಿ ನೀಡುವಂತಹ ಮಹತ್ವದ ಯೋಜನೆಯನ್ನು ಸುತ್ತೂರು ಶ್ರೀಮಠ ಮಾಡಿರುವುದು ಜಗದ್ಗುರುಗಳವರ ಸಾಮಾಜಿಕ ಕಾಳಜಿಗೆ ನಿದರ್ಶನವಾಗಿದೆ ಎಂದರು.

ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್‌ರವರು ಸುತ್ತೂರು ಶ್ರೀಮಠವು ಸಮಾಜಮುಖಿಯಾಗಿದೆ. ಜನರ ಭಾವನೆಗಳಿಗೆ, ಸಮಸ್ಯೆ, ಸವಾಲುಗಳಿಗೆ ನಿರಂತರವಾಗಿ ಸ್ಪಂದಿಸುತ್ತಿದೆ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಆರೋಗ್ಯ, ಕಲೆಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ರೀಮಠದ ಕಾರ್ಯಕ್ಷೇತ್ರವನ್ನು ವಿಸ್ತರಿಸಿದೆ, ಸ್ವಾತಂತ್ರ್ಯಪೂರ್ವದ

ಮತ್ತು ಸ್ವಾತಂತ್ರ್ಯಾನಂತರದ ದಿನಮಾನಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಶಾಲಾ ಕಾಲೇಜುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿದ ಪರಮಪೂಜ್ಯ ಡಾ. ರಾಜೇಂದ್ರ ಶ್ರೀಗಳವರ ಕರುಣೆ ಅಪಾರವಾದದ್ದು ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲ್ಲೂಕು ಅಧ್ಯಕ್ಷರಾದ ಶ್ರೀ ನಂಜಪ್ಪನವರು ಮಾತನಾಡಿದರು. ವಿದ್ಯಾರ್ಥಿಗಳಾದ ಕು. ಎಂ. ರಶ್ಮಿ ಮತ್ತು ವೃಂದದವರು ಪ್ರಾರ್ಥನೆ ಸಲ್ಲಿಸಿದರು, ಪ್ರಾಚಾರ್ಯರಾದ ಡಾ. ಪಿ. ಮಹದೇವಮ್ಮ ಸ್ವಾಗತಿಸಿದರು. ಜೆಎಸ್‌ಎಸ್ ಆಸ್ಪತ್ರೆಯ ಪ್ರಭಾರ ನಿರ್ದೇಶಕರು ಹಾಗೂ ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಪಿ. ಮಧು ಶಿಬಿರದ ವರದಿಯನ್ನು ಮಂಡಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಚ್.ಪಿ. ಬಸವರಾಜಪ್ಪ ವಂದಿಸಿದರು. ಉಪನ್ಯಾಸಕರಾದ ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಪ್ರತಿ ತಿಂಗಳ ಶಿಬಿರದ ದಿನಗಳಂದು ಪ್ರಸಾದ ವ್ಯವಸ್ಥೆ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ತಾಲ್ಲೂಕಿನ ಗಣ್ಯರು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಶ್ರೀಮಠದ ಭಕ್ತರು ಪಾಲ್ಗೊಂಡಿದ್ದರು.

**ರಾಜೇಂದ್ರ ಶ್ರೀಗಳವರ ಪುಣ್ಯಾರಾಧನೆ**

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 37ನೆಯ ಪುಣ್ಯಾರಾಧನೆಯು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಪ್ರಾತ:ಕಾಲ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳವರ ಗದ್ದುಗೆಗಳಿಗೆ ರುದ್ರಾಭಿಷೇಕ, ಅಷ್ಟೋತ್ತರ, ಪ್ರಾಕಾರೋತ್ಸವವು ನೆರವೇರಿತು. 2024ರ ಫೆಬ್ರವರಿ 6ರಿಂದ 11ರವರೆಗೆ ಶ್ರೀಕ್ಷೇತ್ರದಲ್ಲಿ ಜರುಗುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ದಾಸೋಹ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಭಾಗೃಹ ಮಂಟಪಗಳ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ಜಾತ್ರಾ ಮಹೋತ್ಸವದ ವಿವಿಧ ಸಮಿತಿಗಳ ಸಂಚಾಲಕರು, ಸುತ್ತಮುತ್ತಲ ಗ್ರಾಮಗಳ ಮುಖಂಡರು ಹಾಗೂ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಜಾತ್ರಾಮಹೋತ್ಸವದ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಿತು. ಈ ಸಂದರ್ಭದಲ್ಲಿ ವಾಟಾಳು, ಬೆಟ್ಟದಪುರ, ಹೊಸಮಠ, ಚಿಕ್ಕತುಪ್ಪೂರು, ದಂಡಿಕೆರೆ, ಹುಲಿಯೂರುದುರ್ಗ, ಮಾದಹಳ್ಳಿ, ಕುದೇರು, ಚುಂಚನಹಳ್ಳಿ, ನವಿಲೂರು, ಕುದೇರು ಮಠ, ಕುಂದೂರು, ಮಾಡ್ರಳ್ಳಿ, ಮಾದಾಪುರ, ಹರವೆ, ಸಾಲೂರು ಮಠ, ಪಡುಗೂರು, ಕಾಮಗೆರೆ, ನೀಲಕಂಠಸ್ವಾಮಿ ಮಠ, ನಂಜನಗೂಡು, ರಾಗಿಬೊಮ್ಮನಹಳ್ಳಿ, ಕಸುವಿನಹಳ್ಳಿ, ಗೌಡಳ್ಳಿ, ಕುರುಬೂರು, ಮುಡುಕನಪುರ,

ನರಗ್ಯಾತನಹಳ್ಳಿ, ಚಂದ್ರವನ ಆಶ್ರಮದ ಶ್ರೀಗಳವರು ಹರಗುರು ಚರಮೂರ್ತಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ 2024ನೇ ವರ್ಷದ ಗೋಡೆ ಮತ್ತು ಪಾಕೆಟ್ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಲಾಯಿತು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು. ಪ್ರೊ ಸುಬ್ಬಪ್ಪನವರು ಸ್ವಾಗತಿಸಿದರು. ಶ್ರೀ ಸಿ.ವಿ. ಬಸವರಾಜು ವಂದಿಸಿದರು. ಶ್ರೀ ಹೆಚ್.ಎಲ್. ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.

**ಒತ್ತಡ ನಿವಾರಣೆಗೆ ಕ್ರೀಡೆ ಅತ್ಯವಶ್ಯಕ**

ಬದುಕಿನ ಒತ್ತಡದ ನಿವಾರಣೆಗೆ ಕ್ರೀಡೆಗಳು ಬಹಳ ಅವಶ್ಯಕ ಎಂದು ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಮತ್ತು ಫಿಬಾ ಏಷ್ಯಾ ಭಾರತ ಬಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರು, ವಿಧಾನಪರಿಷತ್ ಸದಸ್ಯರು ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಡಾ. ಕೆ. ಗೋವಿಂದರಾಜುರವರು ಡಿಸೆಂಬರ್ 17ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ ಅಂಗವಾಗಿ ಆಯೋಜಿಸಿದ್ದ 3 ದಿನಗಳ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು. ವಿದ್ಯಾರ್ಥಿಗಳು ಓದಿನೊಂದಿಗೆ ಕ್ರೀಡಾ ಚಟುವಟಿಕೆಗಳಿಗೂ ಪ್ರಾಶಸ್ತ್ಯವನ್ನು ಕೊಡಬೇಕು. ತಮ್ಮ ನಿರ್ದಿಷ್ಟ ಗುರಿ ಮತ್ತು ಉದ್ದೇಶದೊಂದಿಗೆ ಜೀವನದಲ್ಲಿ ಛಲವನ್ನು ಬೆಳೆಸಿಕೊಳ್ಳಬೇಕು.. ಜೆಎಸ್‌ಎಸ್ ಸಂಸ್ಥೆಯು ಮೌಲ್ಯಯುತವಾದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸುತ್ತಿದೆ. ಪ್ರತಿ ವರ್ಷವೂ ಈ ಕ್ರೀಡಾಕೂಟದಲ್ಲಿ ಆಯ್ಕೆಯಾಗುವ ಇಬ್ಬರು 'ಉತ್ತಮ ಕ್ರೀಡಾಪಟುಗಳಿಗೆ' ಐವತ್ತು ಸಾವಿರ ರೂಪಾಯಿಗಳ ನಗದು ಬಹುಮಾನ ಹಾಗೂ ಒಂದು ಪಾರಿತೋಷಕವನ್ನು ವೈಯಕ್ತಿಕವಾಗಿ ನೀಡುವುದಾಗಿ ಘೋಷಿಸಿದರು. ಗ್ರಾಮೀಣ ಭಾಗದ ಮಕ್ಕಳನ್ನು ಪ್ರೋತ್ಸಾಹಿಸುವುದಕ್ಕಾಗಿ ಸುತ್ತೂರಿನಲ್ಲಿ ಬಾಸ್ಕೆಟ್‌ಬಾಲ್ ಅಕ್ಯಾಡೆಮಿ ಸ್ಥಾಪಿಸುವುದಾಗಿ ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಮಾನವನ ಜೀವನದಲ್ಲಿ ಕ್ರೀಡೆಗಳು ಅವಿಭಾಜ್ಯ ಅಂಗವಾಗಬೇಕು. ವಿದ್ಯಾಭ್ಯಾಸದ ಸಂದರ್ಭದಲ್ಲಿ ಓದಿಗೆ ಹೇಗೆ ಪ್ರಾಮುಖ್ಯತೆ ನೀಡುತ್ತೇವೆಯೊ ಅದೇ ರೀತಿ ಕ್ರೀಡಾ ಚಟುವಟಿಕೆಗಳಲ್ಲಿಯೂ ಆಸಕ್ತಿಯಿಂದ ಭಾಗವಹಿಸ ಬೇಕು. ಕ್ರೀಡಾಮನೋಭಾವನೆಯನ್ನು ಬೆಳೆಸಿಕೊಳ್ಳುವುದರಿಂದ ಕ್ರೀಡಾಪಟುಗಳಲ್ಲಿ ಉತ್ಸಾಹ ಹೆಚ್ಚುತ್ತದೆ. ಮಾನಸಿಕ ಮತ್ತು ದೈಹಿಕ ಆರೋಗ್ಯ ಬೆಳವಣಿಗೆ ವೃದ್ಧಿಯಾಗುತ್ತದೆ ಎಂದರು.

ಕ್ರೀಡಾಕೂಟವನ್ನು ಉದ್ಘಾಟಿಸಿದ ಅಂತಾರಾಷ್ಟ್ರೀಯ ಕಬಡ್ಡಿ ಕ್ರೀಡಾಪಟುಗಳಾದ ಶ್ರೀ ಸುಕೇಶ್ ಹೆಗ್ಡೆಯವರು ಮಾತನಾಡಿ, ಈ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದಕ್ಕೆ

ತುಂಬಾ ಸಂತೋಷವಾಗಿದೆ. ಶಿಸ್ತಿನ ಸಿಪಾಯಿಗಳಂತೆ ಕ್ರೀಡಾಪಟುಗಳು ಪಥಸಂಚಲನ ಮಾಡಿದ್ದಾರೆ. ಇದನ್ನು ನೋಡುವ ಸೌಭಾಗ್ಯ ನನ್ನದಾಗಿದೆ. ಹಳ್ಳಿಯ ಕ್ರೀಡೆಯಾದ ಕಬಡ್ಡಿ ಆಟವು ಮೂಲೆಗುಂಪಾಗಿತ್ತು, ಆದರೆ ಇತ್ತೀಚಿನ ದಿನಗಳಲ್ಲಿ ಕಬಡ್ಡಿ ಆಟಕ್ಕೆ ನಮ್ಮ ದೇಶದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿದೆ. ಸರ್ಕಾರವು ಸಹ ಉದ್ಯೋಗದಲ್ಲಿ ಶೇ. 3ರಷ್ಟು ಮೀಸಲಾತಿಯನ್ನು ನೀಡಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಿದೆ ಎಂದು ತಿಳಿಸಿ, ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಕ್ರೀಡಾಪಟುಗಳ ಪರವಾಗಿ ವೀರರಾಜಿಪುರದ ಜೆಎಸ್‌ಎಸ್ ಪಿಯು ಕಾಲೇಜಿನ ರಾಜ್ಯಮಟ್ಟದ ಕ್ರೀಡಾಪಟು ಕು. ಭಾವನ ಹಾಗೂ ಕ್ರೀಡಾಧಿಕಾರಿಗಳ ಪರವಾಗಿ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಎಂ.ಕೆ. ಸೋಮಶೇಖರ್ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದ ನಿರ್ದೇಶಕರಾದ ಶ್ರೀ ವೆಂಕಟೇಶ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್, ಕ್ರೀಡಾಕೂಟದ ಸಂಚಾಲಕರಾದ ಶ್ರೀ ಸಂಪತ್ತು ಹಾಗೂ ಸಂಸ್ಥೆಗಳ ಮುಖ್ಯಸ್ಥರುಗಳು ಉಪಸ್ಥಿತರಿದ್ದರು. ಜೆಎಸ್‌ಎಸ್‌ನ ವಿವಿಧ ಸಂಸ್ಥೆಗಳಿಂದ ಆಗಮಿಸಿದ್ದ ಕ್ರೀಡಾ ತಂಡಗಳವರು ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿ, ಪಥಸಂಚಲನ ನಡೆಸಿದರು. 3 ದಿನಗಳ ಕ್ರೀಡಾಕೂಟದಲ್ಲಿ ಸುಮಾರು 3500 ವಿದ್ಯಾರ್ಥಿಗಳು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಸುತ್ತೂರು ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಲೋಕೇಶಪ್ಪ ಸ್ವಾಗತಿಸಿದರು. ಶ್ರೀ ಎಲ್.ಎಂ. ನಂದೀಶ್ ವಂದಿಸಿದರು. ಶ್ರೀ ಡಿ.ಎಂ. ಸಿದ್ದಲಿಂಗಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

### ಸಮಾಜ ತಿದ್ದುವ ಮಠಗಳ ಕಾರ್ಯ ಅನನ್ಯವಾದುದು

ಸಮಾಜ ತಿದ್ದುವ ಮಠಗಳ ಕಾರ್ಯ ಅನನ್ಯವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 4ರಂದು ಮಲ್ಲನಮೂಲೆಯ ಶ್ರೀ ಗುರು ಕಂಬಳೀಶ್ವರ ಮಠದಲ್ಲಿ ನಡೆದ ಶ್ರೀ ಇಮ್ಮಡಿ ಕಂಬಳೀಶ್ವರ ಮಹಾಸ್ವಾಮಿಗಳವರ ಸಂಸ್ಮರಣ ಶತಮಾನೋತ್ಸವ, ಶ್ರೀ ಸಿದ್ಧಲಿಂಗ ಸ್ವಾಮಿಗಳ 49ನೇ ಸಂಸ್ಮರಣೋತ್ಸವ, ಶ್ರೀ ಚನ್ನಬಸವ ಸ್ವಾಮಿಗಳವರ 80ನೇ ವರ್ಷದ ಗುರುವಂದನೆ ಹಾಗೂ ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳವರ ಆಶ್ರಮಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಮಾಜವನ್ನು ತಿದ್ದಿ, ಜನತೆಯನ್ನು ಸನ್ಮಾರ್ಗಕ್ಕೆ ತರುವುದರಲ್ಲಿ ಮಠಗಳ ಪಾತ್ರ ಹಿರಿದಾದುದು. ಈ ದಿಸೆಯಲ್ಲಿ ವೀರಶೈವ ಮಠಗಳು ಶತಮಾನಗಳ ಉದ್ದಕ್ಕೂ ಜನತೆಯ ಬೌದ್ಧಿಕ ಮತ್ತು ಪಾರಮಾರ್ಥಿಕ ಬಾಳನ್ನು ತಿದ್ದಿ, ಮಾನವ ಬದುಕನ್ನು ರೂಪಿಸುವಲ್ಲಿ ಮಹತ್ತರವಾದ ಪಾತ್ರ ವಹಿಸಿವೆ. ನೈತಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ

ಧಾರ್ಮಿಕ ಕಾರ್ಯಗಳನ್ನು ಮಠಗಳು ಮಾಡುತ್ತಾ ಬಂದಿವೆ. ಅಂತಹ ಮಠಗಳಲ್ಲಿ ಮಲ್ಲನಮೂಲೆಯ ಶ್ರೀ ಗುರು ಕಂಬಳೀಶ್ವರ ಮಠವೂ ಸೇರಿದೆ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಐದುನೂರು ವರ್ಷಗಳ ಇತಿಹಾಸವಿರುವ ಶ್ರೀ ಗುರುಕಂಬಳೀಶ್ವರ ಮಠದ ಪರಂಪರೆಯನ್ನು ನಿರಂತರವಾಗಿ ಬೆಳೆಸುತ್ತಿರುವ ಶ್ರೀ ಚನ್ನಬಸವ ಸ್ವಾಮಿಗಳ ಸೇವೆ ಸ್ಮರಣೀಯವಾದುದು ಎಂದು ಹೇಳಿದರು.

ವಾಟಾಳು ಮತ್ತು ಬೆಟ್ಟದಪುರ ಮಠಗಳ ಶ್ರೀಗಳು, ಕನಕಪುರ ಹಾಗೂ ಮಲ್ಲನಮೂಲೆಯ ಮಠಗಳ ಕಿರಿಯ ಶ್ರೀಗಳು ಮಾತನಾಡಿದರು. ಶ್ರೀ ನಂಜುಂಡಸ್ವಾಮಿ ಪ್ರಾರ್ಥಿಸಿದರು. ಶ್ರೀ ಬಿ.ಎಂ. ಪ್ರಭುಸ್ವಾಮಿ ಸ್ವಾಗತಿಸಿದರು. ಡಾ. ರೇಚಣ್ಣ ಸಂಪುಟ ವಾಚನ ಮಾಡಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಉಪನ್ಯಾಸ ನೀಡಿದರು. ಶ್ರೀ ಅರುಣ್ ವಂದಿಸಿದರು. ಶ್ರೀ ಕೆ.ಎನ್. ಶಶಿಧರ್ ಕಾರ್ಯಕ್ರಮ ನಿರೂಪಿಸಿದರು.

**ರಂಗೋತ್ಸವದಿಂದ ಪ್ರತಿಭೆಯ ವಿಕಸನ**

ರಂಗೋತ್ಸವದಿಂದ ಮಕ್ಕಳಲ್ಲಿನ ಪ್ರತಿಭೆಯ ವಿಕಸನಕ್ಕೆ ಅವಕಾಶವಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 14ರಂದು ಚಾಮರಾಜನಗರದ ಡಾ. ರಾಜಕುಮಾರ್ ರಂಗಮಂದಿರದಲ್ಲಿ ಜೆಎಸ್‌ಎಸ್ ಕಲಾಮಂಟಪ, ಜೆಎಸ್‌ಎಸ್ ಮಹಿಳಾ ಕಾಲೇಜು ಮತ್ತು ಸಮುಚ್ಚಯದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜೆಎಸ್‌ಎಸ್ ಕಲಾಮಂಟಪಕ್ಕೆ 60ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸವಿದೆ. ಇಲ್ಲಿ ತರಬೇತುಗೊಂಡ ಅನೇಕ ನಾಟಕಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಗಳಿಸಿವೆ. ವಿದ್ಯಾರ್ಥಿಗಳು ಸಾಮಾಜಿಕ, ಐತಿಹಾಸಿಕ ಮತ್ತು ಧಾರ್ಮಿಕ ನಾಟಕಗಳನ್ನು ಅಭಿನಯಿಸಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಮಕ್ಕಳಲ್ಲಿ ರಂಗಕಲೆಯ ಬಗ್ಗೆ ಆಸಕ್ತಿಯನ್ನು ಮೂಡಿಸುವ ಮತ್ತು ಪ್ರತಿಭೆಯ ವಿಕಸನಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ರಂಗೋತ್ಸವವನ್ನು ಪ್ರಾರಂಭಿಸಲಾಯಿತು. ಈ ವೇದಿಕೆ ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಹೊರತಂದು ಅವರಲ್ಲಿ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸವನ್ನು ಉತ್ತೇಜಿಸುತ್ತಿದೆ ಎಂದು ಹೇಳಿದರು.

ಚಲನಚಿತ್ರ ಕಲಾವಿದರು ಹಾಗೂ ನಿರ್ದೇಶಕರಾದ ಶ್ರೀ ಎಸ್. ನಾರಾಯಣ್‌ರವರು ಜೆಎಸ್‌ಎಸ್ ಸಂಸ್ಥೆಯು ರಂಗೋತ್ಸವದ ಮೂಲಕ ಮಕ್ಕಳಲ್ಲಿನ ಕಲೆಯನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ. ಅಭಿನಯ ಕಲೆಯನ್ನು ಪ್ರತ್ಯೇಕ ಕಲಿಕಾ ವಿಭಾಗವನ್ನಾಗಿ ಮಾಡಿಕೊಂಡು ಮಕ್ಕಳಿಂದ ಕಲೆಯನ್ನು ಪೋಷಿಸುವಲ್ಲಿ ವೇದಿಕೆಯನ್ನು ಕಲ್ಪಿಸಿಕೊಟ್ಟಿರುವುದು ಅಭಿನಂದನಾರ್ಹವಾದ ವಿಷಯವಾಗಿದೆ. ನಾಟಕ ಎಂಬುದು ಜೀವಂತಕಲೆ. ಪ್ರಾಚೀನ ಕಾಲದಲ್ಲಿ ರಂಗಕಲೆ ಮನೋರಂಜನೆಯನ್ನು ನೀಡಿದ್ದು ನಾಟಕಗಳ

ಮುಖಾಂತರ ಮನುಷ್ಯನ ಸುಪ್ತ ಪ್ರತಿಭೆಯನ್ನು ಹೊರಹಾಕಲು ಇದು ಸಹಕಾರಿಯಾಯಿತು. ನಂತರದಲ್ಲಿ ರಂಗಕಲೆ ಅನೇಕ ಸ್ಥಿತ್ಯಂತರಗಳಿಗೆ ಅದರದೇ ಆದ ಮಹತ್ವವನ್ನು ಪಡೆದುಕೊಂಡಿತು. ಪ್ರಸ್ತುತ ರಂಗೋತ್ಸವ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳು ರಂಗ ಶಿಕ್ಷಣವನ್ನು ಪಡೆದು ಅವರ ಪ್ರತಿಭೆಯನ್ನು ಅನಾವರಣ ಮಾಡುವಂತಾಗಲಿ ಎಂದರು.

ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಗೀತಾ ಹುಡೇದರವರು ಜೆಎಸ್‌ಎಸ್ ಸಂಸ್ಥೆಯು ರಂಗೋತ್ಸವ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿನ ಪ್ರತಿಭೆಯನ್ನು ಹೊರತರುವುದರ ಜೊತೆಗೆ ಮನೋರಂಜನೆ ಹಾಗೂ ನಟನೆಯಿಂದ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತಿದೆ. ಇದರ ಸದುಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತರಾಗದೆ ಸದಭಿರುಚಿಯ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಬದುಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಹೇಳಿದರು.

ಕಾರ್ಯಕ್ರಮದ ನಂತರ ಡಾ ಗಜಾನನ ಶರ್ಮ ರಚಿಸಿರುವ ಶ್ರೀ ಬಿ. ಪ್ರಶಾಂತ ಸಂಗೀತ ಮತ್ತು ನಿರ್ದೇಶಿಸಿದ 'ಚೆನ್ನಭೈರಾದೇವಿ' ನಾಟಕವನ್ನು ಹುಲ್ಲಹಳ್ಳಿ ಜೆಎಸ್‌ಎಸ್ ಕನ್ನಡ ಮತ್ತು ಆಂಗ್ಲಮಾಧ್ಯಮ ಶಾಲೆ ವಿದ್ಯಾರ್ಥಿಗಳು ಅಭಿನಯಿಸಿದರು. ಪೂಜ್ಯರು, ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಾಟಕವನ್ನು ವೀಕ್ಷಿಸಿದರು.

ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಎ.ಎಂ. ಮಹದೇವಸ್ವಾಮಿ ಸ್ವಾಗತಿಸಿದರು. ರಂಗೋತ್ಸವದ ಸಂಚಾಲಕರಾದ ಶ್ರೀ ಚಂದ್ರಶೇಖರಾಚಾರ್ ಹೆಗ್ಗೊತಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಜಿ. ಚಂದ್ರಶೇಖರ್ ವಂದಿಸಿದರು. ಶ್ರೀಮತಿ ಅರುಣಶ್ರೀ ಕಾರ್ಯಕ್ರಮ ನಿರೂಪಿಸಿದರು.

**ಸಮಾಜದ ಎಲ್ಲಾ ಸ್ತರದ ಜನರಿಗೂ ಸೌಲಭ್ಯಗಳು ತಲುಪಬೇಕು**

ಸಮಾಜದ ಎಲ್ಲಾ ಸ್ತರದ ಜನರಿಗೂ ಸೌಲಭ್ಯಗಳು ತಲುಪಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 23ರಂದು ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಸಮಾಜ ಬಹುಮುಖವಾಗಿ ಬೆಳೆದಿದೆ. ಅಷ್ಟೇ ಜ್ವಲಂತ ಸಮಸ್ಯೆಗಳೂ ಇವೆ. ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕಾದ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಹಿಂದೆ ಮುಂಬೈ ಅಧಿವೇಶನದಲ್ಲಿ ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಮಹಾಸಭಾ ವತಿಯಿಂದಲೇ ಜಾತಿಗಣತಿಯನ್ನು ಮಾಡಿ ಸಮಾಜವನ್ನು ಗುರುತಿಸುವ ಕಾರ್ಯವಾಗಬೇಕಿದೆ ಎಂದು ಹೇಳಿದ್ದರು. ಇಂದು ವೈಜ್ಞಾನಿಕವಾಗಿ ಅಂಕಿ ಅಂಶಗಳನ್ನು ಸರಿಯಾಗಿ ಪರಿಶೀಲಿಸಿ ವರದಿಯನ್ನು ನೀಡಬೇಕು ಎಂಬ ಅಭಿಪ್ರಾಯ ಮೂಡಿಬಂದಿದೆ. ಒಂದು ಸಮಾಜದ ನಾಲ್ಕಾರು ಜನ ಏಳಿಗೆಯನ್ನು ಹೊಂದಿದ್ದರೆ ಅದರಿಂದ ಇಡೀ ಸಮಾಜ ಅಭಿವೃದ್ಧಿ

ಹೊಂದಿದೆ ಎಂಬ ಭ್ರಮೆಗೆ ಒಳಗಾಗಬಾರದು. ಸಮಾಜದಲ್ಲಿನ ಶ್ರೀಮಂತರಿಂದ ಹಿಡಿದು ಬಡವರನ್ನು ಗುರುತಿಸಿ ಸೌಲಭ್ಯಗಳನ್ನು ಒದಗಿಸಿದಾಗ ಮಾತ್ರ ಸಮಾನವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಮಹಾಸಭೆಗೆ ಸುದೀರ್ಘವಾದ ಇತಿಹಾಸವಿದೆ. ಶ್ರೀ ಶಿರಸಂಗಿ ಲಿಂಗರಾಜರಿಂದ ಹಿಡಿದು ಶ್ರೀ ಶಾಮನೂರು ಶಿವಶಂಕರಪ್ಪನವರವರೆಗೂ ಅನೇಕ ಪೂಜ್ಯರು, ಗಣ್ಯರು ಸಮಾಜದ ಏಳಿಗೆಗೆ ಶ್ರಮಿಸಿದ್ದಾರೆ. ವೀರಶೈವ ಲಿಂಗಾಯತ ಸಮಾಜದ ಸಂಘ–ಸಂಸ್ಥೆಗಳು, ಮಠ ಮಾನ್ಯಗಳು ನಾಡಿನ ಶ್ರೇಯಸ್ಸಿಗಾಗಿ ನೀಡಿದ ಕೊಡುಗೆ ಅಪಾರ. ಯಾವುದೇ ಜಾತಿ, ಮತ ಭೇದವನ್ನು ಎಣಿಸದೆ ಸಮಸ್ತರಿಗೂ ಆಶ್ರಯವನ್ನು ನೀಡಿ ಅವರ ಕ್ಷೇಮವೇ ನಮ್ಮ ಕ್ಷೇಮ ಎಂದು ಭಾವಿಸಿದ ಕೀರ್ತಿ ಈ ಸಮಾಜಕ್ಕೆ ಸಲ್ಲುತ್ತದೆ.

ಮಹಾಸಭಾದ ಅಧ್ಯಕ್ಷರಾದ ಶ್ರೀ ಶಾಮನೂರು ಶಿವಶಂಕರಪ್ಪನವರು ಆಧುನಿಕ ಯುವ ಪೀಳಿಗೆ ಧರ್ಮ, ಸಂಸ್ಕಾರ, ಸಂಸ್ಕೃತಿ, ಆಚಾರ–ವಿಚಾರಗಳನ್ನು ತಿಳಿಯಲು ಇಂತಹ ಅಧಿವೇಶನಗಳಲ್ಲಿ ಹರಗುರು ಚರಮೂರ್ತಿಗಳು, ಸಮಾಜದ ಹಿರಿಯರು ಮಾರ್ಗದರ್ಶನ ಮಾಡುತ್ತಾ ಬರುತ್ತಿದ್ದಾರೆ. ಇಂದಿನ ಹಾಗೂ ಭವಿಷ್ಯದ ಪೀಳಿಗೆಗೆ ಇವೆಲ್ಲ ದಾರಿದೀಪವಾಗಲಿವೆ. ಇದು ಸಮಾಜಕ್ಕೆ ಹೊಸ ಸಂದೇಶ ನೀಡುವ ಹಾಗೂ ಒಗ್ಗಟ್ಟನ್ನು ಸಾರುವ ಅಧಿವೇಶನವಾಗಿದೆ ಎಂದು ಹೇಳಿದರು.

ಶ್ರೀಶೈಲ, ಹುಬ್ಬಳ್ಳಿ, ಹರಿಹರ ಮಠಗಳ ಜಗದ್ಗುರುಗಳು, ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ, ಶ್ರೀ ಎಸ್.ಎಸ್. ಮಲ್ಲಿಕಾರ್ಜುನರವರು ಮಾತನಾಡಿದರು. ಸಂಸದರಾದ ಶ್ರೀ ಜಿ.ಎಂ. ಸಿದ್ಧೇಶ್ವರ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು. ಶಾಸಕರುಗಳಾದ ಶ್ರೀ ಬಿ.ಪಿ. ಹರೀಶ್, ಶ್ರೀ ಬಸವರಾಜು ವಿ. ಶಿವಗಂಗಾ, ಶ್ರೀ ಎಸ್. ರುದ್ರೇಗೌಡ, ಮಹಾಸಭೆಯ ಉಪಾಧ್ಯಕ್ಷರುಗಳಾದ ಶ್ರೀ ಅಣಬೇರು ರಾಜಣ್ಣ, ಶ್ರೀ ಅಥಣಿ ವೀರಣ್ಣ, ಶ್ರೀ ಎಸ್.ಎಸ್. ಗಣೇಶ್‌ರವರುಗಳು ಉಪಸ್ಥಿತರಿದ್ದರು. ಶ್ರೀ ದೇವರಮನಿ ಶಿವಕುಮಾರ ಸ್ವಾಗತಿಸಿದರು. ಶ್ರೀ ಮುಂಡಾಸ್ ವೀರೇಂದ್ರ ವಂದಿಸಿದರು. ಶ್ರೀಮತಿ ಸುಮತಿ ಜಯಪ್ಪ ಕಾರ್ಯಕ್ರಮ ನಿರೂಪಿಸಿದರು.

**ಪ್ರಜಾಪ್ರಭುತ್ವದಲ್ಲಿ ಮಾಧ್ಯಮದ ಪಾತ್ರ ಮಹತ್ವದ್ದು**

ಪ್ರಜಾಪ್ರಭುತ್ವದಲ್ಲಿ ಮಾಧ್ಯಮದ ಪಾತ್ರ ಮಹತ್ವದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 22ರಂದು ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೂತನ ಪತ್ರಿಕಾ ಭವನ ಹಾಗೂ ತರಬೇತಿ ಕೇಂದ್ರದ ಶಂಕುಸ್ಥಾಪನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಪತ್ರಿಕಾರಂಗವನ್ನು ಕರೆಯಲಾಗುತ್ತದೆ. ಪ್ರಸಕ್ತ ಸಮಾಜದ ಅಭಿವೃದ್ಧಿಯಲ್ಲಿ ಮಾಧ್ಯಮಗಳು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಅಧಿಕಾರಿಗಳಿಗೆ ತಿಳಿಯದ ಸಂಗತಿಗಳನ್ನು ತಿಳಿಸುವ ಕೆಲಸವನ್ನು ಮಾಧ್ಯಮಗಳು ಮಾಡುತ್ತಿವೆ. ಮೈಸೂರು ಪತ್ರಕರ್ತರು ರಾಜ್ಯದಲ್ಲೇ ವಿಶೇಷ ಸ್ಥಾನಮಾನ ಗಳಿಸಿದ್ದಾರೆ. ವಸ್ತುನಿಷ್ಠ ವರದಿಗಾರಿಕೆಯೊಂದಿಗೆ ಸುದ್ದಿಯನ್ನು

ಜನರಿಗೆ ತಲುಪಿಸುವಲ್ಲಿ ಮುಂದಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಪ್ರಜಾಪ್ರಭುತ್ವದ ಯಶಸ್ಸಿಗೆ ಪತ್ರಿಕಾ ಸ್ವಾತಂತ್ರ್ಯ ಅಗತ್ಯ. ಇಂದು ಪತ್ರಿಕಾ ಕ್ಷೇತ್ರದಲ್ಲಿ ವೃತ್ತಿಪರತೆ ಇಲ್ಲವಾಗಿದೆ. ವ್ಯಾಪಾರ–ವಾಣಿಜ್ಯ ಉದ್ದೇಶ ಹೆಚ್ಚಾಗಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ವಸ್ತುನಿಷ್ಠ ಸುದ್ದಿಗಳನ್ನು ಜನರಿಗೆ ಮುಟ್ಟಿಸಬೇಕು. ಆಗ ಮಾತ್ರ ಸಮಾಜದಲ್ಲಿ ಬದಲಾವಣೆ ಹಾಗೂ ಜಾಗೃತಿ ತರಬಹುದು. ಜನರಲ್ಲಿ ತಿಳಿವಳಿಕೆ ಮೂಡಿಸಬೇಕು ಹಾಗೂ ವೈಚಾರಿಕತೆಯನ್ನು ಬೆಳೆಸಬೇಕು ಎಂದು ತಿಳಿಸಿದರು.

ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ. ಹರೀಶ್ ಗೌಡ, ಶ್ರೀ ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಮಾಜಿ ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಶಿವಾನಂದ ತಗಡೂರು, ಶ್ರೀ ಹೆಚ್.ವಿ. ರಾಜೀವ್, ಶ್ರೀ ಯಶಸ್ವಿ ಸೋಮಶೇಖರ್, ಶ್ರೀ ಕೆ.ವಿ. ಪ್ರಭಾಕರ್, ಶ್ರೀ ಹೆಚ್.ಬಿ. ಮದನ್‌ಗೌಡ, ಶ್ರೀ ಎಸ್.ಟಿ. ರವಿಕುಮಾರ್, ಹಾಗೂ ಸಂಘದ ಪದಾಧಿಕಾರಿಗಳು ಮೊದಲಾದವರು ಉಪಸ್ಥಿತರಿದ್ದರು.

**ಸೌಜನ್ಯಮೂರ್ತಿಯಾಗಿದ್ದ ಹೇಮರೆಡ್ಡಿ ಮಲ್ಲಮ್ಮ**

ಹಲವಾರು ಸಾಂಸಾರಿಕ ತಾಪತ್ರಯಗಳ ನಡುವೆಯೂ ಪ್ರತಿಯೊಬ್ಬರನ್ನು ಪರಿವರ್ತನೆ ಮಾಡಿದವರು ಹೇಮರೆಡ್ಡಿ ಮಲ್ಲಮ್ಮ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 30ರಂದು ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ 5ನೇ ವಾರ್ಷಿಕೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತ ತಿಳಿಸಿದರು. ಸಂಸಾರದ ಕಷ್ಟಕಾರ್ಪಣ್ಯಗಳ ನಡುವೆಯೂ ಮಲ್ಲಮ್ಮ ಸೌಜನ್ಯಮೂರ್ತಿಯಾಗಿದ್ದರು. ಮಲ್ಲಮ್ಮ ಮಹಾತಪಸ್ವಿನಿ, ಸಾತ್ವಿಕ ಪತಿವ್ರತೆ. ಅಪಾರ ಶ್ರದ್ಧೆ, ಭಕ್ತಿಗಳಿಂದಲೇ ದೇವರನ್ನು ಒಲಿಸಿಕೊಂಡಿದ್ದರು. ಈ ರೀತಿಯ ಸಾಧನೆಗೆ ತಾಳ್ಮೆಯ ಜೊತೆಗೆ ನಂಬಿಕೆಯೂ ಮುಖ್ಯವಾಗುತ್ತದೆ ಎಂದು ಹೇಳಿದರು.

ಹಿರಿಯ ಪತ್ರಕರ್ತರಾದ ಶ್ರೀ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಸಾಹಿತಿಗಳಾದ ಶ್ರೀ ಗೊ.ರು. ಚನ್ನಬಸಪ್ಪ ಕೃತಿ ಬಿಡುಗಡೆಗೊಳಿಸಿದರು. ಮೈಸೂರು ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಿಣಿ, ಶ್ರೀಮತಿ ಉಮಾ ಎಚ್. ರಾಯನಗೌಡ, ಶ್ರೀಮತಿ ಶಶಿಕಲಾ ವಿ. ದೇಸಾಯಿಯವರುಗಳನ್ನು ಸನ್ಮಾನಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಶ್ರೀಮತಿ ಸುದರ್ಶಿನಿ ಮತ್ತು ಶ್ರೀ ಕುಸುಮ ಪ್ರಾರ್ಥಿಸಿದರು. ಶ್ರೀ ಜಿ. ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀ ಹೆಚ್.ಸಿ. ರೇವಣಸಿದ್ದಪ್ಪ, ಡಾ. ಜಿ.ಎಂ. ವಾಮದೇವ ಮಾತನಾಡಿದರು. ಡಾ. ವಿಠಲರಡ್ಡಿ ಎಫ್. ಚುಳಕಿ ವಂದಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.


□

## 2024ನೆಯ ವರ್ಷದ ಬಸವಾದಿ ಶರಣರ ಶರಣೋತ್ಸವಗಳು

| | | | | |
|---|---|---|---|---|
| ಜನವರಿ | 11 | ಗುರುವಾರ | ಎಳ್ಳ ಅಮಾವಾಸ್ಯೆ | ಒಕ್ಕಲಿಗ ಮುದ್ದಣ್ಣ |
| ಜನವರಿ | 15 | ಸೋಮವಾರ | ಮಕರ ಸಂಕ್ರಮಣ | ಸಿದ್ಧರಾಮೇಶ್ವರ |
| ಜನವರಿ | 25 | ಗುರುವಾರ | ಬನದ ಹುಣ್ಣಿಮೆ | ಮೇದಾರ ಕೇತಯ್ಯ |
| ಫೆಬ್ರವರಿ | 01 | ಗುರುವಾರ | ಪ್ರತಿ ವರುಷ | ಮರುಳ ಶಂಕರದೇವ |
| ಫೆಬ್ರವರಿ | 09 | ಶುಕ್ರವಾರ | ಅವರಾತ್ರಿ ಅಮಾವಾಸ್ಯೆ | ಜೇಡರ ದಾಸಿಮಯ್ಯ |
| ಫೆಬ್ರವರಿ | 24 | ಶುಕ್ರವಾರ | ಭಾರತ ಹುಣ್ಣಿಮೆ | ಕಿನ್ನರಿ ಬೊಮ್ಮಯ್ಯ |
| ಮಾರ್ಚ್ | 08 | ಶನಿವಾರ | ಮಹಾಶಿವರಾತ್ರಿ | ಡೋಹರ ಕಕ್ಕಯ್ಯ |
| ಮಾರ್ಚ್ | 25 | ಸೋಮವಾರ | ಹೋಳಿ ಹುಣ್ಣಿಮೆ | ಬಿಬ್ಬಿ ಬಾಚಯ್ಯ |
| ಏಪ್ರಿಲ್ | 09 | ಮಂಗಳವಾರ | ಯುಗಾದಿ ಪಾಡ್ಯ | ಅಲ್ಲಮಪ್ರಭುದೇವರು |
| ಏಪ್ರಿಲ್ | 23 | ಮಂಗಳವಾರ | ದವನದ ಹುಣ್ಣಿಮೆ | ಅಕ್ಕಮಹಾದೇವಿ |
| ಮೇ | 10 | ಶುಕ್ರವಾರ | ಅಕ್ಷಯ ತೃತೀಯ | ಬಸವಣ್ಣನವರು |
| ಮೇ | 23 | ಗುರುವಾರ | ಆಗಿ ಹುಣ್ಣಿಮೆ | ಶಿವನಾಗಮಯ್ಯ |
| ಜೂನ್ | 06 | ಗುರುವಾರ | ಬಾದಾಮಿ ಅಮಾವಾಸ್ಯೆ | ಕುರುಬ ಗೊಲ್ಲಾಳೇಶ್ವರ |
| ಜೂನ್ | 22 | ಶನಿವಾರ | ಕಾರ ಹುಣ್ಣಿಮೆ | ಅಂಬಿಗರ ಚೌಡಯ್ಯ |
| ಜುಲೈ | 05 | ಶುಕ್ರವಾರ | ಮಣ್ಣೆತ್ತಿನ ಅಮಾವಾಸ್ಯೆ | ಕುಂಬಾರ ಗುಂಡಯ್ಯ |
| ಜುಲೈ | 21 | ರವಿವಾರ | ಕಡ್ಲಿಗಡಬ ಹುಣ್ಣಿಮೆ | ಹಡಪದ ಅಪ್ಪಣ್ಣ |
| ಆಗಸ್ಟ್ | 05 | ಸೋಮವಾರ | 1ನೇ ಶ್ರಾವಣ ಸೋಮ | ಶಂಕರದಾಸಿಮಯ್ಯ |
| ಆಗಸ್ಟ್ | 09 | ಶುಕ್ರವಾರ | ನಾಗ ಪಂಚಮಿ | ಅಕ್ಕನಾಗಮ್ಮ |
| ಆಗಸ್ಟ್ | 19 | ಸೋಮವಾರ | ನೂಲ ಹುಣ್ಣಿಮೆ | ನುಲಿಯ ಚಂದಯ್ಯ |
| ಸೆಪ್ಟೆಂಬರ್ | 07 | ಶನಿವಾರ | ಗಣೇಶ ಚೌತಿ | ಮಡಿವಾಳ ಮಾಚಿದೇವ |
| ಸೆಪ್ಟೆಂಬರ್ | 18 | ಬುಧವಾರ | ಅನಂತ ಹುಣ್ಣಿಮೆ | ಹೂಗಾರ ಮಾದಣ್ಣ |
| ಅಕ್ಟೋಬರ್ | 11 | ಶುಕ್ರವಾರ | ಮಹಾನವಮಿ | ಹರಳಯ್ಯ-ಮಧುವಯ್ಯ |
| ಅಕ್ಟೋಬರ್ | 12 | ಶನಿವಾರ | ವಿಜಯದಶಮಿ | ಕಲ್ಯಾಣಕ್ರಾಂತಿ ವಿಜಯ |
| ಅಕ್ಟೋಬರ್ | 17 | ಗುರುವಾರ | ಶೀಗಿ ಹುಣ್ಣಿಮೆ | ಗಂಗಾಂಬಿಕೆ |
| ನವೆಂಬರ್ | 02 | ಶನಿವಾರ | ದೀಪಾವಳಿ ಪಾಡ್ಯ | ಚೆನ್ನಬಸವಣ್ಣ |
| ನವೆಂಬರ್ | 15 | ಶುಕ್ರವಾರ | ಗೌರಿ ಹುಣ್ಣಿಮೆ | ನೀಲಾಂಬಿಕೆ |
| ಡಿಸೆಂಬರ್ | 01 | ರವಿವಾರ | ಛಟ್ಟಿ ಅಮಾವಾಸ್ಯೆ | ದಾನಮ್ಮದೇವಿ |
| ಡಿಸೆಂಬರ್ | 15 | ರವಿವಾರ | ಹೊಸ್ತಿಲ ಹುಣ್ಣಿಮೆ | ಮಾದರ ಚನ್ನಯ್ಯ |
| ಡಿಸೆಂಬರ್ | 30 | ಸೋಮವಾರ | ಎಳ್ಳ ಅಮಾವಾಸ್ಯೆ | ಒಕ್ಕಲಿಗ ಮುದ್ದಣ್ಣ |

**ಸಂಗ್ರಹ : ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ), ಬೆಳಗಾವಿ**

# ಪ್ರಸಾದ



## ಕೃತಿ-ಸ್ವೀಕೃತಿ

**ಮೃತ್ಯುಂಜಯ (ಸಾಹಿತ್ಯ : ಸ್ಮರಣೆ)**
ಸಂ.: ಡಾ. ವಿಜಯಕುಮಾರ
ಕಟಗಿಹಳ್ಳಿಮಠ
ಡಾ. ಜಿ. ವೀರಭದ್ರಗೌಡ
ಪ್ರ.: ಹೆಬಸೂರ ಪ್ರಕಾಶನ
ಬಾಗಲಕೋಟೆ
ಪು: 908, ಬೆಲೆ: 1000/–

**ಬಹುಮುಖ ವ್ಯಕ್ತಿತ್ವದ ಶಾಂತಾದೇವಿ ಗುಂಜಾಳ**
ಶ್ರೀ ಪ್ರಕಾಶ ಗಿರಿಮಲ್ಲನವರ
ಪ್ರ.: ಬೆಳದಿಂಗಳು ಪ್ರಕಾಶನ
ನ್ಯೂ ವೈಭವ್ ನಗರ
ಬೆಳಗಾವಿ
ಪು: 72, ಬೆಲೆ: 60/–

**ಅನುಭವಮಂಟಪದ ಷಡ್ಜ್ಯೋತಿಗಳು**
ಶ್ರೀ ಮುಡಿಗುಂಡ ಎಸ್. ಪುಟ್ಟಪ್ಪ
ಪ್ರ.: ನವ್ಯಕಾವ್ಯ ಪ್ರಕಾಶನ
ಮೈಸೂರು
ಪು: 96, ಬೆಲೆ: 100/–

**ಹೃದಯ ಶಿವ**
**(ಜಿ.ಎನ್. ಶಿವಮೂರ್ತಿ ಅಭಿನಂದನ ಗ್ರಂಥ)**
ಸಂ.: ಡಾ. ಕೆ. ರವೀಂದ್ರನಾಥ
ಶ್ರೀ ತುರುವನೂರು ಮಂಜುನಾಥ
ಡಾ. ಎಸ್.ವೈ. ಸೋಮಶೇಖರ್
ಪ್ರ.: ಶ್ರೀ ಜಿ.ಎನ್. ಶಿವಮೂರ್ತಿ
ಅಭಿನಂದನ ಸಮಿತಿ, ಕೂಡಲಸಂಗಮ
ಗಾಂಧಿನಗರ, ಬಳ್ಳಾರಿ
ಪು: 402, ಬೆಲೆ: 400/–

**ನಾನು ಮತ್ತು ನಾನು (ಭಾವ ಮಾಲಿಕೆ)**
ವಿದ್ವಾನ್ ರಘುಪತಿ ಭಟ್ ಎಸ್.
ಪ್ರ.: ವಿದ್ವಾನ್ ರಘುಪತಿ ಭಟ್. ಎಸ್
ಮಂಗಳೂರು
ಪು: 95, ಬೆಲೆ: 40/–

**ಮುನ್ನಿರುಳ ಮೆಲ್ವಾತು (ಕವನ ಮಾಲಿಕೆ)**
ವಿದ್ವಾನ್ ರಘುಪತಿ ಭಟ್ ಎಸ್.
ಪ್ರ.: ವಿದ್ವಾನ್ ರಘುಪತಿ ಭಟ್. ಎಸ್
ಮಂಗಳೂರು
ಪು: 95, ಬೆಲೆ: 40/–

**ಸಮಾಜಮುಖಿ (ಸಂಪುಟ–2)**
**(ಪೂಜ್ಯ ಡಾ. ತೋಂಟದ ಸಿದ್ಧಲಿಂಗ**
**ಮಹಾಸ್ವಾಮಿಗಳ ಸ್ಮೃತಿ ಸಂಚಯ)**
ಶ್ರೀ ಶಶಿಧರ ತೋಡಕರ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ
ಎಡೆಯೂರು–ಡಂಬಳ–ಗದಗ
ಪು: 234, ಬೆಲೆ: 300/–

**ಜ್ಞಾನಯೋಗ (ಸಂಪುಟ–6)**
**(ಅಲ್ಲಮಪ್ರಭುದೇವರ ವಚನ ನಿರ್ವಚನ)**
ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು
ಪ್ರ.: ಜ್ಞಾನಯೋಗ ಫೌಂಡೇಷನ್
ಜ್ಞಾನಯೋಗಾಶ್ರಮ
ವಿಜಯಪುರ
ಪು: 1146, ಬೆಲೆ: 1000/–

**ಅಲ್ಲಮ ಅಧ್ಯಯನಲೋಕ**
ಸಂ.: ಡಾ. ಜಿ.ಎಂ. ಹೆಗಡೆ
ಪ್ರ.: ಅಲ್ಲಮಪ್ರಭು ಪೀಠ
ಕಾಂತಾವರ (ಟ್ರಸ್ಟ್)
ಶ್ರೀ ಕಾಂತೇಶ್ವರ ನಗರ
ಕಾರ್ಕಳ ತಾ., ಉಡುಪಿ ಜಿಲ್ಲೆ
ಪು: 946, ಬೆಲೆ: 900/–

## ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
# 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಪ್ರಾಧ್ಯಾಪಕರು, ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು 570023
ಮೊ: 9845309081

**ಪ್ರೊ. ಮೊರಬದ ಮಲ್ಲಿಕಾರ್ಜುನ**
#3/1288, 12ನೇ ಮೇನ್
ವಿಜಯನಗರ 4ನೇ ಹಂತ
ಮೈಸೂರು 570017
ಮೊ: 9986137389

**ಎಚ್.ಎಸ್. ಸಿದ್ಧಗಂಗಪ್ಪ**
ನಂ. 1617, 'ಮಾತೃಶ್ರೀ'
ಸರ್ ಎಂ. ವಿಶ್ವೇಶ್ವರಯ್ಯ
ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯರಸ್ತೆ
ಬೆಂಗಳೂರು 560091
ಮೊ: 9845565871

**ಶ್ರೀ ಸಂಗಮೇಶ ಎನ್. ಜವಾದಿ**
#3/135, ರಾಜ್ ಖಾನಾವಳಿ
ಆರ್ಯಸಮಾಜದ ಹತ್ತಿರ
ಚಿಟಗುಪ್ಪ
ಚಿಟಗುಪ್ಪ ತಾಲ್ಲೂಕು
ಬೀದರ ಜಿಲ್ಲೆ 585412
ಮೊ: 9663809340

**ಹಿಂಬದಿ ಪುಟದ ಚಿತ್ರ**

ಭಾಲ್ಕಿಯಲ್ಲಿ ಆಯೋಜಿಸಿದ್ದ ಡಾ. ಭೀಮಣ್ಣ ಖಂಡ್ರೆಯವರ ಜನ್ಮ ಶತಮಾನೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅವರನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸನ್ಮಾನಿಸಿದರು. ತಡೋಲಾ ಶ್ರೀಗಳು, ನಿಜಗುಣಾನಂದ ಶ್ರೀಗಳು, ಶ್ರೀ ಈಶ್ವರ ಬಿ. ಖಂಡ್ರೆ, ಭಾಲ್ಕಿ ಶ್ರೀಗಳು, ಶ್ರೀ ಯು.ಟಿ. ಖಾದರ್, ಶ್ರೀ ಎಚ್.ಕೆ. ಪಾಟೀಲ್, ಶ್ರೀ ಎಂ. ವೀರಪ್ಪ ಮೊಯ್ಲಿ ಮತ್ತು ಶ್ರೀ ಎಂ.ಬಿ. ಪಾಟೀಲ್ ಮೊದಲಾದವರುಗಳಿದ್ದಾರೆ (2 ಡಿಸೆಂಬರ್ 2023)




ಗುಂಡ್ಲುಪೇಟೆಯಲ್ಲಿ ಮೈಸೂರು ಜೆಎಸ್‌ಎಸ್ ಆಸ್ಪತ್ರೆ, ಸಂಘ – ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳು ಆಶೀರ್ವಚನ ನೀಡುತ್ತಿರುವುದು. ಡಾ. ಸಿ.ಪಿ. ಮಧು, ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್, ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಶ್ರೀ ನಂಜಪ್ಪನವರುಗಳಿದ್ದಾರೆ (9 ಡಿಸೆಂಬರ್ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 37ನೆಯ ಪುಣ್ಯ ಸಂಸ್ಮರಣೆಯ ಸಂದರ್ಭದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಮಂಟಪಗಳ ಭೂಮಿ ಪೂಜೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಮಾದಹಳ್ಳಿ, ಚಿಕ್ಕತುಪ್ಪೂರು, ಕಸುವಿನಹಳ್ಳಿ, ಮಾಡ್ರಹಳ್ಳಿ, ಬೆಟ್ಟದಪುರ, ವಾಟಾಳು, ಹೊಸಮಠ ಮತ್ತು ಚಂದ್ರವನ ಆಶ್ರಮದ ಶ್ರೀಗಳು ಹಾಗೂ ಇತರರನ್ನು ಕಾಣಬಹುದು (17 ಡಿಸೆಂಬರ್ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ ಅಂಗವಾಗಿ ಆಯೋಜಿಸಿದ್ದ ಮೂರು ದಿನಗಳ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಂತಾರಾಷ್ಟ್ರೀಯ ಕಬಡ್ಡಿ ಕ್ರೀಡಾಪಟುಗಳಾದ ಶ್ರೀ ಸುಕೇಶ್ ಹೆಗ್ಡೆರವರು ಹಾಗೂ ವಿಧಾನಪರಿಷತ್ ಸದಸ್ಯರು ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಡಾ. ಕೆ. ಗೋವಿಂದರಾಜುರವರುಗಳು ಉದ್ಘಾಟಿಸಿದರು. ಶ್ರೀ ಎಸ್.ಪಿ. ಮಂಜುನಾಥ್, ಮೈಸೂರು ವಿಶ್ವವಿದ್ಯಾನಿಲಯದ ಕ್ರೀಡಾ ನಿರ್ದೇಶಕರಾದ ಶ್ರೀ ವೆಂಕಟೇಶ್ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ (17 ಡಿಸೆಂಬರ್ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಶಿಬಿರದ ಸಮಾರೋಪವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಅಬ್ದುಲ್ ಜಮೀಲ್, ಶ್ರೀ ಪಿ.ಜಿ.ಆರ್. ಸಿಂಧ್ಯಾ, ಶ್ರೀ ಪಿ. ವಿಶ್ವನಾಥ್, ಡಾ. ಕೆ.ಬಿ. ಗುರುಮೂರ್ತಿ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಪದಾಧಿಕಾರಿಗಳು ಹಾಗೂ ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥರುಗಳೊಂದಿಗೆ ಶಿಬಿರಾರ್ಥಿಗಳಿದ್ದಾರೆ (5 ಡಿಸೆಂಬರ್ 2023)




ಶ್ರೀಮತಿ ಮಲ್ಲಿಕಾ ಮಳವಳ್ಳಿ ಮತ್ತು ಶ್ರೀ ಬಿ.ಎಂ. ಮಹಾದೇವಪ್ಪನವರ ವೈವಾಹಿಕ ಷಷ್ಟ್ಯಬ್ದಿ ಸಮಾರಂಭದಲ್ಲಿ ಮಲ್ಲಿಕಾ ಮಳವಳ್ಳಿಯವರ 'ಕಾತ್ಯಾಯಿನಿ' ಕಾದಂಬರಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಎಚ್.ಎಸ್. ಮುದ್ದೇಗೌಡರವರು ಬಿಡುಗಡೆಗೊಳಿಸಿದರು. ಶ್ರೀ ಕೆ.ಬಿ. ಸೋಮಶೇಖರ್‌ಮೂರ್ತಿ, ಪ್ರೊ. ಬಿ.ಎಂ. ಸದಾಶಿವಮೂರ್ತಿ, ಡಾ. ಪ್ರದೀಪ್‌ಕುಮಾರ್ ಹೆಬ್ರಿ, ಡಾ. ಹೆಳವರಹುಂಡಿ ಸಿದ್ದಪ್ಪ, ಶ್ರೀ ಎಂ.ಎಸ್. ಪ್ರಕಾಶ್ ಹಾಗೂ ಶ್ರೀ ಮ.ಗು. ಸದಾನಂದಯ್ಯರವರುಗಳಿದ್ದಾರೆ (5 ಡಿಸೆಂಬರ್ 2023)




ಮಲ್ಲನಮೂಲೆಯ ಶ್ರೀ ಗುರು ಕಂಬಳೀಶ್ವರ ಮಠದಲ್ಲಿ ಶ್ರೀ ಇಮ್ಮಡಿ ಕಂಬಳೀಶ್ವರ ಮಹಾಸ್ವಾಮಿಗಳವರ ಸಂಸ್ಮರಣ ಶತಮಾನೋತ್ಸವ, ಶ್ರೀ ಸಿದ್ಧಲಿಂಗ ಸ್ವಾಮಿಗಳ 49ನೇ ಸಂಸ್ಮರಣೋತ್ಸವ, ಶ್ರೀ ಚನ್ನಬಸವ ಸ್ವಾಮಿಗಳವರ 80ನೇ ವರ್ಷದ ಗುರುವಂದನೆ ಹಾಗೂ ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳವರ ಆಶ್ರಮಾಧಿಕಾರ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಪೂಜ್ಯ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಆಲನಹಳ್ಳಿ, ಕನಕಪುರ ಮತ್ತು ಬೆಟ್ಟದಪುರದ ಮಠಗಳ ಶ್ರೀಗಳಿದ್ದಾರೆ (4 ಡಿಸೆಂಬರ್ 2023)



ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ನಂಜನಗೂಡು ತಾಲ್ಲೂಕು ಕಸುವಿನಹಳ್ಳಿ ಶ್ರೀ ಮೋರಂಬಾಳು ಗಂಗಾಧರೇಶ್ವರ ಪಟ್ಟದ ಮಠದ ಪಟ್ಟಾಧಿಕಾರ ಮಹೋತ್ಸವದಲ್ಲಿ ಪೂಜ್ಯರು ನೂತನ ಶ್ರೀಗಳಾದ ಶಿವಕುಮಾರ ಸ್ವಾಮಿಗಳನ್ನು ಆಶೀರ್ವದಿಸಿ ಸನ್ಮಾನಿಸಿದರು. ಮುಡಿಗುಂಡ, ದಂಡಿಕೆರೆ ಮತ್ತು ವಾಟಾಳು ಮಠಗಳ ಶ್ರೀಗಳಿದ್ದಾರೆ (7 ಡಿಸೆಂಬರ್ 2023)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಬಳಗದ 5ನೇ ವಾರ್ಷಿಕೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಜಿ.ಎಂ. ವಾಮದೇವ, ಶ್ರೀ ಗೊ.ರು. ಚನ್ನಬಸಪ್ಪ, ಡಾ. ಕೆ.ಆರ್. ದಾಕ್ಷಾಯಿಣಿ, ಶ್ರೀ ಅಂಶಿ ಪ್ರಸನ್ನಕುಮಾರ್, ಶ್ರೀ ಜಿ. ಶಿವಲಿಂಗಸ್ವಾಮಿ ಮೊದಲಾದವರುಗಳಿದ್ದಾರೆ (30 ಡಿಸೆಂಬರ್ 2023)



ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ನಡೆದ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಪುಣ್ಯಾರಾಧನೆಯಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳು ಆಶೀರ್ವಚನ ನೀಡುತ್ತಿರುವುದು. ಕು. ಹಾರಿಕಾ ಮಂಜುನಾಥ್, ಶ್ರೀ ಬಿ.ಎನ್. ಶಶಿಕಿರಣ್, ಶ್ರೀ ಶತಾವಧಾನಿ ಗಣೇಶ್ ಹಾಗೂ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರುಗಳಿದ್ದಾರೆ. (13 ಡಿಸೆಂಬರ್ 2023)



ಭಾಲ್ಕಿಯಲ್ಲಿ ಆಯೋಜಿಸಿದ್ದ ಡಾ. ಭೀಮಣ್ಣ ಖಂಡ್ರೆಯವರ ಜನ್ಮ ಶತಮಾನೋತ್ಸವವನ್ನು ಸುತ್ತೂರು, ಸಿರಿಗೆರೆ ಜಗದ್ಗುರುಗಳವರು ಹಾಗೂ ಮಠಾಧೀಶರುಗಳ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಬೈಲೂರು, ಹರಿಹರ ಮಠಗಳ ಶ್ರೀಗಳು, ಶ್ರೀ ಶಾಮನೂರು ಶಿವಶಂಕರಪ್ಪ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ವೀರಪ್ಪ ಮೊಯ್ಲಿ, ಶ್ರೀ ಈಶ್ವರ ಬಿ. ಖಂಡ್ರೆ, ಶ್ರೀ ಜಗದೀಶ್ ಶೆಟ್ಟರ್ ಮೊದಲಾದವರುಗಳಿದ್ದಾರೆ (2 ಡಿಸೆಂಬರ್ 2023)

Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 12, December 2023



ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org